ಬುಧವಾರ, ಮೇ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 137 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ವೈಫೈರ್' ಹೆಸರಿನ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಕಾಡ್ಗಿಚ್ಚು ನಿಯಂತ್ರಣ ತಂತ್ರಾಂಶ ವ್ಯವಸ್ಥೆಯನ್ನು ಅಮೆರಿಕದ ಅಗ್ನಿಶಾಮಕ ಸಿಬ್ಬಂದಿ ಬಳಸುತ್ತಿದ್ದಾರೆ.



ಆಳ-ಅಗಲ — ಪಠ್ಯದಲ್ಲಿ ಹೆಡಗೇವಾರ್ ಪರ-ವಿರೋಧದ ಪರಾಕಾಷ್ಠೆ

ಅರಮನೆ ಮಾಲೀಕತ್ವ: ರಾಜ್ಯದ ಅರ್ಜಿ ತಿರಸ್ಕಾರ 4

ಕಿರುತೆರೆ ನಟ ಅನುಮಾನಾಸ್ಪದ ಸಾವು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,318 ▲	16,259 ▲	₹52,220 (ಬೆಂಗಳೂರು) ▲	₹63,000 (ಬೆಂಗಳೂರು) ▲	77.44 ▲

1991ರ ಆಗಸ್ಟ್ ನಂತರದ ಗರಿಷ್ಠ ಮಟ್ಟ • ರೆಪೊ ದರ ಮತ್ತೆ ಏರಿಕೆ ಸಾಧ್ಯತೆ

ಸಗಟು ಹಣದುಬ್ಬರ ದಾಖಲೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇಕಡ 15.08ಕ್ಕೆ ತಲುಪಿದೆ. ಇಂಧನ, ವಿದ್ಯುತ್, ಕಚ್ಚಾ ಪೆಟ್ರೋಲಿಯಂ, ತರಕಾರಿ ಬೆಲೆಯು ಏಪ್ರಿಲ್‌ನಲ್ಲಿ ದೊಡ್ಡ ಮಟ್ಟದಲ್ಲಿ ಏರಿಕೆ ಕಂಡಿದ್ದು ಸಗಟು ಹಣದುಬ್ಬರ ಪ್ರಮಾಣದ ಹೆಚ್ಚಳಕ್ಕೆ ಪ್ರಮುಖ ಕಾರಣ.

2011-12ನೆಯ ವರ್ಷವನ್ನು ಮೂಲವಾಗಿ ಇರಿಸಿಕೊಂಡ ಈಗಿನ ಸರಣಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಈ ಮಟ್ಟದಲ್ಲಿ ದಾಖಲಾಗಿರುವುದು ಇದೇ ಮೊದಲು. ಹಿಂದಿನ ಹಣದುಬ್ಬರ ಸರಣಿಯನ್ನು ಕೂಡ ಪರಿಗಣಿಸಿ ಹೇಳುವುದಾದಲ್ಲಿ, ಏಪ್ರಿಲ್‌ನಲ್ಲಿ ದಾಖಲಾಗಿರುವ ಹಣದುಬ್ಬರವು ಮೂವತ್ತು ವರ್ಷಗಳ ಗರಿಷ್ಠ. 1991ರ ಆಗಸ್ಟ್‌ನಲ್ಲಿ ಈ ವರ್ಷದ ಏಪ್ರಿಲ್‌ಗಿಂತ ಹೆಚ್ಚಿನ (ಶೇ 16.06ರಷ್ಟು) ಸಗಟು ಹಣದುಬ್ಬರ ದಾಖಲಾಗಿತ್ತು.

ಸಗಟು ಹಣದುಬ್ಬರ ದರದ ಈ ಏರಿಕೆಯು ಆರ್‌ಬಿಐ ಮುಂದಿನ ತಿಂಗಳು ರೆಪೊ ದರವನ್ನು (ಬ್ಯಾಂಕ್‌ಗಳಿಗೆ ನೀಡುವ ಸಾಲಕ್ಕೆ ಆರ್‌ಬಿಐ ವಿಧಿಸುವ ಬಡ್ಡಿ) ಮತ್ತೆ ಹೆಚ್ಚಿಸುವ ಸಾಧ್ಯತೆಗೆ ಇನ್ನಷ್ಟು ಪುಷ್ಟಿ ನೀಡಿದೆ.

ಸಗಟು ಹಣದುಬ್ಬರ ಪ್ರಮಾಣವು ಸತತ 13 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಉಳಿದಿದೆ. ಸಗಟು ಹಣದುಬ್ಬರವು 1991ರ ಆಗಸ್ಟ್‌ನಲ್ಲಿ ಶೇ 16.06ರಷ್ಟು ದಾಖಲಾಗಿತ್ತು. ಅದಾದ ನಂತರದ ಗರಿಷ್ಠ ಪ್ರಮಾಣ ಏಪ್ರಿಲ್‌ನಲ್ಲಿ ದಾಖಲಾಗಿದೆ.

ಆಹಾರ, ಇಂಧನ ಮತ್ತು ತಯಾರಿಕಾ ವಲಯದಲ್ಲಿ ಹಣದುಬ್ಬರ ಪ್ರಮಾಣವು ಹೆಚ್ಚಾಗಿದೆ.


'ಏಪ್ರಿಲ್‌ನಲ್ಲಿ ತೀವ್ರ ಪ್ರಮಾಣದ ಹಣದುಬ್ಬರಕ್ಕೆ ಖನಿಜ ತೈಲ, ಮೂಲ ಲೋಹ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ವಸ್ತುಗಳು, ಆಹಾರೇತರ ವಸ್ತುಗಳು, ಆಹಾರ ಉತ್ಪನ್ನಗಳು, ರಾಸಾಯನಿಕಗಳು ಮತ್ತು ಅವುಗಳ ಉತ್ಪನ್ನಗಳ ಬೆಲೆಯಲ್ಲಿನ ಏರಿಕೆಯೇ ಮುಖ್ಯ ಕಾರಣ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಹೇಳಿದೆ.

10ನೇ ಪುಟ ನೋಡಿ

ಬೆಲೆ ಏರಿಕೆ ಎಷ್ಟು (%)

ತರಕಾರಿ	23.24
ಆಲೂಗಡ್ಡೆ	19.84
ಹಣ್ಣುಗಳು	10.89
ಗೋಧಿ	10.70
ತಯಾರಿಸಿದ ಉತ್ಪನ್ನಗಳು	10.85
ಎಣ್ಣೆಬೀಜಗಳು	16.10
ಇಂಧನ, ವಿದ್ಯುತ್	38.66
ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ	69.07

ಸಗಟು ಹಣದುಬ್ಬರ (%)



ಪ್ರಜಾವಾಣಿ ಗ್ರಾಫಿಕ್ಸ್

ಕುಸಿದ ಎಲ್‌ಐಸಿ ಷೇರು ಮೌಲ್ಯ

ಮುಂಬೈ/ನವದೆಹಲಿ (ಪಿಟಿಐ): ಷೇರು ಮಾರುಕಟ್ಟೆ ಅಸ್ಥಿರವಾಗಿದ್ದ ಕಾರಣದಿಂದ ಎಲ್‌ಐಸಿ ಷೇರು ಮೌಲ್ಯವು ಮಂಗಳವಾರ ಕುಸಿದಿದೆ, ಹೂಡಿಕೆದಾರರು ಷೇರುಗಳನ್ನು ದೀರ್ಘಾವಧಿಗೆ ತಮ್ಮಲ್ಲಿ ಇರಿಸಿಕೊಳ್ಳಬೇಕು ಎಂದು ಕೇಂದ್ರ ಸಾರ್ವಜನಿಕ ಆಸ್ತಿ ನಿರ್ವಹಣೆ ಮತ್ತು ಹೂಡಿಕೆ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಎಲ್‌ಐಸಿಯು ತನ್ನ ಷೇರುಗಳನ್ನು ₹ 949ಕ್ಕೆ ಹೂಡಿಕೆದಾರರಿಗೆ ನೀಡಿತ್ತು. ಷೇರುಗಳು ಮಂಗಳವಾರ ಷೇರುಪೇಟೆಗಳಲ್ಲಿ ₹ 872ರಂತೆ ವಹಿವಾಟು ಆರಂಭಿಸಿದವು. ಇದು ಎಲ್‌ಐಸಿ ಹೂಡಿಕೆದಾರರು ನೀಡಿದ್ದ ಬೆಲೆಗಿಂತ ಶೇಕಡ 8.11ರಷ್ಟು ಕಡಿಮೆ. ವಹಿವಾಟಿನ ಅಂತ್ಯಕ್ಕೆ ಷೇರು ಮೌಲ್ಯವು ₹ 875.25ಕ್ಕೆ ತಲುಪಿತು. ಇದು ಎಲ್‌ಐಸಿ ನೀಡಿದ್ದ ಬೆಲೆಗಿಂತ ಶೇ 7.77ರಷ್ಟು ಕಡಿಮೆ.

10ನೇ ಪುಟ ನೋಡಿ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಿರುವುದರಿಂದ ಮಂಗಳೂರಿನ ಹಳೆ ಬಂದರಿನ ದಕ್ಕೆಯಲ್ಲಿ ಮೀನುಗಾರಿಕಾ ಬೋಟ್‌ಗಳು ಮಂಗಳವಾರ ಲಂಗರು ಹಾಕಿದ್ದವು —ಪ್ರಜಾವಾಣಿ ಚಿತ್ರ/ಇರ್ಷಾದ್ ಮೊಹಮ್ಮದ್

ಸಿಡಿಲಿಗೆ ಇಬ್ಬರು ಸಾವು • ಭಟ್ಕಳದಲ್ಲಿ 4 ದೋಣಿಗಳಿಗೆ ಹಾನಿ

ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಮಂಗಳವಾರ ಬಹುತೇಕ ಮೋಡ ಕವಿದ ವಾತಾವರಣವಿದ್ದು, ಸೋಮವಾರ ರಾತ್ರಿ, ಮಂಗಳವಾರ ವಿವಿಧ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಹಳಿಯಾಳ ಸೇರಿ ವಿವಿಧೆಡೆ ಕೃಷಿ ಚಟುವಟಿಕೆಗಳು ಗರಿಗೆದರಿವೆ.

ರಾಜಧಾನಿ ಬೆಂಗಳೂರಿನಲ್ಲೂ ಜೋರು ಮಳೆ ಆಯಿತು. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನವೇ ಹಲವೆಡೆ ತುಂತುರು ಮಳೆ ಸುರಿಯಿತು. ಬಹುತೇಕ ಕಡೆ ಗುಡುಗು ಸಹಿತ ಮಳೆಯಾಗಿದ್ದು, ರಸ್ತೆಗಳಲ್ಲಿ ನೀರು ಉಕ್ಕಿ ಹರಿಯಿತು.

ಬೀದರ್, ಯಾದಗಿರಿಯಲ್ಲಿ ಸಿಡಿಲು ಬಡಿದು ತಲಾ ಒಬ್ಬರು ಕೃಷಿ ಕಾರ್ಮಿಕರು ಮೃತಪಟ್ಟರೆ, ಕಲಬುರಗಿಯಲ್ಲಿ ಒಬ್ಬರು ಗಾಯಗೊಂಡರು. ಈ ಭಾಗದಲ್ಲಿ ಸಿಡಿಲಿನಿಂದ ಎರಡು ಎತ್ತು, ಒಂದು ಹಸು, 30 ಮೇಕೆಗಳೂ ಮೃತಪಟ್ಟಿವೆ.

ಹಳೆ ಮೈಸೂರು ಭಾಗದ ಬಹುತೇಕ ಜಿಲ್ಲೆಗಳಲ್ಲಿ ಬಿರುಸಿನ ಮಳೆಯಾಗಿದೆ. ಜಿಲ್ಲಾ ಕೇಂದ್ರದಲ್ಲಿ ಬೋಗಾದಿ ಕೆರೆ ತುಂಬಿ ಕೋಡಿ ಬಿದ್ದಿತು. ನೀರಿನ ರಭಸಕ್ಕೆ ನಾಗಲಿಂಗೇಶ್ವರ ದೇಗುಲ ಸಮೀಪ ಲಿಂಗಾಂಬುಧಿ ಕೆರೆಗೆ ಸಂಪರ್ಕ ಬೆಸೆಯುವ ರಾಜಕಾಲುವೆ ಸೇತುವೆ ಕೊಚ್ಚಿಕೊಂಡು ಹೋಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಸರ್ಕಾರಿ ಶಾಲೆ ಆವರಣ ಜಲಾವೃತಗೊಂಡಿದ್ದು, ವಿದ್ಯಾರ್ಥಿಗಳು ಪರದಾಡಿದರು. ನಾಗಮಂಗಲ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕೆರೆ ಕಟ್ಟೆಗಳು ಭರ್ತಿಯಾಗಿ ಕೋಡಿ ಬಿದ್ದವು.

ಉತ್ತರ ಕರ್ನಾಟಕದ ಉತ್ತರಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನಲ್ಲಿ 4 ಮನೆಗಳಿಗೆ ಹಾನಿಯಾಗಿದೆ. ಭಟ್ಕಳ ಬಂದರಿನಲ್ಲಿ ತಡರಾತ್ರಿ ಸಮುದ್ರದ ಅಲೆಗಳಿಗೆ ಸಿಲುಕಿ ನಾಲ್ಕು ದೋಣಿಗಳಿಗೆ ಹಾನಿಯಾಗಿದೆ. ಒಂದು ದೋಣಿ ಸಂಪೂರ್ಣ ಮುಳುಗಿದೆ. ಹಾವೇರಿ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಭಾರಿ ಗಾಳಿ-ಮಳೆಗೆ ಒಟ್ಟು 78 ಮನೆಗಳಿಗೆ ಹಾನಿಯಾಗಿದೆ ಎಂದು ವರದಿ ತಿಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಕಾರಿಂಜೇಶ್ವರ ದೇವಸ್ಥಾನ ಬಳಿ ಬೆಟ್ಟದಿಂದ ಬೃಹತ್ ಬಂಡೆ ಉರುಳಿದ್ದು, ಇದರ ರಭಸಕ್ಕೆ ಹಲವು ಮರಗಳು ಉರುಳಿದವು. ಕಾರಿಂಜ ಬೈಲು ಮತ್ತು ರಥಬೀದಿ ಸಂಪರ್ಕ ರಸ್ತೆಯಲ್ಲಿ ಸಂಚಾರ ಸ್ಥಗಿತವಾಗಿತ್ತು.

ಉಡುಪಿ ಜಿಲ್ಲೆಯಲ್ಲಿ ಸಿಡಿಲು ಬಡಿದು ಮಹಿಳೆ ಗಾಯಗೊಂಡರು. ಕುಂದಾಪುರ, ಕಾರ್ಕಳ, ಬ್ರಹ್ಮಾವರದಲ್ಲಿ 15 ಮನೆಗಳಿಗೆ ಹಾನಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಇನ್ನಷ್ಟು ಸುದ್ದಿಗಳು 2, 5

ಗರಿಷ್ಠ ಮಳೆ*: ಎಲ್ಲಿ ಎಷ್ಟು?

ದಕ್ಷಿಣ ಕನ್ನಡ	
ಬಂಟ್ವಾಳ	19.1
ಅಮ್ಮಾಡಿ	19.1
ಅರಳ	14.8
ಉಡುಪಿ	
ಉಳಿಯಾರಗೋಳಿ	12.7
ಮೈಸೂರು	
ಟಿ.ನರಸೀಪುರ	12

*ಸೆಂ.ಮೀಗಳಲ್ಲಿ.

16 ಜಿಲ್ಲೆಗಳಲ್ಲಿ ಇಂದೂ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಇದೇ 18 ಮತ್ತು 19ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇರುವುದರಿಂದ 16 ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಮುಂದುವರಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ 18ರಂದು ಆರೆಂಜ್ ಅಲರ್ಟ್ ಹಾಗೂ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಇರಲಿದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಸಿದೆ.

ಮಳೆ-ಎಲ್ಲಿ, ಎಷ್ಟು?: ಮೂಡುಬಿದಿರೆ 11 ಸೆಂ.ಮೀ, ಮೈಸೂರು 9, ಶ್ರೀರಂಗಪಟ್ಟಣ, ಪಾಂಡವಪುರ 8, ಮಧುಗಿರಿ, ಮಳವಳ್ಳಿ 7, ಶಿಡ್ಲಘಟ್ಟ, ತೊಂಡೇಬಾವಿ, ಭದ್ರಾವತಿ, ಸಕಲೇಶಪುರ 6, ಮಂಗಳೂರು, ನಂಜನಗೂಡು 5, ಉಡುಪಿ, ಶಿರಸಿ, ಪುತ್ತೂರು, ಬೆಳ್ತಂಗಡಿ, ತಿಪಟೂರು, ಶಿರಾ 4, ಕುಂದಾಪುರ, ಕಡೂರು, ಕೊಪ್ಪ, ಹಿರಿಯೂರು, ದೊಡ್ಡಬಳ್ಳಾಪುರ, ಹುಣಸೂರು, ಚಿಂತಾಮಣಿ, ಚಿಕ್ಕಬಳ್ಳಾಪುರದಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ, ವಿಚಾರಣೆ ಮುಂದೂಡಿಕೆ

ಜ್ಞಾನವಾಪಿಯಲ್ಲಿ ನಮಾಜ್‌ಗೆ ಅವಕಾಶ

ನವದೆಹಲಿ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾಗುತ್ತಿರುವ ಜಾಗಕ್ಕೆ ರಕ್ಷಣೆ ನೀಡಿ ಮತ್ತು ಮುಸ್ಲಿಮರು ಮಸೀದಿಯಲ್ಲಿ ನಮಾಜ್ ಮಾಡಲು ಅವಕಾಶ ಮಾಡಿಕೊಡಿ ಎಂದು ವಾರಾಣಸಿ ಜಿಲ್ಲಾಡಳಿತಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಜ್ಞಾನವಾಪಿ ಮಸೀದಿಯಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು, ವಿಡಿಯೊ ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಕ್ಯಾಮೆರಾಮನ್ ಸೋಮವಾರ ಮಾಧ್ಯಮಗಳ ಎದುರು ಹೇಳಿದ್ದರು. ಅದರ ಬೆನ್ನಲ್ಲೇ ಶಿವಲಿಂಗ ಪತ್ತೆಯಾದ ಜಾಗಕ್ಕೆ ಪ್ರವೇಶ ನಿರ್ಬಂಧಿಸಿ ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯವು ಆದೇಶ ಹೊರಡಿಸಿತ್ತು. ಜ್ಞಾನವಾಪಿ ಮಸೀದಿ ನಿರ್ವಹಣಾ ಸಮಿತಿಯು ವಿಡಿಯೊ ಸಮೀಕ್ಷೆಗೆ ತಡೆ ನೀಡುವಂತೆ ಸುಪ್ರಿಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಸಮೀಕ್ಷೆಗೆ ತಡೆ ನೀಡಲು ಸುಪ್ರಿಂ ಕೋರ್ಟ್ ನಿರಾಕರಿಸಿತ್ತು. ಆದರೆ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡಿತ್ತು.

ಮಸೀದಿ ನಿರ್ವಹಣಾ ಸಮಿತಿಯು ಮಂಗಳವಾರದ ವಿಚಾರಣೆ ವೇಳೆ, 'ವಿಡಿಯೊ ಸಮೀಕ್ಷೆಗಾಗಿ ನೇಮಕ ಮಾಡಿದ್ದ ಕಮಿಷನ್, ಮುಚ್ಚಿದ ಲಕೋಟೆಯಲ್ಲಿ ತನ್ನ ವರದಿ ಸಲ್ಲಿಸಬೇಕಿತ್ತು. ಕಮಿಷನ್ ಇನ್ನೂ ತನ್ನ ವರದಿಯನ್ನು ಸಲ್ಲಿಸಿಲ್ಲ. ಆದರೆ ಅದಕ್ಕೂ ಮುನ್ನವೇ ಅರ್ಜಿದಾರರು, 'ಮಸೀದಿಯಲ್ಲಿ ಶಿವಲಿಂಗ ಪತ್ತೆಯಾಗಿದೆ. ಆ ಪ್ರದೇಶವನ್ನು ರಕ್ಷಿಸಿ, ಪೂಜೆಗೆ ಅವಕಾಶ ಸಲ್ಲಿಸಿ' ಎಂದು ಮತ್ತೊಂದು ಅರ್ಜಿ ಸಲ್ಲಿಸಿದರು. 'ನಮ್ಮ ವಾದವನ್ನು ಕೇಳದೆಯೇ, ಸಿವಿಲ್ ನ್ಯಾಯಾಲಯವು ಆದೇಶ ಹೊರಡಿಸಿದೆ. ಮಸೀದಿಯ ಒಂದು ಭಾಗಕ್ಕೆ ಪ್ರವೇಶವನ್ನು ನಿರ್ಬಂಧಿಸಿದೆ. ಇದು 1991ರ ಪೂಜಾಸ್ಥಳ (ವಿಶೇಷ ಅವಕಾಶಗಳು) ಕಾಯ್ದೆಯ ಉಲ್ಲಂಘನೆ. ಹೀಗಾಗಿ ಸಿವಿಲ್ ನ್ಯಾಯಾಲಯದಲ್ಲಿನ ಪ್ರಕ್ರಿಯೆಗೆ ತಡೆ ನೀಡಬೇಕು' ಎಂದು ಮನವಿ ಮಾಡಿದರು.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಮುಸ್ಲಿಮರು ನಮಾಜ್‌ಗೆ ಮೊದಲು ಶುದ್ಧೀಕರಣ ನಡೆಸುವ ಸ್ಥಳದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾಗುತ್ತಿದೆ. ಅಲ್ಲಿ ಯಾವುದೇ ಹಾನಿಯಾದರೆ ಅದರಿಂದ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಉದ್ಭವಿಸುತ್ತದೆ. ಮುಸ್ಲಿಮರು ಶುದ್ಧೀಕರಣವನ್ನು ಬೇರೆ ಜಾಗದಲ್ಲಿ ನಡೆಸಬಹುದು. ಆದರೆ ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾಗುತ್ತಿರುವ ಜಾಗವನ್ನು ರಕ್ಷಿಸಬೇಕು' ಎಂದು ತಮ್ಮ ವಾದವನ್ನು ಮಂಡಿಸಿದರು.

ಎರಡೂ ಕಡೆಯ ವಾದಗಳನ್ನು ಕೇಳಿದ ಪೀಠವು, 'ಹಿಂದೂಗಳ ಪರವಾಗಿ ಅರ್ಜಿ ಸಲ್ಲಿಸಿರುವವರ ಪರ ವಕೀಲರು ಇಲ್ಲಿಗೆ ಬರುವವರೆಗೂ ಈ ಮಧ್ಯಂತರ ಆದೇಶ ಜಾರಿಯಲ್ಲಿ ಇರಲಿದೆ. ಎರಡೂ ಕಡೆಯ ವಾದಿಗಳ ಹಕ್ಕುಗಳ ವಿಚಾರದಲ್ಲಿ ನಾವು ಸಮತೋಲನ ಸಾಧಿಸಬೇಕಿದೆ. ಹೀಗಾಗಿ ಶಿವಲಿಂಗ ಪತ್ತೆಯಾಗಿದೆ ಎಂದು ಹೇಳಲಾಗುತ್ತಿರುವ ಜಾಗವನ್ನು ರಕ್ಷಿಸಬೇಕು ಮತ್ತು ಮುಸ್ಲಿಮರ ಧಾರ್ಮಿಕ ಹಕ್ಕುಗಳಿಗೆ ಅಡ್ಡಿಯಾಗದಂತೆ, ನಮಾಜ್ ಮಾಡಲು ಹಾಗೂ ಧಾರ್ಮಿಕ ಆಚರಣೆಗಳಿಗೆ ಅವಕಾಶ ಮಾಡಿಕೊಡಲು ವಾರಾಣಸಿ ಜಿಲ್ಲಾಡಳಿತಕ್ಕೆ ಸೂಚಿಸುತ್ತೇವೆ' ಎಂದು ಪೀಠವು ಆದೇಶಿಸಿತು.

ಅರ್ಜಿಯ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದೆ.

ಇನ್ನೊಂದು ಸುದ್ದಿ 11

ನೀವು ಯಾರು?: ಅರ್ಜಿದಾರರಿಗೆ ಪ್ರಶ್ನೆ

ಜ್ಞಾನವಾಪಿ ಮಸೀದಿಯ ವಿಡಿಯೊ ಸಮೀಕ್ಷೆಗೆ ತಡೆ ನಿಡಬೇಕು ಎಂದು ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿಗೆ ತಡೆ ನೀಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದ 'ಹಿಂದು ಸೇನಾ' ಅಧ್ಯಕ್ಷ ವಿಷ್ಣು ಗುಪ್ತಾ ಅವರನ್ನು, 'ಈ ವಿಚಾರದಲ್ಲಿ ಅರ್ಜಿ ಸಲ್ಲಿಸಲು ನೀವು ಯಾರು? ನಿಮಗೇನು ಅಧಿಕಾರವಿದೆ?' ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

'ನಾನೊಬ್ಬ ಭಕ್ತ' ಎಂದು ವಿಷ್ಣುಗುಪ್ತಾ ಹೇಳಿದರು. ಅದನ್ನು ನಿರಾಕರಿಸಿದ ಸುಪ್ರೀಂ ಕೋರ್ಟ್ ಪೀಠವು, 'ಇದು ಸಿವಿಲ್ ವ್ಯಾಜ್ಯ. ಇದರಲ್ಲಿ ಮಧ್ಯಸ್ಥಿಕೆಯ ಅವಶ್ಯಕತೆ ಇಲ್ಲ ಎಂಬುದನ್ನು ನೀವು ತಿಳಿದುಕೊಳ್ಳಿ' ಎಂದು ಹೇಳಿತು.

ದಾಳಿಗೆ ಹೆದರಿ ₹ 1.50 ಕೋಟಿ ತಂದುಕೊಟ್ಟ!

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ದಡಿ ಬಂಧಿಸಲಾಗಿರುವ ಪೊಲೀಸ್ ನೇಮಕಾತಿ ವಿಭಾಗದ ನೌಕರ ಶ್ರೀಧರ್ ಮನೆ ಮೇಲೆ ಮಂಗಳವಾರವೂ ಸಿಐಡಿ ಅಧಿಕಾರಿಗಳು ದಾಳಿ ಮಾಡಿದ್ದು, ₹ 1.50 ಕೋಟಿ ನಗದು ಜಪ್ತಿ ಮಾಡಿದ್ದಾರೆ. 7

ಕಾರ್ತಿ ವಿರುದ್ಧ ಮತ್ತೆ ಪ್ರಕರಣ ದಾಖಲಿಸಿ ಶೋಧ ನಡೆಸಿದ ಸಿಬಿಐ

ಪ್ರಜಾವಾಣಿ ವಾರ್ತೆ

ನವದೆಹಲಿ/ಚೆನ್ನೈ: ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರ ವಿರುದ್ಧ ಸಿಬಿಐ ಮತ್ತೆ ಪ್ರಕರಣ ದಾಖಲಿಸಿಕೊಂಡಿದೆ. ₹50 ಲಕ್ಷ ಲಂಚ ಪಡೆದು ಚೀನಾದ 263 ಮಂದಿಗೆ 2011ರಲ್ಲಿ ವೀಸಾ ಕೊಡಿಸಿದ್ದರು ಎಂಬ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಚೀನಾದ ಈ ಮಂದಿ ಪಂಜಾಬ್‌ನ ಯೋಜನೆಯೊಂದರಲ್ಲಿ ಕೆಲಸ ಮಾಡಬೇಕಾಗಿತ್ತು ಎಂದು ಸಿಬಿಐ ಹೇಳಿದೆ. ಕಾರ್ತಿ ಅವರ ತಂದೆ ಪಿ.ಚಿದಂಬರಂ ಅವರು ಆಗ ಕೇಂದ್ರದಲ್ಲಿ ಗೃಹ ಸಚಿವರಾಗಿದ್ದರು.

ಪ್ರಕರಣ ದಾಖಲಿಸಿಕೊಂಡ ಬಳಿಕ, ಚಿದಂಬರಂ ಅವರ ಚೆನ್ನೈನ ನಿವಾಸ ಮತ್ತು ಕಾರ್ತಿ ಅವರಿಗೆ ಸಂಬಂಧಿಸಿದ ಎಂಟು ಸ್ಥಳಗಳಲ್ಲಿ ಸಿಬಿಐ ಮಂಗಳವಾರ ಶೋಧ ನಡೆಸಿದೆ. ಲಂಚ ಪಡೆದು ವೀಸಾ ನೀಡಿದ್ದು ಐಎನ್‌ಎಕ್ಸ್ ಮೀಡಿಯಾ ಮತ್ತು ಏರ್‌ಸೆಲ್-ಮ್ಯಾಕ್ಸಿಸ್ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಅಧಿಕಾರಿಗಳ ಗಮನಕ್ಕೆ ಬಂತು ಎಂದು ಮೂಲಗಳು ಹೇಳಿವೆ.

ಕಾರ್ತಿ ಅವರು ವಿದೇಶಕ್ಕೆ ಹೋಗಿದ್ದಾರೆ ಎನ್ನಲಾಗಿದೆ. ಟ್ವೀಟ್ ಮೂಲಕ ಅವರು ಪ್ರತಿಕ್ರಿಯೆ ನೀಡಿದ್ದಾರೆ. 'ಇದು (ಶೋಧ) ಎಷ್ಟು ಬಾರಿ ನಡೆದಿದೆ ಎಂಬುದರ ಲೆಕ್ಕವೇ ಇಲ್ಲ. ಇದು ದಾಖಲೆಯೇ ಇರಬೇಕು' ಎಂದು ವ್ಯಂಗ್ಯವಾಡಿದ್ದಾರೆ.

ಚೀನಾದ ಕಂಪನಿಯೊಂದಕ್ಕೆ ನೀಡಲಾಗಿದ್ದ ತಲವಂಡಿ ಸಾಬೊ ಉಷ್ಣ ವಿದ್ಯುತ್ ಯೋಜನೆಯ ಕೆಲಸವು ವಿಳಂಬವಾಗಿತ್ತು. ಹಾಗಾಗಿ ಕೆಲಸ ಮಾಡಲು ಚೀನಾದಿಂದ ಇನ್ನಷ್ಟು ಜನರನ್ನು ಕರೆತರಬೇಕಿತ್ತು. ಆದರೆ, ವಿದೇಶಿಯರನ್ನು ಕರೆತರುವುದಕ್ಕೆ ಮಿತಿ ಇತ್ತು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'ಆಗಿನ ಗೃಹ ಕಾರ್ಯದರ್ಶಿ ಮತ್ತು ಗೃಹ ಸಚಿವರಿಗೆ ಈ ವಿಷಯದ ಬಗ್ಗೆ ಗೊತ್ತಿದೆ ಎಂದು ಭಾವಿಸಲು ಕಾರಣಗಳಿವೆ. ಆದರೆ, ಅವರಿಗೆ ತಿಳಿದಿತ್ತೇ ಎಂಬುದನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿಲ್ಲ' ಎಂದೂ ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಶೋಧದ ಸಮಯವು ಆಸಕ್ತಿದಾಯಕವಾಗಿದೆ ಎಂದು ಚಿದಂಬರಂ ಹೇಳಿದ್ದಾರೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಸುಧಾ, ಮಯೂರ ಓದಿ







1. ಬೆಂಗಳೂರಿನ ನಾಯಂಡಹಳ್ಳಿ ಬಳಿ ಇರುವ ಪ್ರಮೋದ್ ಲೇಔಟ್‌ನಲ್ಲಿ ಮಳೆಗೆ ರಸ್ತೆಯಲ್ಲಿ ತುಂಬಿದ ನೀರು 2. ಅಪಾರ್ಟ್‌ಮೆಂಟ್‌ವೊಂದರ ಪಾರ್ಕಿಂಗ್ ಒಳಗೂ ನೀರು 3. ಶಾಂತಿನಗರ ಬಸ್ ನಿಲ್ದಾಣದ ಬಳಿಯ ಕೆ. ಎಚ್ ರಸ್ತೆಯಲ್ಲಿ ತುಂಬಿಕೊಂಡಿದ್ದ ಮಳೆ ನೀರಿನಲ್ಲೇ ಮಹಿಳೆಯೊಬ್ಬರು ಮಗುವನ್ನು ಹಿಡಿದು ಸಾಗಿದರು – ಪ್ರಜಾವಾಣಿ ಚಿತ್ರಗಳು/ರಂಜು.ಪಿ, ಎಂ.ಎಸ್‌ಮಂಜುನಾಥ್

ಮಳೆ ಅಬ್ಬರ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಸಂಜೆಯಿಂದ ರಾತ್ರಿಯವರೆಗೂ ಅಬ್ಬರದ ಮಳೆ ಸುರಿದಿದ್ದು, 100ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಪ್ರಮುಖ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಹಲವು ದಿನಗಳಿಂದ ಬಿಡುವು ಕೊಡುತ್ತಲೇ ನಗರದಲ್ಲಿ ಜೋರು ಮಳೆ ಸುರಿಯುತ್ತಿದ್ದು, ಸಿಡಿಲು ಹಾಗೂ ಗುಡುಗಿನ ಸದ್ದು ಜೋರಾಗಿದೆ.

ಬಹುತೇಕ ಪ್ರದೇಶಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿತ್ತು. ಮಂಗಳವಾರ ಮಧ್ಯಾಹ್ನ ತುಂತುರು ಮಳೆ ಆರಂಭವಾಗಿ, ಕ್ರಮೇಣ ಜೋರಾಗಿ ಸುರಿಯಿತು. ಸಂಜೆಯವರೆಗೂ ಬಿಡುವು ಕೊಟ್ಟಿದ್ದ ಮಳೆ, ನಂತರ ತನ್ನ ಆರ್ಭಟ ಮುಂದುವರಿಸಿತು. ಸಂಜೆಯಿಂದ ರಾತ್ರಿ 10 ಗಂಟೆವರೆಗೂ ಜೋರು ಮಳೆ ಸುರಿಯಿತು.

ಬಸವೇಶ್ವರನಗರ, ಕುರುಬರಹಳ್ಳಿ, ಜಯನಗರ 3ನೇ ಹಂತ, ಶಿವಾಜಿನಗರದ ಶಿವಾಜಿ ರಸ್ತೆ, ಜೆ.ಸಿ.ನಗರ ಹಾಗೂ ಜಗಜೀವನ್‌ರಾಮ್ ನಗರದ 100ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತು. ಇದರಿಂದಾಗಿ ನಿವಾಸಿಗಳು ತೊಂದರೆ ಅನುಭವಿಸಿದರು.

ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಕಾಲುವೆಗಳಲ್ಲಿ ನೀರು ತುಂಬಿ ಹರಿದು, ಮನೆಗಳಿಗೆ ನುಗ್ಗಿತು.



ಪ್ರಮೋದ್ ಲೇಔಟ್‌ನಲ್ಲಿ ಮನೆಯೊಳಗೆ ನುಗ್ಗಿದ ನೀರು –ಪ್ರಜಾವಾಣಿ ಚಿತ್ರ

ಪೀಠೋಪಕರಣ ಹಾಗೂ ಇತರೆ ವಸ್ತುಗಳನ್ನು ನೀರಿನಲ್ಲಿ ತೇಲಿ ಹೋದವು. ಮಳೆ ಕಡಿಮೆಯಾದ ನಂತರ, ಮನೆಯೊಳಗೆ ನುಗ್ಗಿದ್ದ ನೀರನ್ನು ಹೊರ ಹಾಕುವಲ್ಲಿ ನಿವಾಸಿಗಳು ನಿರತರಾಗಿದ್ದರು. ಕೆಲವರು, ತೇಲಿಹೋದ ವಸ್ತುಗಳಿಗಾಗಿ ಹುಡುಕಾಟ ನಡೆಸಿದರು.

'ಮಂಗಳವಾರ ಸಂಜೆಯಿಂದ ರಾತ್ರಿಯವರೆಗೂ ನಗರದಲ್ಲಿ ಉತ್ತಮ ಮಳೆ ಆಗಿದೆ. ಮನೆಗಳಿಗೆ ನೀರು ನುಗ್ಗಿದ ಬಗ್ಗೆ ಹೆಚ್ಚು ದೂರುಗಳು ಬಂದಿದ್ದವು. ಸಂಬಂಧಪಟ್ಟ ವಲಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಸಿಬ್ಬಂದಿ ಸ್ಥಳಕ್ಕೆ ಹೋಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಹಾಗೂ ಮರದ ಕೊಂಬೆಗಳು ಬಿದ್ದಿದ್ದ ಬಗ್ಗೆಯೂ ದೂರುಗಳು ಬಂದಿವೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ರಸ್ತೆಯಲ್ಲಿ ಹೊಳೆಯಂತೆ ಹರಿದ ನೀರು: ಜೋರು ಮಳೆಯಿಂದಾಗಿ ಸಂಗ್ರಹವಾದ ನೀರು ನಗರದ ಹಲವು ರಸ್ತೆಗಳಲ್ಲಿ ಧಾರಾಕಾರವಾಗಿ ಹರಿಯಿತು.

ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಗಿರಿನಗರ, ಹೊಸಕೆರೆಹಳ್ಳಿ, ಹನುಮಂತನಗರ, ಚಾಮರಾಜಪೇಟೆ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಶೇಷಾದ್ರಿಪುರ, ಮಲ್ಲೇಶ್ವರ, ಶೇಷಾದ್ರಿಪುರ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ಗೊರಗುಂಟೆಪಾಳ್ಯ ಹಾಗೂ ಸುತ್ತಮುತ್ತ ಮಳೆ ಜೋರಾಗಿತ್ತು.

ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕ ನಗರ, ಕಮರ್ಷಿಯಲ್ ಸ್ಟ್ರೀಟ್, ಕೋರಮಂಗಲ, ವಿವೇಕನಗರ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಮತ್ತು ಸುತ್ತಮುತ್ತ ಪ್ರದೇಶಗಳಲ್ಲೂ ಉತ್ತಮ ಮಳೆ ಆಯಿತು. ಮೆಜೆಸ್ಟಿಕ್ ರೈಲ್ವೆ ಕೆಳಸೇತುವೆ, ಶಿವಾನಂದ ವೃತ್ತ, ಬ್ಯಾಟರಾಯನಪುರ ಮೇಲ್ಸೇತುವೆ, ಸ್ಯಾಟಲೈಟ್ ಬಸ್ ನಿಲ್ದಾಣ ಎದುರು ಸೇರಿದಂತೆ ಹಲವೆಡೆ ನೀರು ಹೆಚ್ಚಿನ ಪ್ರಮಾಣದಲ್ಲಿತ್ತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದ ದೃಶ್ಯಗಳೂ ಕಾಣಿಸಿದವು. ಅಂಥ ವಾಹನಗಳನ್ನು ಸ್ಥಳೀಯರೇ ತಳ್ಳಿ, ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.

ಚಿಕ್ಕಪೇಟೆ, ಸುಲ್ತಾನ್ ಪೇಟೆ, ಬಿವಿಕೆ ಅಯ್ಯಂಗಾರ್ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಎರಡು ಅಡಿಯಷ್ಟು ನೀರು ಹರಿಯಿತು. ವಾಹನಗಳ ಸಂಚಾರ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಯಿತು.

ಮಳೆ ಹೆಚ್ಚಿದ್ದರಿಂದ ರಸ್ತೆಯ ಅಕ್ಕ-ಪಕ್ಕದಲ್ಲಿ ವಾಹನ ನಿಲ್ಲಿಸಿದ್ದ ಸವಾರರು, ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು.

ವಸತಿ ಪ್ರದೇಶದಲ್ಲಿ ಮುಳುಗಿದ ವಾಹನಗಳು: ಕುಮಾರಸ್ವಾಮಿ ಲೇಔಟ್, ಜೆ.ಪಿ.ನಗರ ಹಾಗೂ ಪುಟ್ಟೇನಹಳ್ಳಿಯ ಕೆಲ ಪ್ರದೇಶಗಳಲ್ಲಿ ವಸತಿ ಪ್ರದೇಶಗಳ ರಸ್ತೆಗಳಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿಯಿತು. ನಿವಾಸಿಗಳ ದ್ವಿಚಕ್ರ ವಾಹನ ಹಾಗೂ ಕಾರುಗಳು ನೀರಿನಲ್ಲಿ ಮುಳಗಿದ್ದು ಕಂಡುಬಂತು.

ಕಾರ್ಮಿಕರ ಶೆಡ್ ಮೇಲೆ ಕುಸಿದ ಗೋಡೆ

ಸೋಮವಾರವೂ ನಗರದಲ್ಲಿ ಜೋರು ಮಳೆ ಆಗಿತ್ತು. ಕೊಡಿಗೇಹಳ್ಳಿ ಬಳಿ ಮಧ್ಯಾಹ್ನ 4.30ರ ಸುಮಾರಿಗೆ ಗೋಡೆ ಕುಸಿದು ಹಾನಿ ಸಂಭವಿಸಿದೆ.

'ಬಿಬಿಎಂಪಿ ಪೌರ ಕಾರ್ಮಿಕರ ಕುಟುಂಬಗಳು, ಶೆಡ್ ನಿರ್ಮಿಸಿಕೊಂಡು ವಾಸವಿದ್ದರು. ಶೆಡ್‌ಗೆ ಹೊಂದಿಕೊಂಡ ಜಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಲಾಗಿದೆ. ಮಳೆ ಜೋರಾಗಿದ್ದರಿಂದ ಗೋಡೆ ಕುಸಿದು, ಶೆಡ್‌ಗಳ ಮೇಲೆ ಬಿದ್ದಿದೆ. ಇದರಿಂದಾಗಿ, 25 ಶೆಡ್‌ಗಳಿಗೆ ಹಾನಿಯಾಗಿದೆ. ಕೆಲ ಶೆಡ್‌ಗಳು ಸಂಪೂರ್ಣವಾಗಿ ನೆಲಸಮವಾಗಿವೆ' ಎಂದು ಪೌರ ಕಾರ್ಮಿಕ ಬಾಲರಾಜು ತಿಳಿಸಿದರು.

'ಮಕ್ಕಳು, ವೃದ್ಧರ ಜೊತೆ ಕಾರ್ಮಿಕರು ಶೆಡ್‌ನಲ್ಲಿದ್ದರು. ಇದೀಗ ಶೆಡ್ ಖಾಲಿ ಮಾಡಿ, ಬೇರೆಡೆ ಹೋಗಿದ್ದಾರೆ. ಪುನಃ ಮಳೆ ಬಂದರೆ ಏನಾಗುತ್ತದೆ ಎಂಬ ಆತಂಕ ಇತರೆ ಶೆಡ್‌ನಲ್ಲಿರುವ ಕಾರ್ಮಿಕರನ್ನು ಕಾಡುತ್ತಿದೆ' ಎಂದೂ ಹೇಳಿದರು.

ವಲಯಕ್ಕೊಬ್ಬ ಮೇಲ್ವಿಚಾರಕರ ನೇಮಕ: ತುಷಾರ್ ಸೂಚನೆ

ಬೆಂಗಳೂರು: ಮಳೆಗಾಲದಲ್ಲಿ ಪರಿಸ್ಥಿತಿ ನಿಭಾಯಿಸಲು ರಾಜ್ಯ ವಿಪತ್ತು ಸ್ಪಂದನಾ ದಳದಿಂದ (ಎಸ್‌ಡಿಆರ್‌ಎಫ್) ಬಿಬಿಎಂಪಿಯ 8 ವಲಯಗಳಿಗೂ ಒಬ್ಬೊಬ್ಬ ಮೇಲ್ವಿಚಾರಕರನ್ನು ನಿಯೋಜಿಸಬೇಕು. ಆಯಾ ವಲಯದ ಜಂಟಿ ಆಯುಕ್ತರ ಜೊತೆ ಸಮನ್ವಯ ಕಾಪಾಡಿಕೊಂಡು ಅವರು ಕಾರ್ಯನಿರ್ವಹಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಸ್‌ಡಿಆರ್‌ಎಫ್‌ನ ಉಪನಿರ್ದೇಶಕರಿಗೆ ಸೂಚನೆ ನೀಡಿದರು.

ನಗರದಲ್ಲಿ ಮಳೆಗಾಲದಲ್ಲಿ ಅನಾಹುತ ಸಂಭವಿಸುವುದನ್ನು ತಪ್ಪಿಸುವ ಕುರಿತು ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು ವಲಯ ಮಟ್ಟದಲ್ಲಿ ಸ್ವಯಂ ಸೇವಕ ತಂಡಗಳನ್ನು ಗುರುತಿಸಿ ಸಕ್ರಿಯಗೊಳಿಸಬೇಕು ಎಂದರು.

' ಮಳೆಗಾಲದಲ್ಲಿ ಸಮಸ್ಯೆ ಉಂಟಾಗುವ ಸಂದರ್ಭದಲ್ಲಿ ನೆರವು ಒದಗಿಸುವ ಸಿಬ್ಬಂದಿಯ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಬೇಕು' ಎಂದರು

'ಗ್ರಾಹಕರಿಗೆ ಕನ್ನಡದಲ್ಲಿಯೇ ಸೇವೆ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಇಲ್ಲಿ ನೆಲೆಸಿರುವ ಕನ್ನಡಿಗರೆಲ್ಲರಿಗೂ ಕನ್ನಡದಲ್ಲಿ ಮಾಹಿತಿ ಹಾಗೂ ಸೇವೆ ಒದಗಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಭಾರತೀಯ ಸ್ಟೇಟ್ ಬ್ಯಾಂಕಿನ (ಎಸ್‌ಬಿಐ) ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ಮಂಗಳವಾರ ನಡೆಸಿದ ಅವರು, 'ಚೆಕ್‌ಗಳು, ಚಲನ್‌ಗಳು, ಪಾಸ್‌ಬುಕ್ ಮುದ್ರಣ, ಎಟಿಎಂ ಕೇಂದ್ರಗಳು ಸೇರಿದಂತೆ ವಿವಿಧೆಡೆ ಕನ್ನಡ ಭಾಷೆಯ ಆಯ್ಕೆ ನೀಡದಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಕರ್ನಾಟಕದ ಸಂಪನ್ಮೂಲಗಳನ್ನು ಬಳಸಿಕೊಂಡು ವ್ಯವಹಾರ ನಡೆಸುತ್ತಿರುವ ಬ್ಯಾಂಕ್, ಕನ್ನಡಿಗರಿಗೆ ಕನ್ನಡದಲ್ಲಿಯೇ ಸೇವೆ ಒದಗಿಸಬೇಕು' ಎಂದು ಸೂಚಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಯುಕೋ ಬ್ಯಾಂಕಿನ ನಿವೃತ್ತ ಅಧಿಕಾರಿ ನಾಗೇಶ್, ಕೆನರಾ ಬ್ಯಾಂಕಿನ ವ್ಯವಸ್ಥಾಪಕ ಮುರಳಿಧರ್, ಭಾರತೀಯ ಸ್ಟೇಟ್ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕ ನಂದ್ ಕಿಶೋರ್ ಇದ್ದರು.

'ಇ–ಇಂಡೆಂಟ್ ಸಮಸ್ಯೆ ನಿವಾರಣೆಗೆ ಕ್ರಮ'

ಬೆಂಗಳೂರು: ಮದ್ಯ ಮಾರಾಟಗಾರರ ಸಮಸ್ಯೆಗಳ ನಿವಾರಣೆಗೆ ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಮನವಿ ಮೇರೆಗೆ ಇ-ಇಂಡೆಂಟಿಂಗ್‌ನಿಂದ ಉಂಟಾಗಿರುವ ಸಮಸ್ಯೆ ಕುರಿತು ಅಬಕಾರಿ ಆಯುಕ್ತರ ಕಚೇರಿಯಲ್ಲಿ ಸಭೆ ನಡೆಸಿದ ಅವರು, 'ಮದ್ಯ ಮಾರಾಟಗಾರರು ಎದುರಿಸುತ್ತಿರುವ ಇ-ಇಂಡೆಂಟಿಂಗ್ ಸಮಸ್ಯೆ ನಿವಾರಣೆಗೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು. 'ಸಮಸ್ಯೆ ಬಗೆಹರಿಸುವುದಾಗಿ ಸಚಿವರು ಭರವಸೆ ನೀಡಿದ್ದರಿಂದ ಮುಷ್ಕರ ಹಿಂಪಡೆಯಲಾಗಿದೆ' ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ಹೆಗ್ಡೆ ತಿಳಿಸಿದರು.

ದೇವೇಗೌಡರ ಹುಟ್ಟುಹಬ್ಬ: ₹1ಕ್ಕೆ ಊಟ–ಉಪಾಹಾರ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ 90ನೇ ಹುಟ್ಟುಹಬ್ಬದ ಅಂಗವಾಗಿ 'ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್'ನಲ್ಲಿ ಬುಧವಾರ ₹1ಕ್ಕೆ ಊಟ –ಉಪಾಹಾರ ದೊರೆಯಲಿದೆ.

ಮುಖಂಡ ನಿಖಿಲ್ ಕುಮಾರಸ್ವಾಮಿ, ವಕ್ತಾರ ಟಿ.ಎ.ಶರವಣ ಅವರು ಮಧ್ಯಾಹ್ನ 12ಕ್ಕೆ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಅಪ್ಪಾಜಿ ಕ್ಯಾಂಟೀನ್ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಪರಿಷತ್ ಚುನಾವಣೆ: ಇದೇ 24 ನಾಮಪತ್ರ ಸಲ್ಲಿಕೆಗೆ ಕಡೇ ದಿನ

ಬೆಂಗಳೂರು: ವಿಧಾನಪರಿಷತ್‌ನ ಏಳು ಸ್ಥಾನಗಳಿಗಾಗಿ ಜೂನ್ 3 ರಂದು ನಡೆಯುವ ಚುನಾವಣೆಗೆ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದೆ.

ನಾಮಪತ್ರ ಸಲ್ಲಿಸಲು ಮೇ 24 ಕಡೆಯ ದಿನವಾಗಿದೆ. ಮೇ 25 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಮೇ 27 ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿದ್ದು, ಜೂನ್ 3 ರಂದು ಅಗತ್ಯವಿದ್ದರೆ ಮತದಾನ ನಡೆಯಲಿದೆ.

ಇ.ವಿ ಚಾರ್ಜಿಂಗ್ ಆದಾಯ ಹಂಚಿಕೆ ಆದೇಶ

ಬೆಂಗಳೂರು: ಸರ್ಕಾರಿ ಸಂಸ್ಥೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳಿಂದ ವಿದ್ಯುತ್ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಸ್ಥಳ ಒದಗಿಸುವ ಸರ್ಕಾರಿ ಇಲಾಖೆಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ₹1 ನೀಡಲು ಅನುಮೋದನೆ ನೀಡಲಾಗಿದೆ.

ಇದಕ್ಕಾಗಿ ಪಿಪಿಪಿ ಮಾದರಿಯಲ್ಲಿ ಕರೆಯುವ ಟೆಂಡರ್‌ನಲ್ಲಿ ಕನಿಷ್ಠ ಮಿತಿ ಯೂನಿಟ್ ಮೇಲೆ ₹1 ಆದಾಯ ಹಂಚಿಕೆಗೆ ಅನುಮೋದನೆ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಉಲ್ಲಾಳದಿಂದ ಕೆಂಗೇರಿಗೆ ಸಂಪರ್ಕ ಬೆಸೆಯುವ 100 ಅಡಿ ರಸ್ತೆಯ ದುಸ್ಥಿತಿ

ಗುಂಡಿ ಬಿದ್ದ ರಸ್ತೆ: ಮೈಮರೆತರೆ ಸಂಚಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಣು ಹಾಯಿಸಿದಷ್ಟೂ ದೂರ ಕಾಣುವ ಗುಂಡಿಗಳು. ಅವುಗಳಲ್ಲಿ ಸಂಗ್ರಹವಾಗಿರುವ ಕೆಮ್ಮಣ್ಣಿನ ನೀರು. ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿರುವ ಜಲ್ಲಿಕಲ್ಲು. ರಸ್ತೆ ಮಧ್ಯೆಯೇ ಹರಡಿಕೊಂಡಿರುವ ಕೆಸರಿನ ರಾಡಿ...

ಉಲ್ಲಾಳದಿಂದ ಕೆಂಗೇರಿಗೆ ಸಂಪರ್ಕ ಬೆಸೆಯುವ 100 ಅಡಿ ರಸ್ತೆಯ ದುಸ್ಥಿತಿ ಇದು.

ಕೆಂಗೇರಿ, ಕೆಂಗೇರಿ ಉಪನಗರ, ಮಂಗನಹಳ್ಳಿ, ಉಲ್ಲಾಳ, ಸರ್.ಎಂ.ವಿ-ಶ್ವೇಶ್ವರಯ್ಯ ಬಡಾವಣೆ, ಉಪಕಾರ್ ಬಡಾವಣೆ, ಉಲ್ಲಾಳ ಬಸ್ತಿ, ದೊಡ್ಡ ಬಸ್ತಿ, ಮಾರುತಿನಗರ, ಮಾಗಡಿ ರಸ್ತೆ, ಬ್ಯಾಡರಹಳ್ಳಿ ಸೇರಿದಂತೆ ಇತರೆಡೆ ಹೋಗುವವರು ಈ ರಸ್ತೆಯನ್ನೇ ಅವಲಂಬಿಸಿದ್ದಾರೆ. ಹೀಗಾಗಿ ಈ ಮಾರ್ಗದಲ್ಲಿ ನಿತ್ಯ ನೂರಾರು ವಾಹನಗಳು ಬಿಡುವಿಲ್ಲದೆ ಓಡಾಡುತ್ತವೆ. ಶಾಲೆ, ಕಾಲೇಜುಗಳಿಗೆ ಹೋಗುವವರೂ ಇದೇ ಹಾದಿಯಲ್ಲಿ ಸಾಗಬೇಕು.

ರಸ್ತೆ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ ಮೈಯೆಲ್ಲಾ ಕಣ್ಣಾಗಿಸಿ ಕೊಂಡೇ ವಾಹನ ಚಲಾಯಿಸಬೇಕು! ಎಚ್ಚರ ತಪ್ಪಿದರೆ ಅಪಾಯ ಎದುರಾಗುವುದು ನಿಶ್ಚಿತ.

‘ಸುಮಾರು 4 ಕಿ.ಮೀ.ವರೆಗೂ ರಸ್ತೆ ಹಾಳಾಗಿದೆ. ರಸ್ತೆಯ ಇಕ್ಕೆಲಗಳಲ್ಲಿ ಗಿಡಗಂಟಿಗಳು ಬೆಳೆದುಕೊಂಡಿವೆ. ಅಲ್ಲಲ್ಲಿ ಕಟ್ಟಡ ಹಾಗೂ ಇತರ ತ್ಯಾಜ್ಯವನ್ನು ಸುರಿಯಲಾಗಿದೆ. ಗುಂಡಿ ತಪ್ಪಿಸುವ ಭರದಲ್ಲಿ ದ್ವಿಚಕ್ರ ವಾಹನ ಸವಾರರು ಲೆಕ್ಕವಿಲ್ಲದಷ್ಟು ಬಾರಿ ಬಿದ್ದು ಗಾಯಗೊಂಡಿದ್ದಾರೆ. ಹೀಗಿದ್ದರೂ ರಸ್ತೆ ದುರಸ್ತಿಗೊಳಿಸುವ ಕೆಲಸ ಆಗಿಲ್ಲ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ವಾರದಿಂದ ಬಿಡದೆ ಮಳೆ ಸುರಿದ ಕಾರಣ ಗುಂಡಿಗಳಿಗೆ ತುಂಬಿದ್ದ ಮಣ್ಣೆಲ್ಲಾ ಕೊಚ್ಚಿಕೊಂಡು ಬಂದು ರಸ್ತೆಯ ಮಧ್ಯದಲ್ಲೇ ಹರಡಿಕೊಂಡಿವೆ. ಗುಂಡಿಗಳು ಈಗ ಹೊಂಡದಂತಾಗಿವೆ’ ಎಂದು ವಿಶ್ವೇಶ್ವರಯ್ಯ ಬಡಾವಣೆಯ ಶ್ರೀನಿವಾಸ್ ದೂರಿದರು.

‘ತಿಂಗಳ ಹಿಂದೆ ಅಪಘಾತವೊಂದರಲ್ಲಿ ಬೈಕ್ ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದರು. ಗುಂಡಿಗಳಿಂದಾಗಿ ರಸ್ತೆಯಲ್ಲಿ ಅಪಘಾತಗಳಾಗುವುದು ಸಾಮಾನ್ಯವಾಗಿಬಿಟ್ಟಿದೆ. ಸಮಸ್ಯೆಯ ತೀವ್ರತೆಯ ಅರಿವಿದ್ದರೂ ಅಧಿಕಾರಿಗಳು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ಕರೆದು ಕೊಂಡು ಹೋಗಲು ಭಯಪಡುವಂತಹ ವಾತಾವರಣ ನಿರ್ಮಾಣವಾಗಿದೆ’ ಎಂದು ಉಲ್ಲಾಳ ಬಸ್ತಿಯ ನವಾಜ್ ಕಿಡಿಕಾರಿದರು.

‘ಒಳಚರಂಡಿ ವ್ಯವಸ್ಥೆ ಸರಿಯಾಗಿ ಮಾಡಿಲ್ಲ. ಮಳೆ ನೀರೆಲ್ಲಾ ರಸ್ತೆ ಯಲ್ಲೇ ನಿಂತುಕೊಳ್ಳುತ್ತದೆ. ಹೊಳೆಯಂತಾಗುವ ರಸ್ತೆಯಲ್ಲಿ ಅನೇಕರು ಬೈಕ್ ಚಲಾಯಿಸಿಕೊಂಡು ಹೋಗುತ್ತಾರೆ. ಗುಂಡಿ ಕಾಣದೆ ರಸ್ತೆಯಲ್ಲೇ ಉರುಳಿಬಿದ್ದ ನಿದರ್ಶನಗಳೂ ಇದೆ. ಬೇಸಿಗೆಯಲ್ಲಿ ಸುರಿದ ಮಳೆಗೆ ಹೀಗಾದರೆ, ಮಳೆಗಾಲ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಊಹಿಸಿಕೊಳ್ಳುವುದೂ ಕಷ್ಟ’ ಎಂದು ಉಲ್ಲಾಳದ ರಮೇಶ್ ಕಿಡಿಕಾರಿದರು.



ಉಲ್ಲಾಳದ ಸಾಯಿ ಬಾಬಾ ಮಂದಿರದ ಬಳಿಯ ರಸ್ತೆ ಹಳ್ಳದಂತಾಗಿರುವುದು ಪ್ರಜಾವಾಣಿ ಚಿತ್ರಗಳು/ ರಂಜು ಪಿ



ನಗರದ ಉಲ್ಲಾಳ ಹೊರವರ್ತುಲ ರಸ್ತೆಯ ಉಪಕಾರ್ ಬಡಾವಣೆ ವೃತ್ತದಲ್ಲಿ ಮಳೆಯಿಂದ ರಸ್ತೆ ಸಂಪೂರ್ಣ ಹಾಳಾಗಿರುವ ದೃಶ್ಯ ಮಂಗಳವಾರ ಕಂಡುಬಂತು

ಯಶವಂತಪುರ ಕ್ಷೇತ್ರ: ಜನಸ್ಪಂದನ 21ರಂದು

ಜನಸ್ಪಂದನ — ಸಿಟಿಜನ್ಸ್ ಫಾರ್ ಚೇಂಜ್

ನೀವು ಯಶವಂತಪುರ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ನಿಮ್ಮ ಮನೆಗೆ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲವೇ? ವಾರ್ಡ್‌ನ ರಸ್ತೆಗಳು ಗುಂಡಿ ಬಿದ್ದಿವೆಯೇ? ಉದ್ಯಾನದ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲವೇ... ನಿಮ್ಮ ಕ್ಷೇತ್ರದ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೇ? ಹಾಗಾದರೆ, ಕೆಂಗೇರಿ ಉಪನಗರದ ಬಂಡೆಮಠ ಮದುವೆ ಹಾಲ್‌ಗೆ ಇದೇ 21 ರಂದು ಬನ್ನಿ.

ಯಶವಂತಪುರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಶನಿವಾರ (ಇದೇ 21) ಇಲ್ಲಿ ‘ಜನಸ್ಪಂದನ’ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಆಸಕ್ತರು ಬೆಳಿಗ್ಗೆ 10ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

‘ಜೀವ ಉಳಿದಿದ್ದೇ ಹೆಚ್ಚು’

‘ಸೋಮವಾರ ಸುರಿದ ಮಳೆಯಿಂದಾಗಿ ರಸ್ತೆಯೆಲ್ಲಾ ಜಲಾವೃತವಾಗಿತ್ತು. ಅದರಲ್ಲೇ ಬೈಕ್ ಚಲಾಯಿಸಿಕೊಂಡು ಹೋದೆ. ರಸ್ತೆ ಗುಂಡಿ ಕಾಣದೆ ಅದರೊಳಗೆ ಬೈಕ್ ಇಳಿಸಿದ್ದರಿಂದ ಆಯತಪ್ಪಿ ಬಿದ್ದೆ. ಹಿಂಬದಿಯಿಂದಲೇ ಕ್ಯಾಂಟರ್‌ವೊಂದು ಬರುತ್ತಿತ್ತು. ಆತ ಹಠಾತ್ತನೇ ಬ್ರೇಕ್ ಹಾಕಿದ್ದರಿಂದ ನನ್ನ ಜೀವ ಉಳಿಯಿತು’ ಎಂದು ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡುವ ಸಿಕಂದರ್ ಹೇಳಿದರು.

‘ಈ ರಸ್ತೆಯಲ್ಲಿ ಉಸಿರು ಬಿಗಿ ಹಿಡಿದುಕೊಂಡೇ ಬೈಕ್ ಚಲಾಯಿಸಬೇಕು. ಅಧಿಕಾರಿಗಳು ಇತ್ತ ಸುಳಿಯುವುದೇ ಇಲ್ಲ. ಹೀಗಿರುವಾಗ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಳ್ಳಬೇಕು’ ಎಂದು ಪ್ರಶ್ನಿಸಿದರು.

ಮತಾಂತರ ನಿಷೇಧ: ಸುಗ್ರೀವಾಜ್ಞೆಗೆ ಅಂಕಿತ

ಬೆಂಗಳೂರು: ಆಮಿಷ, ಬಲವಂತ ಮತ್ತು ಒತ್ತಾಯದ ಮತಾಂತರ ತಡೆಯುವುದಕ್ಕಾಗಿ ರಾಜ್ಯ ಸರ್ಕಾರ ರೂಪಿಸಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಸುಗ್ರೀವಾಜ್ಞೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಂಗಳವಾರ ಅಂಕಿತ ಹಾಕಿದ್ದಾರೆ.

2021ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗಿತ್ತು. ಆದರೆ, ವಿಧಾನ ಪರಿಷತ್‌ನಲ್ಲಿ ಈ ಮಸೂದೆಯನ್ನು ಮಂಡಿಸುವುದಕ್ಕೂ ಸಾಧ್ಯವಾಗಿರಲಿಲ್ಲ. ವಿಧಾನಸಭೆಯ ಅಂಗೀಕಾರ ಪಡೆದಿರುವ ಸ್ವರೂಪದಲ್ಲೇ ಸುಗ್ರೀವಾಜ್ಞೆ ಮೂಲಕ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲು ಮೇ 12ರಂದು ನಡೆದ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು.

ಸಂಪುಟ ಸಭೆಯ ತೀರ್ಮಾನದಂತೆ ಸಂಸದೀಯ ವ್ಯವಹಾರಗಳು ಮತ್ತು ಕಾನೂನು ಇಲಾಖೆಯು ರವಾನಿಸಿದ್ದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಮಂಗಳವಾರದಿಂದಲೇ ಸುಗ್ರೀವಾಜ್ಞೆ ಜಾರಿಗೆ ಬಂದಿದೆ. ಮತಾಂತರಕ್ಕೆ ಪ್ರಚೋದನೆ ನೀಡುವವರಿಗೆ ಜೈಲು ಶಿಕ್ಷೆ, ದಂಡ ವಿಧಿಸುವುದಕ್ಕೆ ಅವಕಾಶ ದೊರಕಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಮತಾಂತರ ಹೊಂದಿದರೆ ಅವರಿಗೆ ಸರ್ಕಾರದಿಂದ ದೊರಕುತ್ತಿರುವ ಆರ್ಥಿಕ ಸೌಲಭ್ಯಗಳನ್ನು ರದ್ದುಗೊಳಿಸಲಾಗುತ್ತದೆ.

‘40ರಿಂದ 50 ವರ್ಷದೊಳಗಿನ ಚಾಲಕರಿಂದಲೇ ಹೆಚ್ಚು ಅಪಘಾತ’

ಬೆಂಗಳೂರು: ನಾಲ್ಕು ತಿಂಗಳ ಅವಧಿಯಲ್ಲಿ ಕೆಎಸ್‌ಆರ್‌ಟಿಸಿಯ 80 ಬಸ್ ಅಪಘಾತಗಳಲ್ಲಿ ಹೆಚ್ಚಿನವು 40ರಿಂದ 50 ವರ್ಷ ವಯಸ್ಸಿನ ಚಾಲಕ ರಿಂದ ಸಂಭವಿಸಿದ್ದು, ನೌಕರರು ಎಚ್ಚರಿಕೆ ಯಿಂದ ಚಾಲನೆ ಮಾಡಬೇಕು ಎಂದು ನಿಗಮ ತಿಳಿಸಿದೆ.

ಅಪಘಾತ ನಿಯಂತ್ರಿಸುವ ಸಂಬಂಧ ಸಮಾಲೋಚನೆ ಮತ್ತು ಜಾಗೃತಿ ಕಾರ್ಯಾಗಾರದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಚಾಲನಾ ಸಿಬ್ಬಂದಿಗಳ ಜತೆ ಸಂವಾದ ನಡೆಸಿದರು.

ಜನವರಿಯಿಂದ ಏಪ್ರಿಲ್ ನಡುವೆ 80 ಮಾರಣಾಂತಿಕ ಅಪಘಾತ ಗಳು ವರದಿಯಾಗಿವೆ. ಶೇ 39ರಷ್ಟು ಅಪಘಾತಗಳು 40 ರಿಂದ 50 ವರ್ಷ ವಯಸ್ಸಿನ ಚಾಲಕರಿಂದಲೇ ಉಂಟಾಗಿವೆ. ಶೇ 23ರಷ್ಟು ಅಪಘಾತಗಳು 36 ರಿಂದ 40 ವರ್ಷ ವಯಸ್ಸಿನ ಚಾಲಕರಿಂದ ಉಂಟಾಗಿವೆ. ಸಾವು-ನೋವುಗಳ ಪ್ರಮಾಣ ವನ್ನು ಅವಲೋಕಿಸಿದಾಗ ಶೇ44 ಅಪಘಾತಗಳು ದ್ವಿಚಕ್ರ ವಾಹನಗಳು ಮತ್ತು ಶೇ19 ಅಪಘಾತಗಳು ಪಾದಚಾರಿ ಗಳು, ಶೇ27 ರಷ್ಟು ಅಪಘಾತಗಳು ಮಧ್ಯಾಹ್ನದ ಅವಧಿಯಲ್ಲಿ ಸಂಭವಿಸಿವೆ ಎಂದು ಕೆಎಸ್‌ಆರ್‌ಟಿಸಿ ಅವಲೋಕಿಸಿದೆ.

‘ನಿವೃತ್ತ ಸಿಬ್ಬಂದಿಯಿಂದ ತಾತ್ಕಾಲಿಕ ಸೇವೆ’

ಕೆಎಸ್‌ಆರ್‌ಟಿಸಿ ಪ್ರಯಾಣಿಕರ ಸಂಖ್ಯೆ ನಿಧಾನವಾಗಿ ಹೆಚ್ಚಳವಾಗಿದ್ದು, ಎಲ್ಲ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ಈಗ ಸಿಬ್ಬಂದಿ ಕೊರತೆಯನ್ನು ನಿಗಮ ಎದುರಿಸುತ್ತಿದೆ. ನಿವೃತ್ತಿ ಹೊಂದಿದ್ದರೂ ದೈಹಿಕವಾಗಿ ಸಮರ್ಥರಿರುವ ಸಿಬ್ಬಂದಿಯಿಂದ ತಾತ್ಕಾಲಿಕ ಸೇವೆ ಪಡೆದುಕೊಳ್ಳಲು ಮುಂದಾಗಿದೆ.

ಕೋವಿಡ್ ಪೂರ್ವದಲ್ಲಿ ದಿನಕ್ಕೆ 29 ಲಕ್ಷ ಇದ್ದ ಪ್ರಯಾಣಿಕರ ಸಂಖ್ಯೆ, ಕೋವಿಡ್ ಸಂದರ್ಭದಲ್ಲಿ ಕಡಿಮೆಯಾಗಿ ನಿಗಮ ಆರ್ಥಿಕವಾಗಿ ತೀವ್ರ ಸಮಸ್ಯೆಗೆ ಸಿಲುಕಿತ್ತು. ಈಗ ದಿನದ ಸರಾಸರಿ ಪ್ರಯಾಣಿಕರ ಸಂಖ್ಯೆ 25 ಲಕ್ಷಕ್ಕೆ ಏರಿಕೆಯಾಗಿದೆ. ಆದ್ದರಿಂದ ನಿವೃತ್ತಿ ಹೊಂದಿರುವ ಮತ್ತು 63 ವರ್ಷ ಮೀರದ ಚಾಲಕರನ್ನು ಮೂರು ತಿಂಗಳ ಅವಧಿಗೆ ನೇಮಿಸಿಕೊಳ್ಳಲು ಮುಂದಾಗಿದೆ.

ಆಸಕ್ತ ನಿವೃತ್ತ ಚಾಲಕರು ಪುತ್ತೂರು, ರಾಮನಗರ, ಮಂಗಳೂರು ವಿಭಾಗಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬಹುದು. 8 ಗಂಟೆಗಳ ಅವಧಿಗೆ ₹1 ಸಾವಿರ ಗೌರವಧನ ನೀಡಲಾಗುವುದು. ನಂತರದ ಪ್ರತಿ ಗಂಟೆಗೆ ₹125 ಹೆಚ್ಚುವರಿ ಭತ್ಯೆ ಹೊರತುಪಡಿಸಿ ಬೇರೆ ಯಾವುದೇ ಸೌಲಭ್ಯ ಇರುವುದಿಲ್ಲ.

ಸಾರಿಗೆ ಆದಾಯದ ಮೇಲೆ ಶೇ 1ರಷ್ಟು ಪ್ರೋತ್ಸಾಹಧನಕ್ಕೆ ಅರ್ಹರಿರುತ್ತಾರೆ. ದೃಷ್ಟಿ ಸಾಮರ್ಥ್ಯದ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ, ಚಾಲ್ತಿಯಲ್ಲಿರುವ ಚಾಲನಾ ಪರವಾನಗಿಯೊಂದಿಗೆ ಹಾಜರಾಗುವಂತೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನಗರದಲ್ಲಿ 10 ಸಾವಿರ ರಸ್ತೆ ಗುಂಡಿ’

ಬೆಂಗಳೂರು: ‘ನಗರದಲ್ಲಿ 10,282 ರಸ್ತೆಗುಂಡಿಗಳು ಇರುವುದು ಸರ್ವೆಯಿಂದ ತಿಳಿದುಬಂದಿದೆ. ಇವುಗಳಲ್ಲಿ 218 ಗುಂಡಿಗಳ ಸಮಸ್ಯೆ ಬಗೆಹರಿಸಲು ದೀರ್ಘಕಾಲೀನ ಪರಿಹಾರ ಕ್ರಮಗಳ ಅಗತ್ಯವಿದೆ’ ಎಂದು ಬಿಬಿಎಂಪಿಯ ಯೋಜನಾ ವಿಭಾಗದ ವಿಶೇಷ ಆಯುಕ್ತ ಪಿ.ಎನ್.ರವೀಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ದೀರ್ಘಕಾಲೀನ ಪರಿಹಾರ ಕೈಗೊಳ್ಳಲು ಗುರುತಿಸ ಲಾದ ರಸ್ತೆಗುಂಡಿಗಳಿರುವಲ್ಲಿ ಡಾಂಬರು ಹಾಕಿದರೂ ಅದು ಕಿತ್ತುಹೋಗುವ ಸಾಧ್ಯತೆ ಇದೆ. ಅಂತಹ ಕಡೆ ಕಾಂಕ್ರೀಟೀ ಕರಣ ನಡೆಸಬೇಕಾಗುತ್ತದೆ’ ಎಂದರು.

‘ಎಂಜಿನಿಯರ್‌ಗಳಿಂದ ಬರುವ ಬೇಡಿಕೆ ಆಧರಿಸಿ ಪಾಲಿಕೆಯ ಬಿಸಿ ಡಾಂಬರು ಮಿಶ್ರ ಮಾಡುವ ಘಟಕದಿಂದ ಡಾಂಬರು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ. ಸ್ಥಳೀಯ ಸಹಾಯಕ ಎಂಜಿನಿಯರ್‌ಗಳು ಹಾಗೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ರಸ್ತೆ ಗುಂಡಿ ಮುಚ್ಚುವ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಮುಚ್ಚಿರುವ ಗುಂಡಿಗಳನ್ನು ವಲಯ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು, ಕಾರ್ಯ ಪಾಲಕ ಎಂಜಿನಿಯರ್‌ಗಳೂ ಪರಿಶೀಲಿಸುತ್ತಾರೆ’ ಎಂದು ತಿಳಿಸಿದರು.

'ವೈ' ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್- ಜುಲೈ ವರೆಗೆ ಗಡುವು

ಬೆಂಗಳೂರು: ಹಳೆ ಮೈಸೂರು ರಸ್ತೆ (ಮಾಗಡಿ ರಸ್ತೆ) ಹಾಗೂ ವಾಟಾಳ್ ನಾಗರಾಜ್ ರಸ್ತೆ ಸೇರುವಲ್ಲಿನ ‘ವೈ ಜಂಕ್ಷನ್’ನಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಗಡುವು ವಿಧಿಸಿದರು.

ಪಶ್ಚಿಮ ವಲಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಕಾಮಗಾರಿಗಳನ್ನು ಮುಖ್ಯ ಆಯುಕ್ತರು ಮಂಗಳವಾರ ಪರಿಶೀಲನೆ ನಡೆಸಿದರು. ‘ವೈ ಜಂಕ್ಷನ್’ ಗ್ರೇಟ್ ಸಪರೇಟರ್ ಕಾಮಗಾರಿಯನ್ನು ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯ ₹ 30 ಕೋಟಿ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮೆಜೆಸ್ಟಿಕ್ ಮತ್ತು ರಾಜಾಜಿನಗರ ಕಡೆಯಿಂದ ಬರುವ ವಾಹನಗಳು ವೈ ಜಂಕ್ಷನ್ ಮೂಲಕ ಹಾದುಹೋಗುತ್ತವೆ. ಸದಾ ವಾಹನ ದಟ್ಟಣೆ ಉಂಟಾಗುತ್ತಿದ್ದ ಈ ಜಂಕ್ಷನ್ ಅನ್ನು ಸಿಗ್ನಲ್ ಮುಕ್ತ ಮಾಡಲು ಗ್ರೇಡ್ ಸಪರೇಟರ್ ನಿರ್ಮಿಸಲಾಗುತ್ತಿದೆ. ಇಲ್ಲಿ ಮೆಜೆಸ್ಟಿಕ್ ಕಡೆಯಿಂದ ರಾಜಾಜಿನಗರ ಕಡೆ ಹೋಗುವ ಕೆಳಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು, ಈಗಾಗಲೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲುಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ.

ಒಕಳೀಪುರ ಅಷ್ಟಪಥ ಕಾರಿಡಾರ್ ಕಾಮಗಾರಿ ಪರಿಶೀಲಿಸಿದ ಮುಖ್ಯ ಆಯುಕ್ತರು, ‘ಇಲ್ಲಿನ ರಸ್ತೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ತುಮಕೂರು ಕಡೆಗಿನ ರೈಲ್ವೆ ಹಳಿಯಡಿ ನಡೆಸಬೇಕಾದ ಬಾಕ್ಸ್ ಪುಷಿಂಗ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜಕಾಲುವೆಯ ಸೇತುವೆಯ ಕೆಳಗಿನ ಹೂಳನ್ನು ತೆರವು ಮಾಡಬೇಕು. ಕಾಲುವೆಗೆ ಕಸ ಬಿಸಾಡುವುದನ್ನು ತಡೆಯಲು ಚೈನ್ ಲಿಂಕ್ ಅಳವಡಿಸಬೇಕು ಎಂದು ಸೂಚಿಸಿದರು.

ಮಂತ್ರಿ ಸ್ಕ್ವೇರ್ ಮಾಲ್ ಮುಂಭಾಗದಲ್ಲಿ ಮಳೆ ನೀರು ಕಟ್ಟಿಕೊಳ್ಳುವುದನ್ನು ತಪ್ಪಿಸಲು ನಿರ್ಮಿಸುತ್ತಿರುವ ರಾಜಕಾಲುವೆಯ ಸೇತುವೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಕಳವಳ

‘ನಗರದಲ್ಲಿನ ಶೇ 85ರಷ್ಟು ಕೆರೆಗಳು ಕಣ್ಮರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಧಾನಿ ಬೆಂಗಳೂರಿನಲ್ಲಿ ಈ ಮೊದಲು ಸಾವಿರಕ್ಕೂ ಅಧಿಕ ಕೆರೆಗಳು ಇದ್ದವು. ಆದರೆ, ಸಮೀಕ್ಷೆಯೊಂದರ ಪ್ರಕಾರ ನಗರೀಕರಣದಿಂದಾಗಿ ಶೇ 85 ರಷ್ಟು ಕೆರೆಗಳು ಈಗಾಗಲೇ ಕಣ್ಮರೆ ಆಗಿವೆ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಕಳವಳ ವ್ಯಕ್ತಪಡಿಸಿದರು.

ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಜಂಟಿಯಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ ‘ಕರ್ನಾಟಕ ಕೆರೆಗಳ, ಕಾಲುವೆಗಳ ಮತ್ತು ಸಾಮೂಹಿಕ ನೀರಿನ ನೆಲೆಗಳ ವಿಕೇಂದ್ರೀಕೃತ, ಸಾಮಾಜಿಕವಾಗಿ ಒಳಗೊಳ್ಳುವ ಮತ್ತು ಪರಿಸರ ವಿವೇಕದ ರಕ್ಷಣೆ ಮತ್ತು ಪುನರ್ವಸತಿ’ ವಿಚಾರ ಸಂಕಿರಣಉದ್ಘಾಟಿಸಿಮಾತನಾಡಿದರು.

‘ಬೆಂಗಳೂರಿನ ಬಹುತೇಕ ಕೆರೆಗಳು ನಿರ್ಮಾಣಗೊಂಡಿದ್ದು ನಾಡಪ್ರಭು ಕೆಂಪೇಗೌಡ, ಮೈಸೂರು ಮಹಾರಾಜರು ಮತ್ತು ಬ್ರಿಟಿಷರಿಂದ. 1780ರ ವೇಳೆ ಬೆಂಗಳೂರು ಸಾವಿರಾರು ಕೆರೆಗಳನ್ನು ಒಳಗೊಂಡು, ಹಸಿರಿನಿಂದ ಕಂಗೊಳಿಸುತ್ತಿತ್ತು. ಕಟ್ಟಡಗಳ ನಿರ್ಮಾಣದಿಂದಾಗಿ ಕೆರೆಗಳ ಒತ್ತುವರಿ ಎಲ್ಲಡೆ ನಡೆಯಿತು. 1970ರ ಬಳಿಕ ಕುಡಿಯುವ ನೀರಿನ ಸಮಸ್ಯೆ ತಲೆದೋರಿತು. ಆಗ ಸರ್ಕಾರ ಹಾಗೂ ಸಾರ್ವಜನಿಕರು ಎಚ್ಚೆತ್ತುಕೊಳ್ಳದಿದ್ದರಿಂದ ಸಮಸ್ಯೆ ಇನ್ನಷ್ಟು ಗಂಭೀರ ಸ್ವರೂಪ ಪಡೆದುಕೊಂಡಿತು’ ಎಂದು ತಿಳಿಸಿದರು.

ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎನ್.ಕೆ. ಪಾಟೀಲ, ‘ಬೆಂಗಳೂರು ದೇಶದಲ್ಲಿಯೇ ವಿಭಿನ್ನವಾದ ನಗರವಾಗಿದೆ. ನಗರದ ಸೌಂದರ್ಯ ಹೆಚ್ಚಿಸುತ್ತಿದ್ದ ಹಲವು ಕೆರೆಗಳು ಈಗ ಇಲ್ಲವಾಗಿವೆ. ಕೆರೆಗಳ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಲ್ಲ. ಪರಿಸ್ಥಿತಿ ಹೀಗೆ ಮುಂದುವರೆದರೆ ನೀರಿನ ಕೊರತೆ ಎದುರಾಗಿ, ಮುಂದಿನ ಪೀಳಿಗೆ ಇದರ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಹೇಳಿದರು.



ವಿಚಾರ ಸಂಕಿರಣದಲ್ಲಿ ನ್ಯಾ.ಬಿ. ವೀರಪ್ಪ ಮಾತನಾಡಿದರು. ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ ಟ್ರಸ್ಟಿ ಭಾರ್ಗವಿ ಎಸ್. ರಾವ್, ನ್ಯಾ.ಎನ್ ಕೆ. ಪಾಟೀಲ, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಶಶಿಧರ ಶೆಟ್ಟಿ ಹಾಗೂ ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್‌ನ ಸಂಯೋಜಕ ಲಿಯೋ ಎಫ್. ಸಲ್ದಾನ್ಹಾ ಇದ್ದಾರೆ – ಪ್ರಜಾವಾಣಿ ಚಿತ್ರ

ನಿದ್ದೆಯಿಂದ ಎದ್ದು ಕೆಲಸ ಮಾಡಿ: ಅಧಿಕಾರಿಗಳಿಗೆ ಸಿ.ಎಂ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಭಿವೃದ್ಧಿ ಕುರಿತ ನಿಮ್ಮ ಧೋರಣೆ ಬದಲಿಸಿಕೊಳ್ಳಿ. ನಿದ್ದೆಯಿಂದ ಎದ್ದು ಕೆಲಸ ಮಾಡಿ, ಆಡಳಿತದಲ್ಲಿ ತ್ವರಿತ ಗತಿಯಲ್ಲಿ ಸುಧಾರಣೆ ತನ್ನಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿರಿಯ ಅಧಿಕಾರಿಗಳಿಗೆ ಚಾಟಿ ಬೀಸಿದ್ದಾರೆ.

ಸರ್ಕಾರದ ಮುಖ್ಯಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗಳು ಮತ್ತು ಪ್ರಧಾನ ಕಾರ್ಯದರ್ಶಿಗಳ ಜತೆ ಮಂಗಳವಾರ ಸಂಜೆ ತುರ್ತು ಸಭೆ ನಡೆಸಿದ ಅವರು, ಕೆಲವು ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

‘ಬಡವರು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಯೋಜನೆಗಳ ಬಗ್ಗೆ ನಿಷ್ಕಾಳಜಿ ತೋರಬಾರದು. ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳ ಜಾರಿಗೆ ಆದ್ಯತೆ ನೀಡಿ. ಮಕ್ಕಿಕಾಮಕ್ಕಿ ಕೆಲಸ ಮಾಡಬೇಡಿ. ಈಗ ಕಾಲ ಬದಲಾಗಿದೆ, ಅದಕ್ಕೆ ತಕ್ಕಂತೆ ಕೆಲಸ ಮಾಡದಿದ್ದರೆ, ರಾಜ್ಯವು ಸಂಕಷ್ಟಕ್ಕೆ ಸಿಲುಕುತ್ತದೆ’ ಎಂದೂ ಸಭೆಯಲ್ಲಿ ಎಚ್ಚರಿಕೆ ನೀಡಿದರೆಂದು ಮೂಲಗಳು ಹೇಳಿವೆ.

> **ಸರ್ಕಾರ ಹಣ ನೀಡುವುದು ಯೋಜನೆಗಳನ್ನು ಜಾರಿ ಮಾಡುವುದಕ್ಕಾಗಿ ವಿನಾ. ಆ ಹಣವನ್ನು ಬ್ಯಾಂಕ್‌ನಲ್ಲಿ ಕೂಡಿಡಲು ಅಲ್ಲ**
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

ಗಂಗಾ ಕಲ್ಯಾಣ ಯೋಜನೆಯಲ್ಲಿ ಏನು ಆಗುತ್ತಿದೆ? ಕೊಳವೆಬಾವಿಗಳನ್ನು ಕೊರೆಸುತ್ತಿಲ್ಲ. ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಈ ಯೋಜನೆಯ ಪ್ಯಾಕೇಜ್ ವ್ಯವಸ್ಥೆಯನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ‘ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಜಮೀನು ಬೇಕಾಗುತ್ತದೆ. ಮುಂದಿನ ತಿಂಗಳಿನೊಳಗೆ ಜಮೀನು ಪಡೆದು, ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂಬ ಸೂಚನೆ ನೀಡಲಾಗಿದೆ’ ಎಂದರು.

ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ವಿವಿಧ ಇಲಾಖೆಗಳ ಮಧ್ಯೆ ಸಮನ್ವಯ ಇಲ್ಲದ ಕಾರಣ ಹಲವು ಯೋಜನೆಗಳ ಜಾರಿ ತಡವಾಗುತ್ತಿದೆ. ಈ ಸಮಸ್ಯೆ ಬಗೆಹರಿಸಲು ಏನು ಮಾಡಬೇಕು ಎಂಬ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು ಎಂದು ಹೇಳಿದರು.

‘ಜಿಲ್ಲಾಧಿಕಾರಿಗಳಿಂದ ಬಂದ ಕಡತಗಳು ಮತ್ತೆ ಕೆಳಗಿನ ಹಂತದ ಅಧಿಕಾರಿಗಳಿಗೆ ಹೋಗಬಾರದು, ಮೇಲಿನ ಹಂತದ ಅಧಿಕಾರಿಗಳಿಗೆ ಹೋಗಿ ಕೆಲಸ ಪೂರ್ಣಗೊಳ್ಳಬೇಕು. ಆಡಳಿತ ಸುಧಾರಣಾ ಸಮಿತಿ ನೀಡಿರುವ ಶಿಫಾರಸುಗಳನ್ನು ಪಾಲನೆ ಮಾಡಬೇಕೆಂದು ಸೂಚನೆ ನೀಡಿದ್ದೇನೆ’ ಎಂದರು.

6,500 ಶಾಲಾ ಕೊಠಡಿಗಳ ನಿರ್ಮಾಣ: ಈ ವರ್ಷ 6,500ಕ್ಕೂ ಹೆಚ್ಚು ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಶಾಲೆಗಳನ್ನು ಗುರುತಿಸಿ, ಆಗಸ್ಟ್‌ನಿಂದ ಕಾಮಗಾರಿ ಆರಂಭಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಎಸ್‌ಎಫ್‌ಐ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರವು ಎಸ್ಸೆಸ್ಸೆಲ್ಸಿ ಪಠ್ಯಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಭಾಷಣ ಹಾಗೂ ಕೋಮುವಾದಿ ಅಂಶ ಸೇರ್ಪಡೆ ಮಾಡಿದೆ ಎಂದು ಆರೋಪಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಸಮಿತಿಯ ಸದಸ್ಯರು ಪ್ರತಿಭಟನೆ ನಡೆಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಎದುರು ಪ್ರತಿಭಟನೆ ನಡೆಸಿದ ಸದಸ್ಯರು, ರಾಜ್ಯ ಸರ್ಕಾರ ಹಾಗೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಕ್ರಮವನ್ನು ವಿರೋಧಿಸಿದರು.

‘ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರಿಗೆ ಸಂಬಂಧಪಟ್ಟ ಹಾಗೂ ಪ್ರಗತಿಪರ ಚಿಂತನೆಗೆ ಪೂರಕವಾಗಿದ್ದ ಪಾಠಗಳನ್ನು ಕೈಬಿಟ್ಟಿರುವುದು ಸರಿಯಲ್ಲ. ಸಂಘ ಪರಿವಾರದ ಸಂಸ್ಥಾಪಕ ಹೆಡಗೇವಾರ್ ಅವರ ಭಾಷಣ ಸೇರ್ಪಡೆ ಮಾಡುವ ಮೂಲಕ ಸರ್ಕಾರವು ಶಿಕ್ಷಣವನ್ನು ಕೇಸರೀಕರಣಗೊಳಿಸಲು ಮುಂದಾಗಿದೆ. ದೇಶಪ್ರೇಮಿ ಭಗತ್ ಸಿಂಗ್ ಕುರಿತಾದ ಪಾಠವನ್ನು ಪಠ್ಯದಿಂದ ಕೈಬಿಟ್ಟಿದೆ’ ಎಂದು ಪ್ರತಿಭಟನಕಾರರು ದೂರಿದರು.



ಆರ್ಟ್ ಆಫ್ ಗಿವಿಂಗ್‌ನಿಂದ ಅಂತರರಾಷ್ಟ್ರೀಯ ‘ಆರ್ಟ್ ಆಫ್ ಗಿವಿಂಗ್ ಡೇ’ ಕಾರ್ಯಕ್ರಮವನ್ನು ಮಾಗಡಿ ರಸ್ತೆಯ ಪೊಲೀಸ್ ಕಾಲೊನಿಯಲ್ಲಿ ಮಂಗಳವಾರ ಆಚರಿಸಲಾಯಿತು.

ನಗರದಲ್ಲಿ ಇಂದು

ಗ್ರಾಮ ದೇವತೆಗಳ ಹಬ್ಬ: ಪಟಾಲಮ್ಮ ದೇವರಿಗೆ ಆರತಿಗಳ ಮೆರವಣಿಗೆ ಉದ್ಘಾಟನೆ: ಅತಿಥಿಗಳು–ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಟಿ.ಎ.ಶರವಣ, ಯು.ಬಿ.ವೆಂಕಟೇಶ್, ಆಯೋಜನೆ–ಶ್ರೀರಾಮಾಂಜನೇಯಸ್ವಾಮಿ ದೇವಸ್ಥಾನ ಸೇವಾ ಟ್ರಸ್ಟ್, ಸ್ಥಳ–ರಾಮಾಂಜನೇಯಸ್ವಾಮಿ ದೇವಸ್ಥಾನ, ನಾಗಸಂದ್ರ, ಬಸವನಗುಡಿ, ಬೆಳಿಗ್ಗೆ 8.30ರಿಂದ.

‘ಸುಸ್ಥಿರ ಕೃಷಿ, ಪರಿಸರ ವ್ಯವಸ್ಥೆಯ ಸೇವೆಗಳು ಮತ್ತು ಗ್ರಾಮೀಣ ಜೀವನೋಪಾಯಕ್ಕಾಗಿ ಜೇನುಸಾಕಣೆ’ ಕುರಿತು ಸಮ್ಮೇಳನ: ಉದ್ಘಾಟನೆ–ಬಸವರಾಜ ಹೊರಟ್ಟಿ, ಅತಿಥಿಗಳು–ಮುನಿರತ್ನ, ಕೆ.ಆರ್.ವೇಣುಗೋಪಾಲ್, ಆಯೋಜನೆ–ವಿ.ಶಿವರಾಂ ರೀಸರ್ಚ್ ಫೌಂಡೇಷನ್, ಸ್ಥಳ–ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 9.30.

ಪಟಾಲಮ್ಮ ದೇವಿ ಮಹೋತ್ಸವ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಆರ್. ಅಶೋಕ, ಎಚ್.ಎಂ.ರೇವಣ್ಣ, ರಾಮಲಿಂಗಾರೆಡ್ಡಿ, ಆಯೋಜನೆ–ಪಟಾಲಮ್ಮ ದೇವಸ್ಥಾನ ಟ್ರಸ್ಟ್, ಸ್ಥಳ–ದೇವಸ್ಥಾನದ ಸಮುಚ್ಚಯ, ಕನಕನಪಾಳ್ಯ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 10

ಗೃಹಬಳಕೆಯ ವೆಚ್ಚದ ಸಮೀಕ್ಷೆಯ ಕುರಿತು ರಾಷ್ಟ್ರ ಮಟ್ಟದ ತರಬೇತುದಾರರ ಕಾರ್ಯಾಗಾರ: ಉದ್ಘಾಟನೆ–ಜಿ.ಪಿ. ಸಮಂತ, ಆಯೋಜನೆ– ರಾಷ್ಟ್ರೀಯ ಸಾಂಖ್ಯಿಕ ಕಚೇರಿ, ಸ್ಥಳ–ಹೋಟೆಲ್ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 10

ಸಿದ್ಧಾಮೃತ ಗುರುಕುಲ ಪ್ರಾರಂಭೋತ್ಸವ ಹಾಗೂ ವೇದಾಂತ ಶಿಬಿರದ ಸಮಾರೋಪ: ಸಾನ್ನಿಧ್ಯ–ಆರೂಢಭಾರತೀ ಸ್ವಾಮೀಜಿ, ಸ್ಥಳ–ಸಿದ್ಧಾರೂಢ ಮಿಷನ್ ಆಶ್ರಮ, ರಾಮೋಹಳ್ಳಿ, ಬೆಳಿಗ್ಗೆ 10.30

‘ಸಮಾಜದ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ’ ಕುರಿತು ಚರ್ಚೆ: ಮಾತನಾಡುವವರು–ಬಿ.ಕೆ.ರವಿ, ಪ್ರೊ. ಎಸ್.ಎನ್.ನಾಗರಾಜ ರೆಡ್ಡಿ, ಆಯೋಜನೆ–ದಿ ನ್ಯಾಷನಲ್ ಕಾಲೇಜು, ಸ್ಥಳ–ಎಚ್.ಎನ್.ಮಲ್ಟಿಮೀಡಿಯ ಸಭಾಂಗಣ, ಬಿವಿಜೆ ವಿಜ್ಞಾನ ಕೇಂದ್ರ, ಬೆಳಿಗ್ಗೆ 11

ಶೋಷಿತರ ಸ್ವಾಭಿಮಾನ ಸಮಾವೇಶ: ಉದ್ಘಾಟನೆ–ಸಿದ್ದರಾಮಯ್ಯ, ಅಧ್ಯಕ್ಷತೆ–ಎಂ.ಗುರುಮೂರ್ತಿ, ಅತಿಥಿಗಳು–ಎ. ನಾರಾಯಣಸ್ವಾಮಿ, ಎಚ್.ಎನ್. ನಾಗಮೋಹನ ದಾಸ್, ಪ್ರಿಯಾಂಕ್ ಖರ್ಗೆ, ರಿಜ್ವಾನ್ ಅರ್ಷದ್, ಎಚ್. ಆಂಜನೇಯ, ಸಂತೋಷ್ ಲಾಡ್, ಆಯೋಜನೆ–ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ–ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 11

ದೇಸಿ–ಪ್ರಮಾಣಪತ್ರಗಳ ಪ್ರದಾನ: ಉದ್ಘಾಟನೆ–ಎಸ್.ರಾಜೇಂದ್ರ ಪ್ರಸಾದ್, ಅತಿಥಿಗಳು–ಜಿ.ಎಸ್.ಜಯಸ್ವಾಮಿ, ಅಧ್ಯಕ್ಷತೆ–ಎನ್.ದೇವಕುಮಾರ್, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಕೃಷಿ ಇಲಾಖೆ, ಸ್ಥಳ–ರೈತ ತರಬೇತಿ ಸಂಸ್ಥೆ, ಜಿಕೆವಿಕೆ, ಬೆಳಿಗ್ಗೆ 11.30

ದಿವಾಕರ ಹೆಗಡೆ ಅವರಿಂದ ಏಕವ್ಯಕ್ತಿ ತಾಳಮದ್ದಳೆ: ಪ್ರಸಂಗ–ಅರಸಿ ಅಗ್ನಿಕನ್ಯೆ, ಆಯೋಜನೆ ಮತ್ತು ಸ್ಥಳ–ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಸಂಜೆ 6

ಹೈ ಕೋರ್ಟ್‌ಗೆ ಚುನಾವಣೆ ಆಯೋಗ ಹೇಳಿಕೆ

‘ಅಧಿಕಾರ ಕಿತ್ತುಕೊಂಡ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ, ನಮ್ಮ ಅಧಿಕಾರವನ್ನು ಹಿಂಪಡೆದಿರುವ ಕಾರಣ ಈ ಬಗ್ಗೆ ಸೂಕ್ತ ನಿರ್ದೇಶನ ನೀಡುವ ಅಗತ್ಯವಿದೆ’ ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ಮನವಿ ಮಾಡಿದೆ.

ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆಗೆ ಸಂಬಂಧಿ ಸಿದಂತೆ ಚುನಾವಣಾ ಆಯೋಗ ಸಲ್ಲಿಸಿರುವ ತುರ್ತುಅರ್ಜಿಯಮೇಲಿನಜ್ಞಾಪನಾಪತ್ರವನ್ನು (ಮೆಮೊ) ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ಹಾಗೂ ಎಂ.ಜಿ.ಉಮಾ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ಪರಿಶೀಲಿಸಿತು.

ವಿಚಾರಣೆ ವೇಳೆ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸಲ್ಲಿಸಿರುವ ಮೆಮೊ ಬಗ್ಗೆ ನ್ಯಾಯಪೀಠಕ್ಕೆ ವಿವರಿಸಿದರು. ‘ರಾಜ್ಯ ಸರ್ಕಾರ 2021ರ ಉತ್ತರಾರ್ಧದಲ್ಲಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಆಯೋಗದ ಅಧಿಕಾರವನ್ನು ಕಿತ್ತುಕೊಂಡಿದೆ’ ಎಂದು ದೂರಿದರು.



ಮೆಮೊ ಪರಿಶೀಲಿಸಿ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸುಪ್ರೀಂ ಕೋರ್ಟ್ ಸೂಚಿಸಿದ ಮೇಲೆ ಮತ್ತೇಕೆ ಮೆಮೊ’ ಎಂದು ಪ್ರಶ್ನಿಸಿತಲ್ಲದೆ, ‘ಹಾಗಿದ್ದರೆ ಈ ಅರ್ಜಿಯ ಸಂಪೂರ್ಣ ವಿಚಾರಣೆ ನಡೆಸುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟು, ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು.

ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ಅವಧಿ ಪೂರ್ಣಗೊಂಡ ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಈ ಸಂಬಂಧ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಪ್ರಕಟಿಸಿತ್ತು. ಅಂತೆಯೇ ಮೀಸಲಾತಿ ಕರಡು ಸಹ ಪ್ರಕಟಿಸಲಾಗಿತ್ತು.

ದಿನಾಂಕ ಘೋಷಣೆ ಮಾಡಬೇಕು ಎನ್ನುವ ಸಂದರ್ಭದಲ್ಲಿ ಕ್ಷೇತ್ರ ಪುನರ್ ವಿಂಗಡಣೆ, ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದ ಸರ್ಕಾರ ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು. ಇದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಈ ಅರ್ಜಿ ವಿಚಾರಣಾ ಹಂತದಲ್ಲಿದೆ.

ಪರಿಶಿಷ್ಟ ಮೀಸಲಾತಿ ಜಾರಿಗೆ ಗಡುವು

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುವ ನ್ಯಾ.ಎಚ್.ಎನ್.ನಾಗಮೋಹನ್ ದಾಸ್ ಸಮಿತಿ ವರದಿಯನ್ನು ಮೇ 20ರೊಳಗೆ ಜಾರಿ ಮಾಡದಿದ್ದರೆ, ಪ್ರತಿಭಟನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗುವುದು' ಎಂದು ಕರ್ನಾಟಕ ರಾಜ್ಯ ಸ್ವಾಭಿಮಾನಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಎಚ್ಚರಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸಂಚಾಲಕ ಬಸವರಾಜ ನಾಯಕ, 'ಶಿಕ್ಷಣ ಮತ್ತು ಉದ್ಯೋಗದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಗೆ ಶೇ 17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ 7.5ರಷ್ಟು ಮೀಸಲಾತಿ ಜಾರಿಗೆ ಒತ್ತಾಯಿಸಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಹೋರಾಟ ಮೇ 20ಕ್ಕೆ 100 ದಿನಗಳನ್ನು ಪೂರೈಸಲಿದೆ. ಈ ಗಡುವಿನೊಳಗೆ ಬೇಡಿಕೆ ಈಡೇರದಿದ್ದರೆ, ಪ್ರತಿಭಟನೆ ತೀವ್ರಗೊಳ್ಳಲಿದೆ' ಎಂದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, 'ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್‌ಗಳ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

ಕಲಾವಿದರ ದತ್ತಾಂಶ ಸಂಗ್ರಹ ವಿಸ್ತರಣೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಸಾಹಿತಿಗಳು ಮತ್ತು ಕಲಾವಿದರ ಮಾಹಿತಿಯ ದತ್ತಾಂಶ ಸಂಗ್ರಹದ ಅವಧಿಯನ್ನು ಇದೇ 30 ರವರೆಗೆ ವಿಸ್ತರಿಸಲಾಗಿದೆ.

ಸಾಹಿತಿಗಳು ಮತ್ತು ಕಲಾವಿದರಿಗೆ ತಮ್ಮ ಮಾಹಿತಿಯನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಲು ಇಲಾಖೆ ಅವಕಾಶ ಮಾಡಿಕೊಟ್ಟಿದೆ. ಅರ್ಹ ಫಲಾನುಭವಿಗಳು ಇದರ ಲಾಭ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಬುಧವಾರ ಬೆಳಿಗ್ಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಸ್ಥಳಗಳು: ಸುಂದರ ನಗರ, ಶಿವ ಕೋಟೆ, ಮಧುಗಿರಿಹಳ್ಳಿ, ಡಿ.ಬಿ. ಕೆರೆ, ಮಾವಳ್ಳಿಪುರ, ಕೊಡಿಗೆಹಳ್ಳಿ, ಆ್ಯಮ್ಕೊ ಬಡಾವಣೆ, ಎನ್‌ಟಿಐ ಬಡಾವಣೆ, ಸರೋವರ ಬಡಾವಣೆ, ದೊಡ್ಡಬೆಟ್ಟಹಳ್ಳಿ, ಆದಿತ್ಯನಗರ, ಎಂಎಸ್ ಪಾಳ್ಯ, ಪೇಪರ್ ಫ್ಯಾಕ್ಟರಿ, ಪಾರ್ವತಮ್ಮ ಬಡಾವಣೆ, ವಿದ್ಯಾರಣ್ಯಪುರ, ಎಎಂಎಸ್ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಚನ್ನಸಂದ್ರ ಮುಖ್ಯರಸ್ತೆ, ಕೊರಲೂರು, ತಿಮ್ಮಶೆಟ್ಟಿಹಳ್ಳಿ, ಬೋದನಕಾಕನಹಳ್ಳಿ, ಹೊಸಹಳ್ಳಿ, ಸೌಖ್ಯಾ ರಸ್ತೆ, ಕಾಡುಗೋಡಿ, ವರ್ತೂರು, ಕೊಡಿಗೆಹಳ್ಳಿ ಮುಖ್ಯರಸ್ತೆ, ಹೂಡಿ, ರಾಜ ಪಾಳ್ಯ ಹಾಗೂ ಐಟಿಪಿಎಲ್ ಮುಖ್ಯರಸ್ತೆಯಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯ ಅವಧಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

RMS PU COLLEGE invites application from qualified dynamic applicants and have passion for excellence for the following positions: SCIENCE FACULTY- with min 3 years exp. in CET and NEET. Physics, Chemistry and Mathematics. LANGUAGE FACULTY- ENGLISH with min 3 years experience, SCIENCE LABORATORY ASSISTANT- with min 5 years experience, LIBRARIAN- with min 5 years experience. Apply within 5 days from the date of publication. To THE RMS PU COLLEGE, PRINCIPAL, Near Metro Cash & Carry, Kanakapura Road Bengaluru-560062. Phone: 6361975098. Email: rmspucollege@gmail.com

HOLY ANGEL'S High School #2,5th Main, 4th Cross R.P.C Layout, Vijayanagar, Bengaluru-560104. Phone:23404465, 23202042 E-mail: holyangels.highschoolrpclayout@gmail.com Requires Experienced Trained NTT Teachers to handle Nursery Classes. Also need Trained Teachers to handle Primary/Higher Primary/High School for Academic year 2022-2023 STATE & ICSE Qualification: B.A/B.Sc.,B.Ed., M.A/M.Sc.,M.Ed and BCA/MCA Only English medium candidates need apply.

CAMLIN ENGLISH SCHOOL, 6th 'C' Main 4th Cross RPC Layout VIJAYANAGAR Bangalore-560104. Requires Teachers for English, Social Studies, Science, Drawing, Computer Science, Physical Education Office Assistants. Contact: PRINCIPAL with resume and Original Marks Cards. Phone: 080-23301363

ದಿ ಆಶ್ರಮ ಸ್ಕೂಲ್
(ಕೆ. ಎನ್. ಗುರುಸ್ವಾಮಿ ಎಜುಕೇಷನಲ್ & ಚಾರಿಟಬಲ್ ಟ್ರಸ್ಟ್‌ನ ವಿಭಾಗ, ಬೆಂಗಳೂರು)
ಕೆಳಕಂಡ ಖಾಲಿ ಹುದ್ದೆಗಳಿಗೆ ಪೂರ್ಣಾವಧಿಯ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
1. ಇಂಗ್ಲೀಷ್ ಮತ್ತು ಸ್ಪೋಕನ್ ಇಂಗ್ಲೀಷ್ ಶಿಕ್ಷಕ/ಶಿಕ್ಷಕಿ : ಡಿಇಡಿ/ಬಿ.ಇಡಿ
2. ದೈಹಿಕ ಶಿಕ್ಷಣ ಶಿಕ್ಷಕ/ಶಿಕ್ಷಕಿ : ಬಿಪಿಎಡ್
3. ಕಂಪ್ಯೂಟರ್ ಸೈನ್ಸ್ ಶಿಕ್ಷಕ/ಶಿಕ್ಷಕಿ : ಬ್ಯಾಚುಲರ್ ಡಿಗ್ರಿ ಇನ್ ಕಂಪ್ಯೂಟರ್ ಸೈನ್ಸ್

ಅಭ್ಯರ್ಥಿಗಳ ಅರ್ಹತೆ ಮತ್ತು ಅನುಭವ:
- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ, ಡಿಇಡಿ/ಬಿ.ಇಡಿ/ಬಿಪಿ.ಎಡ್ ಹೊಂದಿರಬೇಕು.
- ಇಂಗ್ಲೀಷ್ ಶಿಕ್ಷಕ/ಶಿಕ್ಷಕಿ ಹುದ್ದೆಗೆ ಅರ್ಜಿ ಸಲ್ಲಿಸುವವರು ಪದವಿಯಲ್ಲಿ ಒಂದು ವಿಷಯ ಇಂಗ್ಲೀಷ್ ಐಚ್ಛಿಕ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು.
- ವಯೋಮಿತಿ 30–40 ವರ್ಷಗಳು:
- 3–4 ವರ್ಷಗಳು ಮೇಲ್ಕಂಡ ವಿಷಯಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅನುಭವವಿರಬೇಕು.

***ಶಿಕ್ಷಣ ಮತ್ತು ಅನುಭವಗಳಿಗನುಸಾರವಾಗಿ ವೇತನವನ್ನು ನಿಗಧಿಗೊಳಿಸಲಾಗುವುದು.
ಆಸಕ್ತ ಅಭ್ಯರ್ಥಿಗಳು ಬಯೋಡೇಟಾ ಮತ್ತು ಪದವಿ ಪತ್ರಗಳನ್ನು ಇತ್ತೀಚಿನ ಭಾವಚಿತ್ರದೊಂದಿಗೆ ಪೋಸ್ಟ್ ಅಥವಾ ಇಮೇಲ್ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.
ಎಚ್ ಆರ್ ವಿಭಾಗ,
ಆಶ್ರಮ ಶಾಲೆ, # 11, 18ನೇ ಮುಖ್ಯ ರಸ್ತೆ, ಪದ್ಮನಾಭನಗರ, ಚಿಕ್ಕಲಸಂದ್ರ, ಬೆಂಗಳೂರು – 560 061
ಇಮೇಲ್ : vanaja@kng.org.in

WANTED ENGLISH Medium Trained LADY TEACHERS for Nursery/ Primary/ Higher Secondary for teaching English; Maths; Science; E.V.S; Social Studies; Hindi; Physical Education Teacher (Female/ Male) and PUC/ Graduate Mistresses. Walk-in Interview 10.00 am to 2.00 pm. Decent Salary. New Oxford English School, #185, VI Cross, Gandhinagar, Bangalore-09. Phone: 22261590/ 41475015. Email: noes.school@gmail.com

WANTED ENGLISH MEDIUM EXPERIENCED MASTERS to Coach Maths and Science For VIII and IX Standard. Class Timing: 6.00 pm to 9.00 pm Age limit: 30- 45 years. Contact in person between 5.00 pm- 6.00 pm (Monday to Friday) Deccan Educational Society, No. 95, 3rd Cross, Srirampuram, Bengaluru– 560021 (Near Sampige Theater, Malleswaram).

REQUIRES LADY trained Nursery Teachers,walkin Between 10.30-1pm with the Secretary, Srikrishna International School, ITI-Layout,BSK 3rd Stage, Bangalore-85. 08026690799.

BHARATHI GROUP OF INSTITUTIONS
REQUIRED
ACADEMIC CO-ORDINATOR & TEACHERS For All Subjects
Pre-Primary, Primary & High School.
Freshers May Also Apply
Send Resumes at:
Ph: 9900046660/ 8277654873/ 7012165635
R.T.Nagar, Yelahanka

HERITAGE PUBLIC SCHOOL, Srinidhi Layout, J.P.Nagar 8th Phase, Konanakunte, Bengaluru-62, Requires: English Teachers For Primary, Kindergarten Teachers and a Computer Teacher. Attractive Salary Graduates can also apply Call 080-26322111/ 9901733776.

GURUKULA INTERNATIONAL School requires Nursery Teachers, For primary Maths, English, Computer Teachers and lady accountant with Kannada Typing. 9th Cross, Near Magadi Road Metro Station Bangalore-23. 7829338292 7676676629

WANTEDTEACHING STAFF & Non Teaching/ Assistant Head Master/ Academic Co-ordinators Fresher/ Experienced Teachers English/ Science (PCM) (CBZ) Maths/ Social/ Hindi/ Kannada/ Computer Good Salary with ESI/ PF/ NTTC/ PUC/ BA/ BCom/ DEd Tch/ BSc./ BE/ B.Tech/ BEd / Etc. Failed or Passed Candidates. WALK IN INTERVIEW, ALL WORKING DAYS B/w 10.30 AM TO 4.00PM MATHA'S INTERNATIONAL SCHOOL ICSE, MATHA'S ENGLISH HIGH SCHOOL State Syllabus English Medium, #55/2B, 11th K.M. Hosur Main Road, Garuve Bhavi palya Bangalore-68. M: 9606831599/ 9449814917/ 8277257669/ 8277256859/ 8277258609

ST.SOPHIA CONVENT School (CBSE) Nagarabhavi requires trained experienced Teachers to teach Social science, English, Computers for primary and High school. Mail us on principal@stsophiaconvent.org 9243031872

VISHWABHARATHI PUBLIC HIGH SCHOOL No.142, 1st A Main Road,Shakthi Garden, Moodalpalya, Nagarbhavi 1st Stage, Bangalore-560072. REQUIRED Teachers for Maths, Science, Social & Kannada for Primary and high School Contact immediately: 7406535818 / 9739395399 / 080 - 23117744

ARVIND Residential School & PU College, Kunigal
Ph: 08132-210000/ 01. Mob: 9483683002/ 005.
Website: www.arvindinternationalschool.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURERS (Physics, Biology & English)
  Well Experienced NEET & JEE faculties
- Nursery/ Primary/ Middle School/ High school Teachers (ICSE/ CBSE & STATE)
- Nurse (F)

Experienced in all streams with desired qualification
Send your resume with recent passport size photo to airsjobs@gmail.com within 5 days

B G National Public School, Papareddypalya, Nagarbhavi. Required Qualified TEACHERS for Nursery,Primary & High School Social Science, Contact: 9880064948/ 08023213109 Mail: bgnps@yahoo.com

VIDYAVAHINI ENGLISH SCHOOL Anandnagar Bangalore-24 Requires, Maths, Science, Nursery, B'PEd Computer Teachers Email:principalvvesrsect.edu.in, Call:9343865939

SRPS SCHOOL at Rajagopalnagar Peenya 2nd Stage, Bangalore-58. Requires Experienced and qualified MATHS TEACHER to handle Primary and High School section. Contact: 9986606975 9742483348

WANTED TEACHERS for IMMEDIATE APPOINTMENT SUBJECTS:MATHS, SOCIAL,ENGLISH, HINDI, PE(Female) and Admin.Contact: St.YASH PUBLIC SCHOOL.Phone: 9066242255

KENNETH GEORGE SCHOOL Req Teachers for All Subjects, PE/ Lib/Life skills R.T.Nagar & Kempapura 7760226869 kennethgeorgeschool@gmail.com

FRANK PUBLIC SCHOOL, JP Nagar Requires PRINCIPAL HIGH SCHOOL TEACHERS FOR ENGLISH, SOCIAL STUDIES AND HINDI. Post Your Resume to: rumysud@gmail.com

WANTED QUALIFIED Experienced Nursery, Primary Teachers for all Subjects Royal English School Rajajinagar: 9611878492/ 8861406060/ 8317499221

WANTED EXPERIENCED English Medium Qualified and Trained TEACHERS for Montessori (Baby Sitting)/ Nursery/ Primary/ Higher Secondary for Teaching English: Social Science: Maths: General Science: PHYSICAL EDUCATION TEACHER/ ADMINISTRATOR. Submit Resumes to: S.S.K. Sangha, 2, K.V. Temple Street, Near Balepet Circle, Bangalore-53. Between 11 am to 6 pm. Phone: 080-22872226/ 41170226, Mobile: 8050004466 E-Mail: ssksangha@gmail.com

REQUIRES TEACHERS For Primary, High School, All Subjects, Contact Immediately Principal: 9880800758 G.K. Convent Basaveshwaranagara Bangalore

TEACHERS WANTED LKG To 10th Std Teachers, English Medium in all Subjects SAGAR CONVENT Kanakapura Main Road Bangalore- 82 Near APS Engineer College: 9342552428

REQUIRED TRAINED Graduate to teach Science, Computer, English, Social Science for Primary/ High school in reputed ICSE school in KalyanNagar. 9945827600.

WANTED, NURSERY, PRIMARY, HIGH SCHOOL TEACHERS for English Medium School in Hanumanthnagar. Call: 26604512 (between 10- 2)

SURYODAYA GROUP of Institutions @Thirupalya, near Electronic City, Bangalore-99.Required TEACHERS & LECTURERS for School/ PU College (Commerce & Science) /Degree. Contact immediately 8296261228/ 7975796544Share CV's: principal.suryodaya@gmail.com

WANTED MINIMUM 5 years experienced Computer Science Lecturer is required immediately, for a walk-in interview call on 080-28486194 or 9980007194. Mail Id- nnpu2019@gmail.com Address: New National PU College, 80 Feet Road, Kengeri Satellite Town, Bangalore- 560060.

NIRMAN INTERNATIONAL PUBLIC SCHOOL, Near Automated RTO 7th Block Vishweshwaraiah Layout Bangalore-91. Requires Qualified TEACHERS for Nursery, Chemistry & Biology, Social, English and PE for HighSchool. Contact: 9986055970 Email: nirmanorganisation@gmail.com

REQUIRED TEACHER for Kannada and Mathematics for the Kenmore School 31, Kanakapura road, Basavanagudi, near Lalbagh west gate Bangalore 04 kenmoreschool@gmail.com 9901501185

WANTED 5 years EXPERIENCED High School Science, Primary Maths Teacher, B.Ped teacher for School at Electronic City. 8197984094/ 7406532264.

REQUIRED TRAINED & Exp Lady Teachers for High School & Primary for all Subjects, Physical Edu, Music, Art, Craft Hebbal, Ph:9008981637/ 22330003

SURANA VIDYALAYA
WE ARE HIRING Competent & Caring Teachers
QUALIFICATION
Bachelor Degree with B.Ed (TGT), Masters with B.Ed (PGT)
SUBJECT : KANNADA, HINDI, MATHS SOCIAL STUDIES & ENGLISH, (FOR ALL GRADES)
Send your Resume to hr@suranavidyalaya.org
91080 29846
suranavidyalaya.org

ABACUS TEACHER Wanted experienced Female, near Madanayakanahalli, 8th Mile Circle, 9000, Petrol Conveyance. 9741806319.

EUROKIDS PRESCHOOL Requires Teachers with Good Communication Skills With or Without Experience. Contact- 9845744839.

TEACHERS WANTED 1st to 8th Std, Sub: Science and Hindi Teachers Mavali Near Lalbagh Bangalore Good Salary: 9611165828

WANTED TEACHERS with BA/MA, MSc/BSc, with BEd Eng/ Hin, NTT, MCA, MLib, Salary 14000 to 25000. Contact Sidhartha International School, Peenya, Dasarahalli. Ph: 9620100046, 9964670328

WANTED TEACHERS FOR NURSERY, PRIMARY AND HIGH SCHOOL B.Sc,B.Ed (CBZ) CONTACT: INDIAN CAMBRIDGE SCHOOL, NANDINI LAYOUT,BLORE PH: 9342673643

WANTED LADY TEACHERS B.A B.Ed, B.Sc B.Ed, BPEd to teach English, Mathematics, Science, Computer Science for Primary, Middle and High School. Trained Post graduates and Graduates from any other discipline can also apply. NALANDA ENGLISH SCHOOL, JP.Nagar. Contact: 9448484430.

Engg/ Production Technical

WANTED ELECTRICIANS
Required Fresh ITI Passed Electricians
(Candidates within 25 Yrs of age only can apply) for immediate placement in reputed organisation based in Bangalore. Candidates should be well trained in Wiring / Drilling / Soldering etc & all types of electrical skill sets.
Salary RS.18,000/- Net + Perks.
Interested Candidates may apply to:- resume@multeeproe.com

WANTED FOR an ISO 9000 sheet metal industry located Hoskote Industrial Area. Production supervisor with ITI/ DME with minimum 5 years experience./ Design Engineers with 3D sheet metal Modelling with DME/ BE with 3 years experience/ CNC punch press operators/ Tig Welder/ QA inspectors with DME/ ITI qualification. Send Resume to EMail: ganesh@generalind.com or call 9448121604

WANTED MECHANICAL ENGINEERS & DIPLOMA HOLDERS as machine shop trainee for an aircraft component manufacturing industry. Training period 1 year, stipend 6 months- Rs.12000, balance period Rs.14000. Mail your resume to mail@ayyappa-cnc.com Ph: 9845012616

REQUIRED PLUMBING ENGINEERS/ PLUMBING SUPERVISORS Diploma/ BE Civil with 3- 5 years experience. 9980799996/ sridhar@vinayaka-plumbing.com

Domestic Helpers / Housekeeping

FMS EXECUTIVE & Housekeeping Supervisors:- Language Kannada, Hindi, English Age limit 25 to 35 yrs. Experience 3 to 5 yrs. Immediate Appointment. Contact at: 9902322072/ 9916316254.

General

JOBS AVAILABLE at Dr.Giridhara Kaje's Prashanthi Ayurvedic Centre 31/85 Chord Road, IInd Block Rajajinagar Hospital BRANCH ASSISTANT for HSR layout, SAHAKARANAGAR, MATHIKERE MALLESHWARAM. 20- 40 years any Degree or Diploma M/F Walk-in-Interview at Rajajinagar Hospital 18/05/2022 and 19/05/2022. Time: 9 AM to 6 PM. Call 9980538538.

JOB OFFER for Web Designer with E-Com. Grateful apparels- Bengaluru. Exp: 3- 4 years in Garments House. Salary: Negotiable. E-mail: hrblr@gilwoodfashions.com Phone: 84312 90374.

VEGETARIAN COOK, Office Boy, Admin Officer (Age 50+ years) required for Retirement Home near Bangalore (Hosur). Contact 9591574690 ramanashraya@gmail.com

Marketing & Sales

WANTED EXPERIENCED SALES EXECUTIVES in INDUSTRIAL MARKETING, general assistant Contact: AMIT INDUSTRIES chowdareddy. 9341330383, 9739826852

WANTED SALES BOYS/GIRLS. CONTACT;- KIDSKINGDOM MALLESWARAM. PHONE; 9341943491/ 080-23461514.

Multiple Vacancy

REQUIRE SALES Representative /Engineer -Mining At Millennium Red Dot Pvt Ltd, Bengaluru, Diploma Mechanical/ graduate with 5-6years' exp in sales of equipment/spare parts in Mining/Cement Industry, well versed in Hindi +English, willing to travel min 15-20 days/month). Apply to shruti.khavnekar@millennium.in or WhatsApp contact:7506308747 /9820498737. www.millenniumreddot.in

OPPORTUNITY FOR Retired Officials, Bankers,NRI, Teachers, Professionals, Homemakers, CAs.Earn salary + Incentives. CALL: 8095301555

Office Boys/ Peon

REQ OFFICE Assistant Cum DeliveryBoy with Good English, License in Mathikere/Peenya Age-30 Years Pay-17k :9008519999 acefabricos5@gmail.com

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

REPUTED MNC COMPANT will Provide WORK FROM HOME, Earn 30000 to 35000 Malleshwaram. Contact: 7019215243/ 9886641282

Wanted

WANTED SECURITY Guards/ Supervisor/ F.O Officer/ Marketing/ Ex. Servicemen/ Civilian (Jakkur Area) Contact: 9986569896, 9964343454

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23307910/ 9108458798

REQUIRED STAFF for a Leading Pharma Distributor company, Store Delivery Sales, Salary + PF + ESI. Call: 9916902503

REAL ESTATE SELLING

Industrial & Factory

Tumkur Road

SALE, INDUSTRIAL, Warehouse, Agriculture Land, 5/ 10/ 20/ 60/ 100 acres around Nelamangala, Dabaspet. 9141326819

Residential/ Commercial

Koramangala

KORAMANGALA DUPLEX flat 3600 sqft In first A main road s t bed price 5cr Dilip 9903240091

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

ADMISSION CORNER

SACRED HEART GIRLS' HIGH SCHOOL
Museum Road, Bangalore - 560025
ISC Grade 11 Admission
OPEN FOR 2022 - 23
Enroll Now @ shghsblr.com
HR & ISC QUERIES: 8105850131, 8970711094

SOCIAL SERVICES

Old Age Home

OLD AGE Home Banashankari with food, medical facilities, transportation, part at reasonable rent for details phone. 9342410224/ 8660514384.

OTHERS

Furniture & Furnishings

pan Office Systems Pvt. Ltd.
SCHOOL FURNITURE
Check PAN's range of Classroom furniture to encourage social distancing
No. 3/4 Langford Road, Setlur Street, Bengaluru - 560025
9341221125
sales@panofficesystems.com

PERSONAL

Change of Name

I, SERVICE No. 2597110-L Rank Ex-Nk Name: KANNAIAH NAIDU.K S/o Late Krishnamurthy GCK R/a#29 Sri Laksmi Venkateshwara Nilaya DR Chandregowda Layout Hoskote Taluk Devanagundi Village & Post Bangalore- 560067 Have Changed My Son's Name VAISHNAVI PRASAD N.K to VAISHNAV PRASAD K (DOB 09-03-2004) Vide Affidavit Dated 16-5-2022 Before Notary AR MuneerAhmed Bangalore

I, YARRAPAREDDY Ramjaikar, Residing at No.D16, House No.38-157, KLD Road Dwaraka Villas, A. Narayanapura Village Anantapuramu Rural & Dist. 515004 have changed my nameto YERRAPAREDDY RAMJAIKAR S/o.Yarrapa Reddy Rajanikanth Reddy vide affidavit dated: 17.05.2022 Sworn before notary: N.Anand

I, KOTHANDA RAM S/o. Late. Ashnatha Narayan aged about 47 years R/at. No. 08, Lingaiahnapalya, 2nd Cross, Halasuru, Bangalore- 560008, have changed my name to A. KODHANDA RAMA S/o. Late. Ashwathanarayan vide affidavit dated 17.05.2022, before notary Sivakumara M.N, Bengaluru.

I, BABA SRAVAN E S/o E S S BALAJI KUMAR R/o #202, 2nd floor, rama nilaya, site 73, Royal Gardeenia layout, Bommasandra, B'lore- 560099 have changed my name to BABA SRAVAN for all purposes.

14825591P HAV/MT DURGA PRASAD JAISWAL 2ATC DAUGHTER Name records SHAM BHVI Instead of SHAM BHAVI Notary HARISHA G Bangalore

I, MUKESH KUMAR RAJMAL S/o. Rajmal Babel R/a #12, 25/2 Bhagyamma Nivas, 1st 'A' Main, Chinnappanahalli, Anantharam Reddy Layout, Bengaluru- 560037 Have Changed My Name to MUKHESH KUMAR RAJMAL JAIN vide Affidavit Dated 17-5-2022 Before Notary H.S. Sakalesh Aradhya, Bangalore

I, PRIYANKA Kumari W/o Parmanand Singh Residing at No.179, Banjara Layout Main Road, Horamavu Agara, Bangalore- 560043. have changed my name to PRIYANKA SINGH vide affidavit dated 16.05.2022 before notary B. Seshagiri, Bengaluru

HEMLATA JAISWAL W/O 14825591P HAV/MT DURGA PRASAD JAISWAL R/A SADHUA RANGRACHOWK BHAGALPUR BIHAR MY NAME HEMLATA JAISWAL TO HEMALATA JAISWAL Notary HARISHA G Bangalore

HANSA, WIFE/O. JC681768K SUB/ASH, RAMANI VASRAM BHAI BHOJA BHAI, Vill- Changa, Jamnagar, Gujarat, changed name from HANSA to RAMANI HANSABEN VASARAMBHAI, 17/05/2022 Notary K.V. Mani, Bangalore

GAYA PRASAD F/o 14827192K- Hav- RAMESH KUMAR R/a #370, Moga, Moga, Punjab changed name from GAYA PRASAD to GYA PARSHAD notary K.V.Mani, Bangalore.

KANUPRIYA W/O 14825596N HAV KESHAV KUMAR R/A KABELA PARBAHA KHAGARIA BIHAR MY NAME KANUPRIYA TO KANUPRIYA DEVI Notary HARISHA G Bangalore

BOBBY W/O 14831253N SEP BHUPENDRA KUMAR R/A RANKHANDI DEOBAND SAHARANPUR U P MY NAME BOBBY TO BOBI Notary HARISHA G Bangalore

14816833L HAV/MT RAJESH KUMAR TIWARI 2ATC MOTHER Name records SAYAM KALI Instead of SHYAMAKALI TIWARI Notary K.V MANI Bangalore

14816859A HAV RAKESH SINGH 2ATC SON Name records TANAMAY SINGH Instead of TANMAY SINGH Notary HARISHA G Bangalore

14816763X HAV SANJAY KUMAR 2ATC MOTHER Name records NATGH DEVI Instead of NATTHI DEVI Notary HARISHA G Bangalore

Lost

I,NAIR NANDKUMAR.P have lost my Predegree marklist with register no 18305 dt 26th July 1982 issued by Calicut University. Finder call 9447483300

I, SHASHI Shekhar Malhotra, a student of Sunrise (English Medium) School, Howrah, West Bengal, have irretrievably lost my ICSE Pass Certificate, year of passing 2012 with Index number T/2869/023 If anybody found please Call: 9611938478/ nearby police station.

I, SHASHANKA Shekhar Malhotra, a student of Sunrise (English Medium) School, Howrah, West Bengal, have irretrievably lost my ICSE Pass Certificate, year of passing 2012 with Index number T/2869/145 If anybody found please Call: 9611938421/ nearby police station.

PUBLIC NOTICE

PUBLIC NOTICE

Our client intends to purchase the following lands situated at **Adde Vishwanathapura Village, Hessaraghatta Hobli, Bangalore North Taluk:**

Item No. I : Sy.No.74/5, measuring **2 Acres,** Converted for Residential Purpose, vide order bearing No.A.L.N (NA)(HA)S.R. 26/2011-12, dated 08/12/2011 and bounded on :
East by : Sy.No.74/16;
West by : Road & Remaining Property;
North by : Sy.No.74/4
South by : Sy.No.74/6.

Item No. II : agricultural land bearing **Sy.No.74/16,** measuring **1 Acre 36 Guntas** and bounded on the :
East by : Sy.No.73/1;
West by : Sy.No.74/5;
North by : Sy.No.74/4
South by : Sy.No.74/6.

from its Owner Smt.Rupila Mehra wife of Late Shri. Romesh Mehra

Persons having any right over the said property may lodge their objections/claims with documentary evidence within **10 days** from date of publication, to the undersigned.

PRASHANTH VIJAYALAKSHMI & ASSOCIATES, Advocates,
No.162, 1st Floor, Above Venkateswara Mobile Store, Next to Kanthi Sweets, 2nd Main Kasturinagar, Bangalore-43. Ph : 080-42065536.


HEALTH SPECIAL

HHCC HEARING HEALTH CARE CLINIC®
OREVA RS CHAIN OF HEARING CLINICS

ಹಿಯರಿಂಗ್ ತೊಂದರೆಯೇ?

ಮತ್ತೊಮ್ಮೆ ಕೇಳಬೇಡಿ, ಚಿಕಿತ್ಸೆಗಾಗಿ ನಮ್ಮನ್ನು ಸಂಪರ್ಕಿಸಿ.

- ಶಕ್ತಿಯುತ ಅದೃಶ್ಯ ಶ್ರವಣ ಸಾಧನ ಲಭ್ಯ
- ರಿಚಾರ್ಜ್ ಮಾಡುಬಹುದಾದ ಶ್ರವಣ ಸಾಧನ



ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್ ಎಸ್
ಶಾಖೆಗಳು: ಆರ್‌ಟಿ ನಗರ । ಕೊಡಿಗೇನಹಳ್ಳಿ । ಯಲಹಂಕ । ವಿಜಯನಗರ । ಸಹಕಾರ ನಗರ । ಹೆಗಡೆ ನಗರ । ರಾಜಾಜೀನಗರ
ಇತರೆ ಶಾಖೆಗಳು : ಬಳ್ಳಾರಿ । ಬಾಗಲಕೋಟೆ । ಹುಬ್ಬಳ್ಳಿ । ದಾವಣಗೇರೆ । ವಿಜಯಪುರ । ಕಲಬುರ್ಗಿ । ಬೆಳಗಾವಿ
99456 11100
www.hearingc.com | www.orevarehab.com

‘ಆರೆಸ್ಸೆಸ್ ಆಣತಿಯಂತೆ ಸರ್ಕಾರದ ನಡೆ’

ಬೆಂಗಳೂರು: ಶಾಲಾ ಪಠ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟದ ಮಹತ್ವ ತಿಳಿಸುವಂತಹ ಪಠ್ಯಗಳನ್ನು ಕೈಬಿಟ್ಟು, ದುರುದ್ದೇಶ ಮತ್ತು ಜಾತಿ ಪ್ರೇಮದ ಕಾರಣಕ್ಕೆ ಒಂದು ನಿರ್ದಿಷ್ಟ ಜಾತಿಗೆ ಸೇರಿದ ಬರಹಗಾರರ ಪಠ್ಯಗಳನ್ನು ಅಳವಡಿಸಲು ಹೊರಟಿರುವುದು ವಿಪರ್ಯಾಸದ ಸಂಗತಿ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.

ಕ್ರಾಂತಿಕಾರಿ ಹೋರಾಟಗಾರ ಭಗತ್ ಸಿಂಗ್, ಬಸವಣ್ಣನವರ ವಚನಗಳು, ಲಂಕೇಶರ ಬರಹಗಳು ಮತ್ತು ವೈಚಾರಿಕತೆಗೆ ಹೆಸರಾಗಿದ್ದ ಎ.ಎನ್. ಮೂರ್ತಿ ರಾಯರ ಬರಹಗಳಿಗೆ ಕತ್ತರಿ ಹಾಕಿರುವುದು ಸರ್ಕಾರದ ಅಯೋಗ್ಯ ವರ್ತನೆಗೆ ಸಾಕ್ಷಿಯಾಗಿದೆ. ತಮ್ಮದು ಮಾತ್ರವೇ ಇರಬೇಕು, ತಮ್ಮದೇ ನಡೆಯಬೇಕು ಎಂಬ ಕೆಟ್ಟ ಬ್ರಾಹ್ಮಣ್ಯದ ಕೆಟ್ಟತನ ಇದರ ಹಿಂದಿದೆ ಎಂದು ಅವರು ದೂರಿದ್ದಾರೆ.

‘ನಾಗೇಶ್ ಅವರೇ, ನೀವು ಸಂವಿಧಾನಾತ್ಮಕ ವ್ಯವಸ್ಥೆಯ ಪ್ರತಿನಿಧಿಯೇ ಹೊರತು ಆರ್‌ಎಸ್‌ಎಸ್ ಎಂಬ ಜನ ವಿರೋಧಿ ಸಂಘಟನೆಯ ವಕ್ತಾರರಲ್ಲ ಎಂಬುದು ನೆನಪಿರಲಿ. ಕೆಲವು ತಲೆ ಹರಟೆಗಳನ್ನು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಗೆ ಆಯ್ಕೆ ಮಾಡಿರುವ ಸರ್ಕಾರದ ನಡೆಯೇ ಸರಿಯಿಲ್ಲ. ಪೂರ್ವಗ್ರಹ ಪೀಡಿತರನ್ನು ತೆಗೆದುಹಾಕಿ, ಶಿಕ್ಷಣ ತಜ್ಞರು, ಇತಿಹಾಸಕಾರರನ್ನು ನೇಮಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಬಿಬಿಎಂಪಿಯಿಂದ ಮೂವರ ಹೆಸರು ಶಿಫಾರಸು

ಎಂಜಿನಿಯರಿಂಗ್ ವಿಭಾಗ ಯಾರಾಗಲಿದ್ದಾರೆ ಮುಖ್ಯಸ್ಥ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಎಸ್.ಪ್ರಭಾಕರ್ ಅವರು ಈ ವರ್ಷದ ಏಪ್ರಿಲ್‌ನಲ್ಲಿ ವಯೋನಿವೃತ್ತಿ ಹೊಂದಿದ್ದು, ಈ ಹುದ್ದೆ ಖಾಲಿ ಇದೆ. ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರ ಈ ಹುದ್ದೆಗಾಗಿ ಪಾಲಿಕೆಯ ಮೂವರು ಮುಖ್ಯ ಎಂಜಿನಿಯರ್‌ಗಳ ಮಧ್ಯೆ ಪೈಪೋಟಿ ಇದೆ.

ಹುದ್ದೆಗೆ ಅರ್ಹ ವ್ಯಕ್ತಿಯ ನೇಮಕಕ್ಕೆ ನಗರಾಭಿವೃದ್ಧಿ ಇಲಾಖೆಯು ಪ್ರಕ್ರಿಯೆ ಆರಂಭಿಸಿದೆ. ಬಿಬಿಎಂಪಿಯು ಈ ಹುದ್ದೆಗೆ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಪಿ. ವಿಶ್ವನಾಥ್, ಯಲಹಂಕ ವಲಯದ ಮುಖ್ಯ ಎಂಜಿನಿಯರ್ ರಂಗನಾಥ್ ಹಾಗೂ ರಸ್ತೆ ಮತ್ತು ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರ ಹೆಸರುಗಳನ್ನು ಶಿಫಾರಸು ಮಾಡಿತ್ತು.

ಪ್ರಜಾವಾಣಿ ವಿಶೇಷ

ಈ ಮೂವರಲ್ಲಿ ಪ್ರಹ್ಲಾದ್ ಅವರ ಹೆಸರನ್ನು ನಗರಾಭಿವೃದ್ಧಿ ಇಲಾಖೆಯು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಆದರೆ ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿ ಅವರ ತೀರ್ಮಾನಕ್ಕೆ ಬಿಡಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಈ ಮೂವರಲ್ಲಿ ರಂಗನಾಥ್ ಹೆಚ್ಚು ಸೇವಾ ಹಿರಿತನ ಹೊಂದಿದ್ದಾರೆ. ನಗರಸಭೆಯಿಂದ ಬಿಬಿಎಂಪಿಗೆ ಬಂದ ಅವರಿಗೆ ಇನ್ನೂ ಮೂರು ವರ್ಷಗಳ ಸೇವಾವಧಿ ಬಾಕಿ ಇದೆ. ಆದೆ, ಅವರ ವಿರುದ್ಧದ ಕೆಲ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ.

ಶಿಫಾರಸುಗೊಂಡ ಇನ್ನಿಬ್ಬರಲ್ಲಿ ಪಿ.ವಿಶ್ವನಾಥ್ ಹೆಚ್ಚಿನ ಸೇವಾ ಜ್ಯೇಷ್ಠತೆ ಹೊಂದಿದ್ದಾರೆ. ಅವರು ಎಸಿಬಿ ಅಥವಾ ಇಲಾಖಾ ವಿಚಾರಣೆ ಎದುರಿಸುತ್ತಿಲ್ಲ. ಯಾವುದೇ ಗುರುತರ ಆರೋಪಗಳೂ ಅವರ ಮೇಲಿಲ್ಲ. ಅವರಿಗೆ ಇನ್ನು ಒಂದು ವರ್ಷದ ಸೇವಾ ಅವಧಿ ಮಾತ್ರ ಬಾಕಿ ಇದೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ಯಾರಿಗೂ ಬೇಡವಾಗಿತ್ತು ಹುದ್ದೆ

ಟೆಂಡರ್ ಕಡತಗಳಿಗೆ ಈ ಹಿಂದೆ ಪ್ರಧಾನ ಎಂಜಿನಿಯರ್ ಅವರೂ ಟಿಪ್ಪಣಿ ಬರೆಯುತ್ತಿದ್ದರು. ಕ್ರಮೇಣ ಈ ಹೊಣೆಗಳನ್ನು ಹಿಂಪಡೆಯಲಾಗಿತ್ತು. ಆ ಬಳಿಕ ಪ್ರಮುಖ ತೀರ್ಮಾನಗಳೆಲ್ಲವೂ ಮುಖ್ಯ ಎಂಜಿನಿಯರ್ ಹಂತದಲ್ಲೇ ನಡೆಯುತ್ತಿದ್ದುದರಿಂದ ಈ ಹುದ್ದೆ ವಹಿಸಿಕೊಳ್ಳಲು ಎಂಜಿನಿಯರ್‌ಗಳು ಹಿಂದೇಟು ಹಾಕುವ ಸ್ಥಿತಿ ನಿರ್ಮಾಣವಾಗಿತ್ತು. ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಎಲ್ಲ ಕಡತಗಳು ಮತ್ತು ಮಾರ್ಪಾಡುಗಳಿಗೆ ಸಂಬಂಧಿಸಿದ ಕಡತಗಳ ಹೊಣೆಯನ್ನು ಪ್ರಧಾನ ಎಂಜಿನಿಯರ್‌ಗೆ 2021ರಲ್ಲಿ ಮತ್ತೆ ವಹಿಸಲಾಗಿತ್ತು. ತದನಂತರ ಈ ಹುದ್ದೆಗೆ ಪೈಪೋಟಿ ಶುರುವಾಗಿದೆ.

‘ಈ ಹುದ್ದೆಯ ಆಕಾಂಕ್ಷಿಯಾಗಿರುವ ಪ್ರಹ್ಲಾದ್ ಅವರಿಗೆ ಇನ್ನೂ 11 ವರ್ಷಗಳ ಸೇವಾವಧಿ ಇದೆ. ವರಮಾನಕ್ಕಿಂತ ಹೆಚ್ಚು ಆಸ್ತಿ ಗಳಿಸಿದ್ದ ಪ್ರಕರಣ ಇವರ ವಿರುದ್ಧ ದಾಖಲಾಗಿತ್ತು. ಆದರೆ, ಈ ಪ್ರಕರಣದಲ್ಲಿ ಎಸಿಬಿ ಬಿ–ವರದಿ ಸಲ್ಲಿಸಿತ್ತು. ತಮ್ಮ ವಿರುದ್ಧದ ಟಿಡಿಆರ್ ಅಕ್ರಮ ಪ್ರಕರಣವೂ ಸೇರಿ ಕೆಲವು ಪ್ರಕರಣಗಳಿಗೆ ತಡೆಯಾಜ್ಞೆ ಪಡೆದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಬಿಬಿಎಂಪಿಯ ಈ ಪ್ರಮುಖ ಹುದ್ದೆಗೆ ಅರ್ಹರನ್ನು ಆಯ್ಕೆ ಮಾಡುವ ಸಲುವಾಗಿ ಕಳೆದ ವಾರ ಇಲಾಖಾ ಬಡ್ತಿ ಸಮಿತಿಯ ಸಭೆಯೂ ನಡೆದಿದೆ. ಎಂಟು ವಲಯಗಳು, ಯೋಜನೆ ಕೇಂದ್ರ, ರಸ್ತೆ ಮೂಲಸೌಕರ್ಯ, ರಾಜಕಾಲುವೆ ಹಾಗೂ ಕೆರೆ ವಿಭಾಗಗಳು ಸೇರಿ ಒಟ್ಟು 12 ಕಾಮಗಾರಿ ವಿಭಾಗಗಳು ಬಿಬಿಎಂಪಿಯಲ್ಲಿವೆ. ಈ ಎಲ್ಲ ವಿಭಾಗಗಳ ಕಾಮಗಾರಿಗಳ ಮಾಹಿತಿಗಳನ್ನು ಪ್ರಧಾನ ಎಂಜಿನಿಯರ್ ಅವರ ಕಚೇರಿಯು ತಾಂತ್ರಿಕವಾಗಿ ಪರಿಶೀಲಿಸಿ, ನಿರ್ವಹಣೆ ಮಾಡುತ್ತದೆ.

ಬಿಜೆಪಿ ಮತ್ತದರ ಪಟಾಲಂನ ವಿಕೃತಿ: ಕುಮಾರಸ್ವಾಮಿ ಟೀಕೆ

ಬೆಂಗಳೂರು: ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಅವರ ಭಾಷಣದ ಬರಹರೂಪವನ್ನು ಹತ್ತನೇ ತರಗತಿ ಪಠ್ಯಕ್ಕೆ ಸೇರಿಸಿದ್ದಕ್ಕೆ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಮಹಾನ್ ರಾಷ್ಟ್ರಪ್ರೇಮಿ, ಬ್ರಿಟಿಷರಿಗೆ ಸಿಂಹಸ್ವಪ್ನ, ಭಾರತಮಾತೆಯ ಹೆಮ್ಮೆಯ ಪುತ್ರ ಸರ್ದಾರ್ ಭಗತ್ ಸಿಂಗ್ ಅವರ ಪಠ್ಯಕ್ಕೆ ಕೊಕ್ ಕೊಟ್ಟು, ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೇವಾರ್ ಕುರಿತ ಮಾಹಿತಿಯನ್ನು ಪಠ್ಯಕ್ಕೆ ತುರುಕುತ್ತಿರುವ ಬಿಜೆಪಿ ಮತ್ತವರ ಪಟಾಲಂ ವಿಕೃತಿಗೆ ಇದು ಪರಾಕಾಷ್ಠೆ’ ಎಂದು ಕುಮಾರಸ್ವಾಮಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ.

‘ಭಗತ್ ಸಿಂಗ್ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಗಲ್ಲಿಗೇರಿದರು. ಸಂಘ ಪರಿವಾರಿಗಳು ಅದೇ ಬ್ರಿಟಿಷರಿಗೆ ಪರಿಚಾರಿಕೆ ಮಾಡಿಕೊಂಡು ಸ್ವಾತಂತ್ರ್ಯಕ್ಕಿಂತ ಗುಲಾಮಗಿರಿಯೇ ಲೇಸೆಂದುಕೊಂಡಿದ್ದರು. ಇಂಥವರು, ಭಗತ್ ಸಿಂಗ್‌ರಂಥ ರಾಷ್ಟ್ರಪ್ರೇಮಿಗಳನ್ನು ಸಹಿಸಿಕೊಳ್ಳುತ್ತಾರೆಯೇ?’ ಎಂದು ಪ್ರಶ್ನಿಸಿದ್ದಾರೆ.

‘ಪಠ್ಯವನ್ನು ವಿಕೃತಿಗೊಳಿಸುತ್ತಿರುವುದು ಎಂದರೆ, ಕನ್ನಡ ಅಸ್ಮಿತೆಯನ್ನು ಹತ್ತಿಕ್ಕುವ ಪಾತಕ ಯತ್ನ. ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು, ಪ್ರಶ್ನಿಸಬೇಕು. ಹೋರಾಟಕ್ಕೂ ಇಳಿಯಬೇಕು. ಅಯ್ಯೋ.. ಕರ್ನಾಟಕ ಕಟುಕರ ಕೈಯಲ್ಲಿ ಸಿಕ್ಕಿಕೊಂಡಿದೆ!

‘ಪಠ್ಯಪುಸ್ತಕಗಳನ್ನು ‘ಪಕ್ಷಪುಸ್ತಕ’ಗಳನ್ನಾಗಿ ಮಾಡುವ ವ್ಯವಸ್ಥಿತ ಹುನ್ನಾರಕ್ಕೆ ನನ್ನ ಧಿಕ್ಕಾರವಿದೆ. ಬಿಜೆಪಿಯ ನೈಜ ಬಣ್ಣದ ವಿಸ್ತೃತರೂಪವೇ ಆಯ್ದ ಪಠ್ಯಗಳನ್ನು ಟಾರ್ಗೆಟ್ ಮಾಡಿ ಡಿಲೀಟ್ ಮಾಡುವುದು.

‘ಬಿಜೆಪಿಯ ಈ ಬುಡಮೇಲು ಕೃತ್ಯಗಳ ಬಗ್ಗೆ ನನಗೆ ಅಚ್ಚರಿಯೇನೂ ಇಲ್ಲ. ನನ್ನ ಜತೆ ಮೈತ್ರಿ ಸರಕಾರ ಮಾಡಿದಾಗ ಅವರ ಬೇಳೆ ಬೇಯಲಿಲ್ಲ. ಆಪರೇಷನ್ ಕಮಲದ ಅನೈತಿಕ ಮಾರ್ಗದಲ್ಲಿ ಅಧಿಕಾರಕ್ಕೆ ಬಂದ ಸ್ವಘೋಷಿತ ಡೋಂಗಿ ರಾಷ್ಟ್ರಭಕ್ತರು-ಇನ್ನೇನು ಮಾಡಲು ಸಾಧ್ಯ?’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಆಶಾ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹೆಚ್ಚುವರಿ ಕೆಲಸಗಳ ಹೇರಿಕೆಯನ್ನು ಹಿಂಪಡೆಯಬೇಕು’ ಎಂದು ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಹಾಗೂ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಸುರಿಯುವ ಮಳೆಯಲ್ಲೂ ಪ್ರತಿಭಟನೆ ನಡೆಸಿದರು.

‘ಕಾಲಕ್ಕೆ ತಕ್ಕಂತೆ ನಿಗದಿಪಡಿಸುವ ಎಲ್ಲ ಕೆಲಸಗಳಿಗೆ ಪ್ರೋತ್ಸಾಹ ಧನ ನೀಡಬೇಕು. ವಿನಾಕಾರಣ ವೇತನ ಕಡಿತವಾಗುತ್ತಿರುವ ಆರ್‌ಸಿಎಚ್ ಪೋರ್ಟಲ್ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು’ ಎಂದೂ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ‘ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ. ಇದಕ್ಕೆ ವಿರೋಧವಾಗಿ ಆಶಾ ಕಾರ್ಯಕರ್ತೆರಿಂದ ಕೆಲಸ ಪಡೆದುಕೊಳ್ಳಲಾಗುತ್ತಿದೆ. ಹಕ್ಕು ಪಡೆದುಕೊಳ್ಳಲು ತಾಳ್ಮೆಯಿಂದ ಹೋರಾಟ ಮುಂದುವರಿಸಿ. ನಿಮಗೆ ನನ್ನ ಬೆಂಬಲವಿದೆ’ ಎಂದರು.

ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ, ‘ದೆಹಲಿಯಲ್ಲಿ ಒಂದು ವರ್ಷ ರೈತರು ಹೋರಾಟ ಮಾಡಿದರೂ ಸ್ಪಂದಿಸದ ಸರ್ಕಾರ, ಅಂತಿಮವಾಗಿ ಮಣಿಯಿತು. ನ್ಯಾಯೋಚಿತವಾದ ನಿಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸುದೀರ್ಘ ಹೋರಾಟ ನಡೆಸಿ’ ಎಂದರು.

‘ಬೇಡಿಕೆ ಈಡೇರಿಕೆಗೆ 27 ರಂದು ಸಭೆ’

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್, ‘ಬೇಡಿಕೆಗಳ ಈಡೇರಿಕೆ ಬಗ್ಗೆ ಚರ್ಚಿಸಲು ಮೇ 27ರಂದು ಮುಖಂಡರ ಸಭೆ ಕರೆಯಲಾಗುವುದು’ ಎಂದು ಭರವಸೆ ನೀಡಿದರು. ಬಳಿಕ ಕಾರ್ಯಕರ್ತೆಯರು ಪ್ರತಿಭಟನೆ ಅಂತ್ಯಗೊಳಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್

ಪ್ರಾದೇಶಿಕ ವ್ಯವಹಾರಿಕ ಕಛೇರಿ–ಕೋಲಾರ, ಡೂಮ್‌ಲೈಟ್ ಸರ್ಕಲ್ ಹತ್ತಿರ, ನ್ಯೂ ಎಕ್ಸಟೆನ್ಸನ್, ಕೋಲಾರ–563101
Ph: 08152-221132, 221029, Fax–223338, Email: rmr6.aobesban@sbi.co.in

ಬಂಗಾರ ಆಭರಣ ಬಹಿರಂಗ ಹರಾಜು ಪ್ರಕಟಣೆ

ಕೆಳಕಂಡ ವ್ಯಕ್ತಿಗಳು ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಕೆಳಕಾಣಿಸಿರುವ ಶಾಖೆಗಳಲ್ಲಿ ತಮ್ಮ ಚಿನ್ನಾಭರಣಗಳನ್ನು ಒತ್ತೆಯಿಟ್ಟಿದ್ದು, ಅವರ ಹೆಸರುಗಳ ಮುಂದೆ ತಿಳಿಸಿರುವ ಚಿನ್ನಾಭರಣದ ಸಾಲವನ್ನು ಪಡೆದುಕೊಂಡಿದ್ದರು. ಸದರಿ ಸಾಲಗಾರರುಗಳಿಗೆ ಕಳುಹಿಸಿದ ನೋಟೀಸ್‌ಗಳು ನೀಡಿಕೆಯಾಗಿರುವುದಿಲ್ಲ. ಅಥವಾ ವಾಪಸ್ ಬಂದಿವೆ / ಪಡೆಯಲು ನಿರಾಕರಿಸಿರುತ್ತಾರೆ. ಇವರು ಸಾಲವನ್ನೂ ಸಹ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದಾಗಿ ಅವರು ಈಡು ಮಾಡಿರುವ ಚಿನ್ನಾಭರಣಗಳನ್ನು ಹರಾಜು ಮಾಡಲಾಗುವುದು ಅದಕ್ಕಾಗಿ ಈ ಕೆಳಕಂಡಂತೆ ಹರಾಜನ್ನು ನಡೆಸಲಾಗುವುದು.

ಹರಾಜು ದಿನಾಂಕ 24–05–2022 ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00

ಶಾಖಾ ಸಂಕೇತ: 6029, ಕೋಲಾರ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9449866519

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39942469020	ಬ್ರಿಜ್ ಬಿಹಾರಿ ಸಿಂಗ್
2	39942758125	ಬ್ರಿಜ್ ಬಿಹಾರಿ ಸಿಂಗ್
3	39982141548	ರೆಡ್ಡಪ್ಪ.ವಿ

ಶಾಖಾ ಸಂಕೇತ : 7032, ಚನ್ನಪಟ್ಟಣ ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 9632348567

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40028392168	ಎಸ್.ನಾಗರಾಜು

ಶಾಖಾ ಸಂಕೇತ : 11294, ಮಾಲೂರು ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9449866536

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39967328581	ಹರೀಶ .ವಿ
2	39963738749	ವಿ.ಮಂಜುನಾಥ ಕುಮಾರ್

ಶಾಖಾ ಸಂಕೇತ : 13351, ಸಾತನೂರು ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 7010336589

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39972717456	ಶಿವಸ್ವಾಮಿ.ಡಿ.ಕೆ
2	40011138031	ಪ್ರಕಾಶ್.ಎಸ್
3	40012476568	ಕಿರಣ್‌ಕುಮಾರ್.ಹೆಚ್.ಕೆ
4	40021903737	ಸುಧಾ

ಶಾಖಾ ಸಂಕೇತ: 40084, ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆ, ಮುಳಬಾಗಿಲು ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 8296777789

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40263745923	ಗಣೇಶ್.ಎಸ್.ಟಿ

ಶಾಖಾ ಸಂಕೇತ : 40089, ಕೋಲಾರ ಚಿನ್ನದ ಗಣಿ (ಕೆ.ಜಿ.ಎಫ್) ಶಾಖೆ, ಕೋಲಾರ ಜಿಲ್ಲೆ, ಮೊಬೈಲ್ ಸಂಖ್ಯೆ: 8971763073

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39940983865	ಪ್ರವೀಣ್ ಕುಮಾರ್.ಆರ್
2	39931857516	ರುದ್ರಮ್ಮ .ವಿ

ಶಾಖಾ ಸಂಕೇತ : 40180, ನಂಗಲಿ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 8790385908

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39984647799	ಅನಿಲ್ ಕುಮಾರ್.ಎನ್

ಶಾಖಾ ಸಂಕೇತ : 40366, ಅಕ್ಕೂರು ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 8667024715

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40007401350	ವೆಂಕಟೇಶಪ್ಪ.ಜೆ
2	40004004220	ಕೃಷ್ಣೇಗೌಡ
3	39962723223	ಬಿ.ಸಿದ್ಧರಾಜು
4	39985699543	ಶಿವಮೂರ್ತಿ
5	39910244231	ಸರಸ್ವತಿ .ಬಿ

ಶಾಖಾ ಸಂಕೇತ : 40516, ಹುಳಿಕಲ್ ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 8217667899

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39992643397	ನರಸಿಂಹಮೂರ್ತಿ ಬಿನ್ ಬಸವರಾಜ್

ಶಾಖಾ ಸಂಕೇತ : 41101, ಗೌನಿಪಲ್ಲಿ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9110881134

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	39973031262	ಶ್ರೀನಿವಾಸರೆಡ್ಡಿ.ಎಂ
2	40003249762	ಕೆ.ಎಲ್.ನಾಗರಾಜ
3	39981834725	ವೆಂಕಟರಮಣ
4	40046514812	ಮಂಜುನಾಥರೆಡ್ಡಿ
5	40043812017	ಕೆ.ಆರ್.ಕೃಷ್ಣಾರೆಡ್ಡಿ
6	40033838967	ಎನ್.ಸುರೇಶ್
7	40045544098	ವೆಂಕಟರಮಣರೆಡ್ಡಿ.ಆರ್.ಸಿ
8	40016342961	ಶ್ಯಾಮಮೂರ್ತಿ.ವಿ
9	40028127019	ರಾಮಚಂದ್ರ

ಶಾಖಾ ಸಂಕೇತ : 41167, ಚಿಕ್ಕತಿರುಪತಿ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9841190077

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40006623432	ರವಿಕುಮಾರ್

ಶಾಖಾ ಸಂಕೇತ : 04998, ರಾಮನಗರ ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 8861983339

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40078589100	ಶ್ವೇತ .ಪಿ
2	40022288143	ಮೊಹಮ್ಮದ್ ಅಹದ್

ಶಾಖಾ ಸಂಕೇತ : 07692, ಕನಕಪುರ ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 9000871729

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40101280337	ಮುತ್ತುಲಕ್ಷ್ಮಮ್ಮ ರಾಮಚಂದ್ರಯ್ಯ
2	40043113904	ಚೌಡೇಗೌಡ
3	40104309682	ಶೇಖರ್‌ದೇವದಿಗ
4	40090490920	ಮಹೇಶ್.ಎಂ.ಆರ್

ಶಾಖಾ ಸಂಕೇತ : 13388, ಹಾರೋಹಳ್ಳಿ ಶಾಖೆ, ರಾಮನಗರ ಜಿಲ್ಲೆ ಮೊಬೈಲ್ ಸಂಖ್ಯೆ: 7259774316

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40084104049	ಕೆಂಪಮ್ಮ ಕೆಂಪಮ್ಮ

ಶಾಖಾ ಸಂಕೇತ : 40178, ಯಲ್ದೂರು ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9742745091

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40022950119	ರಾಜಣ್ಣ.ಪಿ

ಶಾಖಾ ಸಂಕೇತ : 40336, ಬೂದಿಕೋಟೆ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 7022096494

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40027561026	ಮಂಜುಳ.ಎಸ್
2	40033280763	ಪ್ರಸನ್ನ
3	40022950890	ರತ್ನಾಚಾರಿ

ಶಾಖಾ ಸಂಕೇತ: 40676, ಬಿ.ಎಂ.ರಸ್ತೆ, ಬಿಡದಿ ಶಾಖೆ, ರಾಮನಗರ ಜಿಲ್ಲೆ, ಮೊಬೈಲ್ ಸಂಖ್ಯೆ: 9606098743

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40018213693	ಉಮೇಶ್ ಕುಮಾರ್.ಎಸ್
2	40403010649	ಅರುಣ್.ಟಿ

ಶಾಖಾ ಸಂಕೇತ : 41122, ರೋಜಾರಪಲ್ಲಿ ಕ್ರಾಸ್ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 8722249994

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40020323009	ಚಲ್ಲಪ್ಪ.ಎನ್

ಶಾಖಾ ಸಂಕೇತ : 41168, ರಾಮಸಾಗರ ಶಾಖೆ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ: 9448993263

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಗ್ರಾಹಕನ ಹೆಸರು
1	40033837339	ಉಮೇಶ .ಡಿ.ವಿ
2	40010602369	ನೂರುಲ್ಲಾ
3	40043202249	ಅಸ್ಲಂ ಪಾಷಾ
4	40018337255	ಹರೀಶ್ ಕುಮಾರ್.ಪಿ
5	40022539482	ಮುನಿಲಕ್ಷ್ಮಮ್ಮ
6	40036478262	ನಂಜುಂಡರೆಡ್ಡಿ.ಎನ್
7	40042765270	ಮಂಜುನಾಥ .ಆರ್.ಆರ್
8	40043345743	ರಾಮಚಂದ್ರ ರೆಡ್ಡಿ.ಕೆ.ಸಿ
9	39991278005	ವೆಂಕಟಪ್ಪ
10	39996213508	ಈರಪ್ಪ
11	39963756702	ನಟರಾಜ.ಬಿ.ಎಂ

ನಿಯಮಗಳು ಮತ್ತು ನಿಬಂಧನೆಗಳು:

1) ಆಸಕ್ತಿಯುಳ್ಳ ವ್ಯಕ್ತಿಗಳು ಹರಾಜಿನ ದಿನಾಂಕಕ್ಕಿಂತ ಎರಡು ಗಂಟೆ ಮುಂಚಿತವಾಗಿ ರೂ. 1000/– ಮೊತ್ತವನ್ನು ಮುಂಗಡ ಹಣವಾಗಿ ಸಂದಾಯ ಮಾಡಬೇಕು. ಯಶಸ್ವಿಯಾದ ಬಿಡ್ದಾರರ ಸಂಬಂಧದಲ್ಲಿ ಈ ಹಣವನ್ನು ಮಾರಾಟವು ತೀರ್ಮಾನವಾದಾಗ ಮಾರಾಟದ ಬೆಲೆಯ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಉಳಿದವರಿಗೆ ಬೆಳೆಯ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಉಳಿದವರಿಗೆ ಬಡ್ಡಿಯಿಲ್ಲದೆ ಈ ಮೊತ್ತವನ್ನು ಹಿಂದಿರುಗಿಸಲಾಗುವುದು.
2) ಪಾಲ್ಗೊಳ್ಳುವ ಬಿಡ್‌ರ್‌ಗಳು ಕೆವೈಸಿ ಡಾಕ್ಯೂಮೆಂಟ್ ಅನ್ನು ಸಲ್ಲಿಸಬೇಕು. ಯಶಸ್ವಿಯಾದ ಬಿಡ್‌ದಾರರು ಆಭರಣಗಳ 50% ಬೆಲೆಯನ್ನು ಸ್ಥಳದಲ್ಲೆ ತಕ್ಷಣ ಪಾವತಿಮಾಡಬೇಕು. ಚೆಕ್‌ಗಳನ್ನು ಅಂಗೀಕರಿಸುವುದಿಲ್ಲ. ಬಾಕಿ ಹಣವನ್ನು ಹರಾಜು ದಿನಾಂಕದಿಂದ ಒಂದು ವಾರದ ಒಳಗೆ ಪಾವತಿ ಮಾಡಬೇಕು. ಇಲ್ಲದಿದ್ದರೆ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಿಡ್‌ನ ಪೂರ್ಣ ಹಣವನ್ನು ಪಾವತಿ ಮಾಡಿದ ನಂತರ ಮಾತ್ರ ಆಭರಣಗಳನ್ನು ನೀಡಲಾಗುವುದು.
3) ಆಸಕ್ತಿಯುಳ್ಳ ಬಿಡ್‌ದಾರರು ಹರಾಜು ನಡೆಯುವುದಕ್ಕೆ ಎರಡು ಗಂಟೆ ಮುಂಚಿತವಾಗಿ ಆಭರಣಗಳನ್ನು ಪರಿಶೀಲಿಸಬಹುದು.
4) ಹರಾಜನ್ನು ಎಲ್ಲಿ ಹೇಗಿದೆಯೋ ಹಾಗಿನ ಆಧಾರದ ಮೇಲೆ ನಡೆಸಲಾಗುವುದು. ಆಭರಣಗಳ ಗುಣಮಟ್ಟದ ಬಗ್ಗೆ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳಲಾಗುವುದಿಲ್ಲ.
5) ಯಾವುದೇ ಆಭರಣ ನೀಡದೆ ಹರಾಜನ್ನು ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾದಿರಿಸಿ ಕೊಂಡಿರುವುದು.
6) ಯಾವುದೇ ಕಾರಣ ನೀಡದೆ ಯಾವುದೇ ಬಿಡ್ ಅನ್ನು ಅಂಗೀಕರಿಸುವ ಹಕ್ಕನ್ನು ಬ್ಯಾಂಕ್ ಕಾದಿರಿಸಿಕೊಂಡಿದೆ. ಈ ಬಗ್ಗೆ ಬ್ಯಾಂಕಿನ ತೀರ್ಮಾನವು ಅಂತಿಮವಾದುದಾಗಿರುವುದು ಮತ್ತು ಬದ್ಧವಾಗಿರುವುದು.
7) ವಿವಾದದ ಇತರೆ ಎಲ್ಲಾ ವಿಚಾರಗಳಲ್ಲಿ ಬ್ಯಾಂಕಿನ ತೀರ್ಮಾನವು ಅಂತಿಮವಾಗಿರುವುದು ಮತ್ತು ಬದ್ಧವಾಗಿರುವುದು. ಮತ್ತೆ ಯಾವುದೇ ಪತ್ರವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ.
8) ಹರಾಜಿನಲ್ಲಿ ಭಾಗವಹಿಸುವ ವ್ಯಕ್ತಿಗಳು ತಾವು ಸದರಿ ನಿಯಮಗಳಿಗೆ ಬದ್ಧರಾಗಿರುವುದಾಗಿ ತಮ್ಮ ಒಪ್ಪಿಗೆಯನ್ನು ದೃಢೀಕರಿಸಿ ಹರಾಜು ಪ್ರಾರಂಭವಾಗುವ ಮುನ್ನ ರಿಜಿಸ್ಟರ್‌ನಲ್ಲಿ ಸಹಿ ಮಾಡಬೇಕು.

ಸ್ಥಳ: ಕೋಲಾರ
ದಿನಾಂಕ: 17–05–2022

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು,
ಪ್ರಾದೇಶಿಕ ವ್ಯವಹಾರಿಕ ಕಛೇರಿ, ಕೋಲಾರ.

ಮಾನ್ವಿ ಬಳಿ ಅಪಘಾತ: ನಗರದ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಅಮರಾವತಿ ಕ್ರಾಸ್ ಬಳಿ ಲಾರಿ, ಟ್ಯಾಂಕರ್ ಮತ್ತು ಟಾಟಾ ಏಸ್ ವಾಹನಗಳ ನಡುವೆ ಸೋಮವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರಿನ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಟಾಟಾ ಏಸ್ ವಾಹನ ಚಾಲಕ ಇಸಾಕ್ ಅಲಿ (42) ಮತ್ತು ಪ್ರಯಾಣಿಕ ವಿನಯ್ ಚುನ್ನಿಲಾಲ್ (54) ಮೃತಪಟ್ಟವರು.

ವೇಗದ ಚಾಲನೆಯೇ ಅಪಘಾತಕ್ಕೆ ಕಾರಣವಾಗಿದ್ದು, ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟಿಡಿಆರ್ ಆದೇಶ ಮಾರ್ಪಾಡು ಕೋರಿ 'ಸುಪ್ರೀಂ'ಗೆ ಸಲ್ಲಿಸಲಾಗಿದ್ದ ಅರ್ಜಿ

ಅರಮನೆ ಮಾಲೀಕತ್ವ: ರಾಜ್ಯದ ಅರ್ಜಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2014ರ ನವೆಂಬರ್ 21ರಂದು ನೀಡಿದ್ದ ಆದೇಶ ಪಾಲನೆಗೆ ಸೂಚಿಸಿದ ನ್ಯಾಯಪೀಠ
- ಟಿಡಿಆರ್ ನಿಯಮಗಳನ್ನು ಪಾಲಿಸುವಂತೆ ಆದೇಶ ನೀಡಿದ್ದ ಸುಪ್ರೀಂ ಕೋರ್ಟ್



ನವದೆಹಲಿ: ಬೆಂಗಳೂರು ಅರಮನೆ ಮೈದಾನದ ಜಮೀನಿನ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಉತ್ತರಾಧಿಕಾರಿಗೆ ಅಭಿವೃದ್ಧಿ ಹಕ್ಕುಗಳ ಹಸ್ತಾಂತರ (ಟಿಡಿಆರ್) ಕುರಿತ ತನ್ನ ಆದೇಶವನ್ನು ಮಾರ್ಪಾಡು ಮಾಡುವಂತೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಹಾಗೂ ಹೃಷಿಕೇಶ್ ರಾಯ್ ಅವರಿದ್ದ ನ್ಯಾಯಪೀಠ, ಅರಮನೆ ಮೈದಾನದ ಮಾಲೀಕತ್ವದ ವಿವಾದಕ್ಕೆ ಸಂಬಂಧಿಸಿ 2014ರ ನ.21ರಂದು ನೀಡಿರುವ ಆದೇಶವನ್ನು ಅನುಸರಿಸುವಂತೆ ಸೂಚಿಸಿತು. ಅಲ್ಲದೇ, 2014ರ ನ. 21ರಂದು ಸುಪ್ರೀಂ ಕೋರ್ಟ್ ಆದೇಶವನ್ನು ಪಾಲನೆ ಮಾಡದಿದ್ದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸ್ವತ್ತಿನ ಮಾಲೀಕರಾದ ಚದುರಂಗ ಕಾಂತರಾಜ್ ಎಂಬುವವರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು 3 ತಿಂಗಳ ನಂತರ ನಡೆಸುವುದಾಗಿ ನ್ಯಾಯಪೀಠ ಹೇಳಿತು.

ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಹಿರಿಯ ವಕೀಲರಾದ ಸಿ.ಎ.ಸುಂದರಮ್ ಹಾಗೂ ವಿ.ಕೃಷ್ಣಮೂರ್ತಿ, ಜಾಗದ ಮಾಲೀಕರಾದ ಚದುರಂಗ ಕಾಂತರಾಜ್ ಪರ ವಕೀಲ ಟಿ.ಹರೀಶ್ ಕುಮಾರ್ ವಾದ ಮಂಡಿಸಿದರು.

ವಿವಾದವೇನು?: ಮೇಖ್ರಿ ವೃತ್ತದಿಂದ ಬಿಡಿಎ ಜಂಕ್ಷನ್ ವರೆಗೆ 45 ಮೀಟರ್, ಮೇಖ್ರಿ ವೃತ್ತದಿಂದ ಫನ್ ವರ್ಲ್ಡ್ ವರೆಗೆ 45 ಮೀಟರ್ ಹಾಗೂ ಅಲ್ಲಿಂದ ಕಂಟೋನ್ಮೆಂಟ್ ವರೆಗೆ 30 ಮೀಟರ್ ರಸ್ತೆ ವಿಸ್ತರಿಸಲು ಪಾಲಿಕೆ ಯೋಜಿಸಿದೆ. ಈ ಯೋಜನೆಗೆ ಒಟ್ಟು 15 ಎಕರೆ 39 ಗುಂಟೆ ಜಮೀನು ಅಗತ್ಯವಾಗಿದ್ದು, ಇದಕ್ಕಾಗಿ ಪಾವತಿಸಬೇಕಾದ ಟಿಡಿಆರ್‌ನ ಮೊತ್ತ ₹ 1,396 ಕೋಟಿ ಆಗುತ್ತದೆ ಎಂದು ರಾಜ್ಯ ಸರ್ಕಾರ ಅಂದಾಜಿಸಿತ್ತು.

ಬೆಂಗಳೂರು ಅರಮನೆ ಒಳಗೊಂಡಿರುವ ಸಂಪೂರ್ಣ ಆಸ್ತಿಯನ್ನು ರಾಜ್ಯ ಸರ್ಕಾರ 1996ರಲ್ಲಿ ಮಸೂದೆಯನ್ನು ವಿಧಾನಮಂಡಲದ ಉಭಯ ಸದನದಲ್ಲಿ ಅಂಗೀಕರಿಸುವ ಮೂಲಕ ಸ್ವಾಧೀನ ಪಡಿಸಿಕೊಂಡಿತ್ತು. ಇದಕ್ಕೆ ಮಾರ್ಗಸೂಚಿ ದರದ ಅನ್ವಯ ಪರಿಹಾರವನ್ನೂ ನೀಡಲು ಮುಂದಾಗಿತ್ತು. ಈ ಮೊತ್ತ ಕೇವಲ ₹ 37.28 ಲಕ್ಷದಷ್ಟಿತ್ತು.

ಅರಮನೆ ಮೈದಾನದ ಸ್ವಾಧೀನ ನಂತರ ಬಳ್ಳಾರಿ ರಸ್ತೆಯ ಕಾವೇರಿ ಚಿತ್ರಮಂದಿರದಿಂದ ಮೇಖ್ರಿ ವೃತ್ತದವರೆಗೆ ರಸ್ತೆ ವಿಸ್ತರಣೆ ಮಾಡಲಾಗಿತ್ತು. ಮಾರ್ಗಸೂಚಿ ದರದ ಅನ್ವಯ ಭೂಸ್ವಾಧೀನಕ್ಕೆ ಚದರಡಿಗೆ ₹5.75 (ಎಕರೆಗೆ ₹2.15 ಲಕ್ಷ) ನಿಗದಿ ಮಾಡಲಾಗಿತ್ತು.

'ನಿಯಮಗಳ ಪ್ರಕಾರ, ಜಾಗದ ಮಾಲೀಕರಿಗೆ ಮಾತ್ರ ಟಿಡಿಆರ್ ನೀಡಬಹುದಾಗಿದೆ. ಈ ಪ್ರಕರಣದಲ್ಲಿ ಸರ್ಕಾರವೇ ಜಮೀನಿನ ಮಾಲೀಕರಾಗಿರುವ ಕಾರಣ, ಅರ್ಜಿದಾರರಿಗೆ ಟಿಡಿಆರ್ ನೀಡಲು ಸಾಧ್ಯವಿಲ್ಲ' ಎಂದು ರಾಜ್ಯ ಸರ್ಕಾರ ವಾದ ಮಂಡಿಸಿತ್ತು.

ಇದನ್ನು ಪ್ರಶ್ನಿಸಿ ರಾಜವಂಶಸ್ಥರು ಹೈಕೋರ್ಟ್ ಮೊರೆ ಹೋಗಿದ್ದರು. ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು. ಇದರ ವಿರುದ್ಧ ರಾಜವಂಶಸ್ಥರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಸ್ವಾಧೀನ ಮಾಡಿಕೊಂಡಿರುವ ಜಾಗಕ್ಕೆ ನಿಯಮಾವಳಿಗಳ ಪ್ರಕಾರ ಅಭಿವೃದ್ಧಿ ಹಕ್ಕು ಹಸ್ತಾಂತರಿಸಬಹುದು. ಈ ವೇಳೆ ಟಿಡಿಆರ್ ನಿಯಮಗಳನ್ನು ಪಾಲಿಸುವಂತೆ ಆದೇಶಿಸಿತ್ತು.

ಸುದ್ದಿ 2 ನಿಮಿಷ

ದಾವೋಸ್‌ಗೆ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ್ ಪ್ರಯಾಣ

ಬೆಂಗಳೂರು: ಲಂಡನ್‌ನಲ್ಲಿ ಇದೇ 19ರಂದು ನಡೆಯಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಶಿಕ್ಷಣ ಸಮಾವೇಶ, 26ರಿಂದ ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಉನ್ನತ ಶಿಕ್ಷಣ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಅವರು ಪಾಲ್ಗೊಳ್ಳಲಿದ್ದಾರೆ.

ಇದೇ 18 ರಂದು ಲಂಡನ್‌ಗೆ ಪ್ರಯಾಣ ಬೆಳೆಸಲಿರುವ ಅವರು, ಅಲ್ಲಿಯೇ 22ರಿಂದ ನಡೆಯಲಿರುವ ವರ್ಲ್ಡ್ ಎಜುಕೇಷನ್ ಫೋರಂನ ಸಮಾವೇಶದಲ್ಲೂ ಭಾಗಿಯಾಗಲಿದ್ದಾರೆ.

ಕಾಮನ್ ವೆಲ್ತ್ ಶಿಕ್ಷಣ ಸಮಾವೇಶವನ್ನು ಅಂತರರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮವು ಏರ್ಪಡಿಸಿದೆ. ಈ ಸಮಾವೇಶದಲ್ಲಿ '21ನೇ ಶತಮಾನದಲ್ಲಿ ರಾಷ್ಟ್ರೀಯ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವುದು ಹೇಗೆ?' ಎನ್ನುವ ಬಗ್ಗೆ ಸಚಿವರು ವಿಷಯ ಮಂಡಿಸಲಿದ್ದಾರೆ.



ಇದಾದ ಬಳಿಕ ವರ್ಲ್ಡ್ ಎಜುಕೇಷನ್ ಫೋರಂನ ಸಮಾವೇಶದಲ್ಲಿ ಭಾಗಿಯಾಗ ಲಿರುವ ಅವರು ರಾಜ್ಯದ ವಿಶ್ವವಿದ್ಯಾಲಯಗಳು ವಿದೇಶಿ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬಹುದಾದ ಒಪ್ಪಂದಗಳು, ಟ್ವಿನ್ನಿಂಗ್ ಡಿಗ್ರಿ, ಬೋಧನೆ ಮತ್ತು ಸಂಶೋಧನಾ ವಿನಿಮಯಯ ಕುರಿತು ಚರ್ಚಿಸಲಿದ್ದಾರೆ.

ಐಎಸ್‌ಗೆ ಸೆಳೆಯಲು ಯತ್ನ: ಎನ್‌ಐಎ ದೋಷಾರೋಪಣೆ ಪಟ್ಟಿ ಸಲ್ಲಿಕೆ

ಬೆಂಗಳೂರು: 'ಐಎಸ್ ಉಗ್ರರ ಸಂಘಟನೆಗೆ ಸೇರ್ಪಡೆಯಾಗಲು ಮುಗ್ಧ ಯುವಕರನ್ನು ಪ್ರಚೋದಿಸುತ್ತಿದ್ದರು' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಇಬ್ಬರು ಪ್ರಮುಖ ಆರೋಪಿಗಳ ವಿರುದ್ಧ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ), ವಿಶೇಷ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪಣೆ ಪಟ್ಟಿ ಸಲ್ಲಿಸಿದೆ.

ಪ್ರಕರಣದ ಪ್ರಮುಖ ಆರೋಪಿ ಗಳಾದ ಬೆಂಗಳೂರಿನ ಮೊಹಮದ್ ತೌಕೀರ್ ಮೆಹಮೂದ್ ಮತ್ತು ಝೋಯೆಬ್ ಮುನ್ನಾ ವಿರುದ್ಧ ಈ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಕಳೆದ ತಿಂಗಳಲ್ಲಿ ಸಲ್ಲಿಸಲಾಗಿದೆ.

ಆರೋಪಿಗಳು, 'ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದ್ದ 'ಇಕ್ರಾ' ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಿದ್ದ ಮುಗ್ಧ ಯುವಕರನ್ನು ಐಎಸ್ (ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ) ಉಗ್ರ ಚಟುವಟಿಕೆಗಳಲ್ಲಿ ಸೇರ್ಪಡೆಯಾಗಲು ಪ್ರಚೋದಿಸುತ್ತಿದ್ದರು. ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಹಾಗೂ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಬಿ) ವಿರೋಧಿಸಿ ಹೋರಾಟ ನಡೆಸುತ್ತಿದ್ದ ಯುವಕರನ್ನೂ ಸೆಳೆಯುತ್ತಿದ್ದರು' ಎಂಬ ಅಂಶ ಆರೋಪ ಪಟ್ಟಿಯಲ್ಲಿ ವ್ಯಕ್ತವಾಗಿದೆ.

'ಧರ್ಮದ ಹೆಸರಿನಲ್ಲಿ ನಡೆಸುತ್ತಿದ್ದ ಸಭೆಗಳಲ್ಲಿ ಭಾಗಿಯಾಗುತ್ತಿದ್ದ ಯುವಕರನ್ನು ಐಎಸ್ ಸೇರಲು ಪ್ರೇರೇಪಿಸಲಾಗುತ್ತಿತ್ತು. ಐಎಸ್‌ಗೆ ದೇಣಿಗೆ ಸಂಗ್ರಹ ಮಾಡುವ ಕೃತ್ಯ ಹಾಗೂ ಸಿರಿಯಾಕ್ಕೆ ಯುವಕರನ್ನು ಕಳುಹಿಸಲು ನೆರವು ನೀಡುತ್ತಿದ್ದರು' ಎಂಬ ಅಂಶಗಳು ಆರೋಪಿಗಳ ವಿಚಾರಣೆ ವೇಳೆ ಅವರ ಇ–ಮೇಲ್ ಮತ್ತು ಸಾಮಾ ಜಿಕ ಜಾಲತಾಣಗಳ ದತ್ತಾಂಶಗಳನ್ನು ಪರಿಶೀಲನೆ ನಡೆಸಿದಾಗ ಕಂಡು ಬಂದಿದೆ' ಎಂದೂ ಪಟ್ಟಿಯಲ್ಲಿ ವಿವರಿಸಲಾಗಿದೆ.

ಈ ಪ್ರಕರಣವನ್ನು ದೆಹಲಿ ಪೊಲೀಸರು ದಾಖಲಿಸಿದ್ದು ಇದರಲ್ಲಿ ನಗರದ ನಾಲ್ವರು ಆರೋಪಿಗಳಿದ್ದಾರೆ. ಇಬ್ಬರು ಸಂರಕ್ಷಿತ ಸಾಕ್ಷಿಗಳ ಆಧಾರದಲ್ಲಿ ಎನ್‌ಐಎ ತನಿಖೆ ಮುಂದುವರಿಸಿದೆ. ಎನ್‌ಐಎ ಪರ ಪಿ. ಪ್ರಸನ್ನಕುಮಾರ್ ಈ ಹೆಚ್ಚುವರಿ ದೋಷಾರೋಪಣೆ ಪಟ್ಟಿ ಸಲ್ಲಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ನಗರದ ನೂತನ ಪೊಲೀಸ್ ಕಮಿಷನರ್ ಆಗಿ ಅಧಿಕಾರ ಸ್ವೀಕರಿಸಿದ ಪ್ರತಾಪ್ ರೆಡ್ಡಿ

ದೂರು ದಾಖಲು ಕಡ್ಡಾಯ, ತಪ್ಪಿದರೆ ಶಿಸ್ತು ಕ್ರಮ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾರೇ ಠಾಣೆಗೆ ಬಂದು ದೂರು ನೀಡಿದರೆ, ಅದನ್ನು ದಾಖಲಿಸಿಕೊಳ್ಳಬೇಕು. ಆಕಸ್ಮಾತ್ ದಾಖಲಿಸಿಕೊಳ್ಳದೇ ನಿರ್ಲಕ್ಷ್ಯ ವಹಿಸಿದರೆ, ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ನೂತನ ಪೊಲೀಸ್ ಕಮಿಷನರ್ ಸಿ.ಎಚ್. ಪ್ರತಾಪ್ ರೆಡ್ಡಿ ಎಚ್ಚರಿಕೆ ನೀಡಿದರು.

ನಗರದ 37ನೇ ಕಮಿಷನರ್ ಆಗಿ ಮಂಗಳವಾರ ಅವರು ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಕಮಿಷನರ್ ಕಮಲ್ ಪಂತ್ ಅವರು ಪ್ರತಾಪ್ ರೆಡ್ಡಿ ಅವರಿಗೆ ಬ್ಯಾಟನ್ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಅಧಿಕಾರ ಸ್ವೀಕರಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರತಾಪ್ ರೆಡ್ಡಿ, 'ದೂರು ದಾಖಲಾಗಿಲ್ಲವೆಂದು ಹೇಳಿಕೊಂಡು ಯಾರೊಬ್ಬರೂ ಕಮಿಷನರ್ ಕಚೇರಿಗೆ ಬರಬಾರದು. ಈ ಬಗ್ಗೆ ಈಗಾಗಲೇ ಎಲ್ಲ ಡಿಸಿಪಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

'ಮಹಿಳೆಯರ ರಕ್ಷಣೆಗೆ ಆದ್ಯತೆ ನೀಡಲಾಗುವುದು. ಗಂಭೀರ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಮುಗಿಸಿ ಆರೋಪಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುವುದು' ಎಂದೂ ತಿಳಿಸಿದರು.

'ಬೆಂಗಳೂರು ಕಮಿಷನರೇಟ್ ಎಂಬುದು ದೊಡ್ಡ ಘಟಕ. ಆಡಳಿತದಲ್ಲಿ ನಿತ್ಯವೂ ಬದಲಾವಣೆ ಬೇಕಾಗುತ್ತದೆ. ಸದ್ಯದ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳುತ್ತೇನೆ. ಇಲಾಖೆಯಲ್ಲಿರುವ ಪ್ರತಿಯೊಬ್ಬರಿಂದಲೂ ಕೆಲಸ ತೆಗೆದುಕೊಳ್ಳುತ್ತೇನೆ. ಸುಧಾರಣೆಗಳು ಅಗತ್ಯವಿದ್ದರೆ ಸೂಕ್ತ ಯೋಜನೆ ರೂಪಿಸುತ್ತೇನೆ' ಎಂದೂ ಹೇಳಿದರು.



ನಿರ್ಗಮಿತ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ನೂತನ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ಬ್ಯಾಟನ್ ನೀಡಿ ಮಂಗಳವಾರ ಅಧಿಕಾರ ಹಸ್ತಾಂತರಿಸಿದರು – ಪ್ರಜಾವಾಣಿ ಚಿತ್ರ

ಪ್ರತಿಯೊಂದು ಠಾಣೆಯಲ್ಲೂ ಕ್ಯಾಮೆರಾ: 'ಠಾಣೆಗಳಲ್ಲಿ ಪಾರದರ್ಶಕತೆ ತಂದು ಜನಸ್ನೇಹಿಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸುಪ್ರೀಂ ಕೋರ್ಟ್ ಆದೇಶದಂತೆ ಪ್ರತಿಯೊಂದು ಠಾಣೆಯಲ್ಲಿ ಕನಿಷ್ಠ 4 ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಬೇಕು. ನಗರದ ಪ್ರತಿಯೊಂದು ಠಾಣೆಯಲ್ಲೂ ಕ್ಯಾಮೆರಾ ಅಳವಡಿಕೆ ಬಗ್ಗೆ ಗಮನ ಹರಿಸಲಾಗುವುದು' ಎಂದು ಅವರು ಹೇಳಿದರು.

ಸೈಬರ್ ಅಪರಾಧ ತಡೆಗೆ ಮತ್ತಷ್ಟು ಸುಧಾರಣೆ: 'ನಗರದಲ್ಲಿ ಈ ಹಿಂದೆ ಒಂದೇ ಸೈಬರ್ ಕ್ರೈಂ ಠಾಣೆ ಇತ್ತು. ಇದೀಗ ಪ್ರತಿಯೊಂದು ವಿಭಾಗಕ್ಕೊಂದು ಠಾಣೆ ಆಗಿದೆ. ಇಂದಿನ ದಿನಮಾನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿದ್ದು, ಇದರ ತಡೆಗೆ ಮತ್ತಷ್ಟು ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗುವುದು' ಎಂದು ಪ್ರತಾಪ್ ರೆಡ್ಡಿ ಅವರು ಹೇಳಿದರು.

'ಈಗಾಗಲೇ 'ಗೋಲ್ಡನ್ ಅವರ್' ಎಂಬ ವ್ಯವಸ್ಥೆ ಜಾರಿಗೆ ತರಲಾಗಿದೆ. ತುರ್ತಾಗಿ ದೂರು ನೀಡುವವರಿಗೆ, ಹಣ ವಾಪಸು ಕೊಡಿಸಲಾಗುತ್ತಿದೆ. ಬೆಂಗಳೂರು ಪೊಲೀಸರ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿದೆ' ಎಂದು ಹೇಳಿದರು.

ಕೆಲಸ ತೃಪ್ತಿ ತಂದಿದೆ: ಕಮಲ್ ಪಂತ್

'ಕಮಿಷನರ್ ಆಗಿ ಮಾಡಿದ ಕೆಲಸ ತೃಪ್ತಿ ತಂದಿದೆ. ಪೊಲೀಸ್ ನೇಮಕಾತಿ ವಿಭಾಗದಲ್ಲೂ ಪ್ರಾಮಾಣಿಕವಾಗಿ ಕೆಲಸ ಮಾಡಿ, ವ್ಯವಸ್ಥೆ ಸುಧಾರಣೆ ಮಾಡುತ್ತೇನೆ' ಎಂದು ಕಮಲ್ ಪಂತ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ), ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಗಲಭೆ ಹಾಗೂ ಇತರೆ ಗಂಭೀರ ಪ್ರಕರಣಗಳನ್ನು ಪೊಲೀಸರು ಸಮರ್ಪಕವಾಗಿ ನಿರ್ವಹಣೆ ಮಾಡಿದರು. ರೌಡಿ ಚಟುವಟಿಕೆ ಹಾಗೂ ಡ್ರಗ್ಸ್ ದಂಧೆಯನ್ನು ನಿಯಂತ್ರಣಕ್ಕೆ ತಂದರು' ಎಂದರು.

'ಬಿಟ್ ಕಾಯಿನ್ ಪ್ರಕರಣದಲ್ಲಿ ಕೇಂದ್ರ ತನಿಖಾ ಸಂಸ್ಥೆಗಳಿಗೂ ಮೀರಿ ಪೊಲೀಸರು ತನಿಖೆ ಮಾಡಿದ್ದಾರೆ. ಯಾವುದೇ ಗೊಂದಲ ಹಾಗೂ ಸಂಶಯವಿಲ್ಲ. ಆಕಸ್ಮಾತ್ ಇದ್ದರೆ ಉತ್ತರಿಸಲು ನಾನು ಸಿದ್ಧ' ಎಂದೂ ಅವರು ತಿಳಿಸಿದರು.

'ಪೊಲೀಸ್ ನೇಮಕಾತಿ ವಿಭಾಗದ ಮಂಡಳಿಯಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದೆ. ಆದರೆ, ನೇಮಕಾತಿ ಪ್ರಕ್ರಿಯೆ ಹೊಸದು. ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ, ವಿಭಾಗದ ಕೆಲಸಗಳನ್ನು ಮುಂದುವರಿಸುವೆ. ಸದ್ಯ ಕೇಳಿಬಂದಿರುವ ಆರೋಪಗಳಿಂದ ವಿಭಾಗವನ್ನು ಮುಕ್ತಗೊಳಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ' ಎಂದೂ ಹೇಳಿದರು.

'ಅನಧಿಕೃತ ಕ್ಲಬ್‌ಗಳು ಬಂದ್'

'ನಗರದಲ್ಲಿರುವ ಅನಧಿಕೃತ ಕ್ಲಬ್‌ಗಳನ್ನು ಬಂದ್ ಮಾಡಿಸಿ, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ಸಿಸಿಬಿ ಹೆಸರಿನಲ್ಲಿ ಕ್ಲಬ್ ಮಾಲೀಕರಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ. ಅಪರಾಧಗಳನ್ನು ಭೇದಿಸಲು ಸಿಸಿಬಿ ಕೆಲಸ ಮಾಡಲಿದೆ' ಎಂದರು.

'ಟೋಯಿಂಗ್ ಅಗತ್ಯ'

'ನಗರದ ಸುಗಮ ಸಂಚಾರ ವ್ಯವಸ್ಥೆಗೆ ಟೋಯಿಂಗ್ ಅಗತ್ಯವಿದೆ. ರಾಜ್ಯ ಸರ್ಕಾರದ ಜೊತೆ ಚರ್ಚಿಸಿ, ಪರಿಷ್ಕೃತ ನಿಯಮಗಳ ರೂಪಿಸಿ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ಪ್ರಯತ್ನಿಸಲಾಗುವುದು' ಎಂದು ಪ್ರತಾಪ್ ರೆಡ್ಡಿ ಹೇಳಿದರು.

ಐವರ ಸಾವು, 2 ಲಕ್ಷ ಮಂದಿ ಸಂತ್ರಸ್ತರು, ರಸ್ತೆ, ರೈಲು ಸಂಪರ್ಕ ಕಡಿತ • ಮುಂದುವರಿದ ರಕ್ಷಣಾ ಕಾರ್ಯಾಚರಣೆ

ಅಸ್ಸಾಂ: ಭೀಕರ ಪ್ರವಾಹ, ಭೂಕುಸಿತ

ಗುವಾಹಟಿ/ಹ್ಯಾಫ್ಲಾಂಗ್ (ಪಿಟಿಐ): ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಅಸ್ಸಾಂನಲ್ಲಿ ಭೀಕರ ಪ್ರವಾಹ ಮತ್ತು ಭೂಕುಸಿತ ಉಂಟಾಗಿದ್ದು, ಐವರು ಮೃತಪಟ್ಟಿದ್ದಾರೆ. 20 ಜಿಲ್ಲೆಗಳಲ್ಲಿ ಎರಡು ಲಕ್ಷ ಜನರು ತೊಂದರೆಗೀಡಾಗಿದ್ದಾರೆ.

ಮಧ್ಯ ಅಸ್ಸಾಂ ಜಿಲ್ಲೆಗಳಾದ ದಿಮಾ ಹಸಾವೊ, ಹೋಜೈ ಮತ್ತು ದಕ್ಷಿಣ ಅಸ್ಸಾಂನ ಕ್ಯಾಚಾರ್ ಜಿಲ್ಲೆಗಳಲ್ಲಿ ಹೆಚ್ಚು ಹಾನಿಯಾಗಿದೆ. ಮಳೆ ಮತ್ತು ಭೂಕುಸಿತದಿಂದಾಗಿ ಲುಮ್ಡಿಂಗ್-ಬದರ್‌ಪುರ್ ಪರ್ವತ ವಲಯದ ರೈಲು ಮಾರ್ಗಗಳು, ದಿಮಾ ಹಸಾವೊನಲ್ಲಿ ರೈಲು ಹಳಿಗಳು ಕೊಚ್ಚಿ ಹೋಗಿವೆ. ಇದರಿಂದ ಈ ಪ್ರದೇಶಗಳು ರಾಜ್ಯದ ಉಳಿದ ಭಾಗಗಳಿಂದ ಸಂಪರ್ಕ ಕಡಿದುಕೊಂಡಿವೆ.

ದಿಮಾ ಹಸಾವೊ ವಿಭಾಗದಲ್ಲಿ ಲುಮ್ಡಿಂಗ್–ಬದರ್ಪುರ್ ಮಾರ್ಗದಲ್ಲಿ ಭೂ ಕುಸಿತ ಮತ್ತು ರೈಲು ಹಳಿಯ ಮೇಲೆ ನೀರು ನಿಂತಿರುವ ಕಾರಣ ಎರಡು ದಿನಗಳಿಂದ ಸಿಲುಕಿಗೊಂಡಿದ್ದ ಎರಡು ರೈಲಿನಿಂದ 2,800 ಪ್ರಯಾಣಿಕರನ್ನು ಸ್ಥಳಾಂತರಿಸಲಾಗಿದೆ. ಡಿಟೋಕ್ಚೆರಾ ನಿಲ್ದಾಣದಲ್ಲಿ ಸಿಲುಕಿಕೊಂಡಿದ್ದ ಸುಮಾರು 1,600 ರೈಲು ಪ್ರಯಾಣಿಕರನ್ನು ರಕ್ಷಿಸಲಾಗಿದೆ. ಅವರನ್ನು ಬದರ್‌ಪುರ್, ಸಿಲ್ಚಾರ್‌ಗೆ ಕಳುಹಿಸಲಾಗಿದೆ.

'1,600 ಪ್ರಯಾಣಿಕರ ಪೈಕಿ 119 ಜನರನ್ನು ವಾಯುಪಡೆಯ ಹೆಲಿಕಾಪ್ಟರ್‌ಗಳ ಮೂಲಕ ಸ್ಥಳಾಂತರಿಸಲಾಗಿದೆ' ಎಂದು ಈಶಾನ್ಯ ವಲಯದ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಸವ್ಯಸಾಚಿ ಡಿ ಸೋಮವಾರ ತಿಳಿಸಿದ್ದಾರೆ.



ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯ ನ್ಯೂ ಹ್ಯಾಫ್ಲಾಂಗ್ ರೈಲು ನಿಲ್ದಾಣವು ಸಂಪೂರ್ಣವಾಗಿ ಮಣ್ಣು, ಕೆಸರು ನೀರಿನಿಂದ ಆವೃತವಾಗಿದ್ದು, ಪ್ಯಾಸೆಂಜರ್ ರೈಲೊಂದು ಮುಗುಚಿದೆ. –ಎಎಫ್‌ಪಿ ಚಿತ್ರ

ನಿರಂತರ ಮಳೆಯಿಂದಾಗಿ ಲುಮ್ಡಿಂಗ್- ಬದರ್‌ಪುರ ವಲಯದಲ್ಲಿ ಕನಿಷ್ಠ 53 ಸ್ಥಳಗಳಲ್ಲಿ ಭೂಕುಸಿತ ಉಂಟಾಗಿದೆ ಎಂದು ಅವರು ಹೇಳಿದ್ದಾರೆ.

ನ್ಯೂ ಹ್ಯಾಫ್ಲಾಂಗ್ ರೈಲು ನಿಲ್ದಾಣವು ಸಂಪೂರ್ಣವಾಗಿ ಅವಶೇಷಗಳಿಂದ ತುಂಬಿದೆ. ನಿಲ್ದಾಣದಲ್ಲಿ ನಿಂತಿದ್ದ ಖಾಲಿ ಪ್ಯಾಸೆಂಜರ್ ರೈಲು ಬೃಹತ್ ಭೂಕುಸಿತದಿಂದಾಗಿ ಕೊಚ್ಚಿಹೋಗಿದೆ. 18 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ.

ಸೋಮವಾರದ ನಿರಂತರ ಮಳೆಯು ಮತ್ತಷ್ಟು ಭೂಕುಸಿತ ಉಂಟು ಮಾಡಿದ್ದು, ರಕ್ಷಣಾ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ. ಹಾನಿಗೊಳಗಾದ ಮಾರ್ಗಗಳನ್ನು ಮರುಸ್ಥಾಪಿಸಲು ಮತ್ತು ದಕ್ಷಿಣ ಅಸ್ಸಾಂ, ಮಣಿಪುರ, ತ್ರಿಪುರಾ ಮತ್ತು ಮಿಜೋರಾಂಗಳಿಗೆ ರೈಲು ಸೇವೆಗಳನ್ನು ಮರುಪ್ರಾರಂಭಿಸಲು ರೈಲ್ವೆ ಈಗ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ಸೋಮವಾರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಪ್ರವಾಹ ಮತ್ತು ಭೂಕುಸಿತದಿಂದ ಸಂತ್ರಸ್ತರಾದ 32,900 ಕ್ಕೂ ಹೆಚ್ಚು ಜನರಿಗೆ ಬಿಸ್ವನಾಥ್, ದಿಮಾ ಹಸಾವೊ, ಹೊಜೈ, ಕರ್ಬಿ ಅಂಗ್ಲಾಂಗ್ ವೆಸ್ಟ್, ನಾಗಾಂವ್ ಮತ್ತು ಉದಲ್ಗುರಿ ಜಿಲ್ಲೆಗಳಲ್ಲಿ 67 ಪರಿಹಾರ ಶಿಬಿರಗಳಲ್ಲಿ ಆಶ್ರಯ ನೀಡಲಾಗಿದೆ ಎಂದು ತಿಳಿಸಿದೆ.

ಕೇರಳ: 9 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

ತಿರುವನಂತಪುರ: ಕೇರಳದಲ್ಲಿ ಮಳೆ ಮುಂದುವರೆದಿದ್ದು, ಭಾರತೀಯ ಹವಾಮಾನ ಇಲಾಖೆ ಒಂಭತ್ತು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಣೆ ಮಾಡಿದ್ದು, ಏಳು ಜಿಲ್ಲೆಗಳಲ್ಲಿ ಬುಧವಾರ ಭಾರಿ ಮಳೆಯಾಗುವ ಮುನ್ಸೂಚನೆಯನ್ನೂ ನೀಡಿದೆ. ಎರ್ನಾಕುಲಂ, ಇಡುಕ್ಕಿ, ತ್ರಿಶ್ಯೂರ್, ಪಾಲಕ್ಕಾಡ್, ಮಲಪ್ಪುರ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ರಾಜ್ಯದಲ್ಲಿ ಘೋಷಿಸಲಾಗಿದ್ದ ರೆಡ್ ಅಲರ್ಟ್ ಅನ್ನು ವಾಪಸ್ ಪಡೆಯಲಾಗಿದೆ.

ಚಂಡಮಾರುತ ಲಕ್ಷ ದ್ವೀಪದಿಂದ ಕೇರಳದ ಕಡೆ ಧಾವಿಸುತ್ತಿದ್ದು ರಾಜ್ಯದ ಹಲವಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇರಳ ವಿಕೋಪ ನಿರ್ವಹಣೆ ಪ್ರಾಧಿಕಾರವು ಹೇಳಿದೆ.

ಅರುಣಾಚಲ ಪ್ರದೇಶದಲ್ಲಿ ಭೂ ಕುಸಿತ

ಇಟಾನಗರ: ಭಾರಿ ಮಳೆಯಿಂದಾಗಿ ಅರಣಾಚಲ ಪ್ರದೇಶದಲ್ಲಿ ವಿವಿಧಡೆ ಭೂ ಕುಸಿತ ಉಂಟಾಗಿದ್ದು, ಹಲವು ಪ್ರದೇಶಗಳ ಸಂಪರ್ಕ ಕಡಿತಗೊಂಡಿದೆ ಎಂದು ಮಂಗಳವಾರ ಅಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ ಭೂ ಕುಸಿತದಿಂದ ಇಟಾನಗರ ಮತ್ತು ಜಿರೊ ನಡುವೆ ರಸ್ತೆ ಮಾರ್ಗ ಸಂಪೂರ್ಣ ಮುಚ್ಚಿ ಹೋಗಿದೆ. ರಸ್ತೆ ತೆರವು ಕಾರ್ಯಾಚರಣೆ ನಡೆಯುತ್ತಿದ್ದು, ನೂರಾರು ವಾಹನಗಳು ಸಿಲುಕಿಕೊಂಡಿವೆ. ಭಾನುವಾರ ಪಂಜಾಬಿ ಡಾಬಾದ ಮೇಲೆ ಭೂ ಕುಸಿತ ಉಂಟಾಗಿ ಮಹಿಳೆ ಸೇರಿ, ಇಬ್ಬರು ಜೀವಂತ ಸಮಾಧಿಯಾಗಿದ್ದಾರೆ.

ಬ್ರಹ್ಮಪುತ್ರಾ ಮತ್ತು ಕೊಪಿಲಿ ನದಿಗಳು ಕ್ರಮವಾಗಿ ಜೋರ್ಹಟ್ ಮತ್ತು ನಾಗಾಂವ್ ಜಿಲ್ಲೆಗಳ ನೇಮತಿಘಾಟ್ ಮತ್ತು ಕಂಪುರದಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಪರಿಹಾರ ಕೇಂದ್ರ ಆರಂಭ: '698 ಗ್ರಾಮಗಳನ್ನು ಒಳಗೊಂಡಂತೆ 20 ಜಿಲ್ಲೆಗಳು ಪ್ರವಾಹಕ್ಕೆ ತುತ್ತಾಗಿದ್ದು, ಏಳು ಜಿಲ್ಲೆಗಳಲ್ಲಿ 55 ಪರಿಹಾರ ಕೇಂದ್ರಗಳನ್ನು ತೆರೆದು, 32,959 ಜನರಿಗೆ ಆಶ್ರಯ ನೀಡಲಾಗಿದೆ' ಎಂದು ಅಸ್ಸಾಂನ ವಿಕೋಪ ನಿರ್ವಹಣೆ ಪ್ರಾಧಿಕಾರ ಹೇಳಿದೆ.



ಕಲಬುರಗಿಯಲ್ಲಿ ಮಂಗಳವಾರ ಸುರಿದ ಮಳೆಯಲ್ಲಿಯೇ ವಿದ್ಯಾರ್ಥಿನಿಯರು ಸಾಗಿದ್ದು ಹೀಗೆ – ಪ್ರಜಾವಾಣಿ ಚಿತ್ರ



ಮೈಸೂರಿನ ಬೋಗಾದಿಯ ನಾಗಲಿಂಗೇಶ್ವರ ದೇಗುಲದ ಸಮೀಪ ರಾಜಕಾಲುವೆಯ ಸೇತುವೆ ಮಳೆಗೆ ಕೊಚ್ಚಿಕೊಂಡು ಹೋಗಿದೆ

ಸಿಡಿಲಿಗೆ ಇಬ್ಬರು ಕೃಷಿಕರು ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಬಹುಪಾಲು ಕಡೆ ಧಾರಾಕಾರ ಮಳೆಯಾಗಿದೆ. ಸಿಡಿಲಿಗೆ ಇಬ್ಬರು ಮೃತಪಟ್ಟಿದ್ದು, ಇನ್ನೊಬ್ಬರು ಗಾಯಗೊಂಡಿದ್ದಾರೆ. ಎರಡು ಎತ್ತು, ಒಂದು ಹಸು ಹಾಗೂ 30 ಮೇಕೆಗಳು ಸಾವನ್ನಪ್ಪಿವೆ.

ಕಲಬುರಗಿ ನಗರದಲ್ಲಿ ತಗ್ಗು ಪ್ರದೇಶದ 18ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತು. ಇಲ್ಲಿನ ಪಿಡಿಎ ಎಂಜಿನಿಯರಿಂಗ್ ಕಾಲೇಜು ಹಾಗೂ ಹಳೆ ಜೇವರ್ಗಿ ರಸ್ತೆಯ ರೈಲ್ವೆ ಅಂಡರ್‌ಪಾಸ್‌ಗಳಲ್ಲಿ ನೀರು ನಿಂತು ಅರ್ಧ ತಾಸು ಸಂಚಾರ ಸ್ಥಗಿತಗೊಂಡಿತು.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿಯಲ್ಲಿ ಪಾರ್ವತಿ ನಂದಕುಮಾರ್ (49), ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮಂಗಿಹಾಳ ಭೀಮಣ್ಣ ಹಿರೇಕುರುಬರ (38) ಸಿಡಿಲು ಬಡಿದು ಹೊಲದಲ್ಲೇ ಸಾವನ್ನಪ್ಪಿದ್ದಾರೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಅಂತಾವರಂ ಗ್ರಾಮದ ಎಲಿಯಾ (35) ಸಿಡಿಲಿನಿಂದ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಾಯಚೂರು ಜಿಲ್ಲೆ ಮುದಗಲ್‌ನಲ್ಲಿ 6 ಮೇಕೆ, 11 ಕುರಿ, ಮಸ್ಕಿ ತಾಲ್ಲೂಕಿನ ನಿರಲೂಟಿ ಗ್ರಾಮದಲ್ಲಿ 10 ಮೇಕೆಗಳು, ಚಿಂಚೋಳಿ ತಾಲ್ಲೂಕಿನ ಅಣವಾರ ಗ್ರಾಮದಲ್ಲಿ ಮೂರು ಮೇಕೆಗಳು, ಅಫಜಲಪುರದಲ್ಲಿ ಒಂದು ಹಸು, ಕಮಲಾಪುರ, ಹೊಣಗೇರದಲ್ಲಿ ಒಂದು ಎತ್ತು ಸಾವನ್ನಪ್ಪಿವೆ.

ವಿಜಯಪುರ ವರದಿ: ಮಂಗಳವಾರ ಕೊಲ್ಹಾರ ತಾಲ್ಲೂಕು ಮಸೂತಿ ಗ್ರಾಮದ ಜಮೀನೊಂದರಲ್ಲಿ ಸಿಡಿಲು ಬಡಿದು 14 ಕುರಿಗಳು ಮೃತಪಟ್ಟಿವೆ. ಮುದ್ದೇಬಿಹಾಳ, ಆಲಮೇಲ ಪಟ್ಟಣ ಸೇರಿ ವಿವಿಧೆಡೆ ಉತ್ತಮ ಮಳೆ ಆಗಿದ್ದು, ಸಿಂದಗಿ, ಬಸವನ ಬಾಗೇವಾಡಿ, ನಾಲತವಾಡ ಪಟ್ಟಣ ಭಾಗದಲ್ಲಿ ಜೋರು ಗಾಳಿ ಬೀಸಿದೆ. ದೇವರ ಹಿಪ್ಪರಗಿ, ನಿಡಗುಂದಿ ಪಟ್ಟಣದಲ್ಲಿ ಮೋಡ ಕವಿದ ವಾತಾವರಣವಿದೆ.

ಆಲಿಕಲ್ಲು ಮಳೆ: ನೆಲಕಚ್ಚಿದ ಮಾವು

ಶಕ್ತಿನಗರ (ರಾಯಚೂರು ಜಿಲ್ಲೆ): ಗುಡುಗು ಸಹಿತ ಸೋಮವಾರ ರಾತ್ರಿ ಸುರಿದ ಆಲಿಕಲ್ಲು ಮಳೆಯಿಂದ ಮಾವು ನೆಲಕಚ್ಚಿದೆ. ಲಕ್ಷಾಂತರ ರೂಪಾಯಿ ಮೌಲ್ಯದ ಬೆಳೆ ನಷ್ಟವಾಗಿದೆ.

ರಾಯಚೂರು ತಾಲ್ಲೂಕಿನ ವಡ್ಲುರು, ಹನುಮನದೊಡ್ಡಿ, ದೇವಸೂಗೂರು, ಯದ್ಲಾಪುರ, ಶಕ್ತಿನಗರ, ಕೊರವಿಹಾಳ, ಕೊರ್ತಕುಂದಾ ಗ್ರಾಮಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ. ದೇವಸೂಗೂರು ಗ್ರಾಮದ ಜನತಾ ಕಾಲೊನಿಯಲ್ಲಿ ಎರಡು ಕುರಿ, ಟಗರು ಮೃತಪಟ್ಟಿವೆ. 'ನಾಲ್ಕು ವರ್ಷ ಬರದಿಂದ ಮಾವು ಬೆಳೆ ಕುಂಠಿತವಾಗಿತ್ತು. ಈ ವರ್ಷ ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದೆವು. ಆರು ಎಕರೆಯಲ್ಲಿ ಬೆಳೆದಿದ್ದ ಮಾವು ನೆಲಕಚ್ಚಿ, ₹12 ಲಕ್ಷ ನಷ್ಟವಾಗಿದೆ' ಎಂದು ಕೊರವಿಹಾಳ ಗ್ರಾಮದ ರೈತ ರವೀಂದ್ರ ಹೇಳಿದರು.

ಕರಾವಳಿಯಲ್ಲಿ ಧಾರಾಕಾರ ಮಳೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲೂ ಸೋಮವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಮಂಗಳವಾರವೂ ಬೆಳಿಗ್ಗೆಯಿಂದ ಆಗಾಗ ತುಂತುರು ಮಳೆಯಾಗಿದೆ. ಭಾರಿ ಮಳೆಯಿಂದ ಮಂಗಳೂರು ತಾಲ್ಲೂಕಿನ ಕಿನ್ಯಾ ಬಳಿ ಶಾಲೆಯ ಹಳೆಯ ಕಟ್ಟಡದ ಚಾವಣಿ ಕುಸಿದಿದೆ.

ಭಾರಿ ಮಳೆ ಸೂಚನೆ ಹಿನ್ನೆಲೆಯಲ್ಲಿ ಮೇ 17ರಿಂದ 19ರ ಅವಧಿಯಲ್ಲಿ ಕಟ್ಟಡ ಕಾಮಗಾರಿ ಆರಂಭಿಸದಂತೆ ಮಂಗಳೂರು ಮಹಾನಗರ ಪಾಲಿಕೆ ಸೂಚಿಸಿದೆ. ಉಡುಪಿ ಜಿಲ್ಲೆಯಾದ್ಯಂತ ಧಾರಾಕಾರ ಮಳೆಗೆ ವಿವಿಧೆಡೆ ಮನೆಗಳು ಕುಸಿದಿವೆ. ವಿದ್ಯುತ್ ಕಂಬಗಳು ಧರೆಗುರುಳಿವೆ. ಕಾಪು ತಾಲ್ಲೂಕಿನ ಕೋಟೆಯಲ್ಲಿ ಸಿಡಿಲು ಬಡಿದು ಸರೋಜ ಎಂಬುವವರು ಗಾಯಗೊಂಡರು. ಕುಂದಾಪುರ ತಾಲ್ಲೂಕಿನಲ್ಲಿ ಹತ್ತು ಮನೆ, ಮೂರು ಕೊಟ್ಟಿಗೆಗಳಿಗೆ ಭಾಗಶಃ ಹಾನಿಯಾಗಿದೆ. ಕಾರ್ಕಳ ಹಾಗೂ ಬ್ರಹ್ಮಾವರದಲ್ಲಿ ತಲಾ ಎರಡು ಹಾಗೂ ಉಡುಪಿಯಲ್ಲಿ ಒಂದು ಮನೆಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಸೋಮವಾರ ರಾತ್ರಿ ಸುರಿದ ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ 206ರಲ್ಲಿ ನೀರು ಹರಿದು ವಾಹನ ಸವಾರರು, ಪಾದಚಾರಿಗಳು ತೊಂದರೆ ಅನುಭವಿಸಿದರು. ಜಿಲ್ಲೆಯ ಚಿಕ್ಕಬೆಳ್ಳಿಕೇರಿ; 9.9 ಸೆಂ.ಮೀ ಮಳೆಯಾಗಿರುವುದು ದಾಖಲಾಗಿದೆ.

ಮೈಸೂರು: ಕುಸಿದ ಸೇತುವೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ ಸೋಮವಾರ ರಾತ್ರಿಯಿಡಿ ಮಳೆ ಸುರಿಯಿತು. ಜಿಲ್ಲಾ ಕೇಂದ್ರದಲ್ಲಿ ಬೋಗಾದಿ ಹಾಗೂ ಸುತ್ತಮುತ್ತಲ ಬಡಾವಣೆಯ ಹಲವು ರಸ್ತೆಗಳು ಜಲಾವೃತಗೊಂಡಿದ್ದು, ತಗ್ಗುಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ.

ಕುಕ್ಕರಹಳ್ಳಿ ಕೆರೆ ಸಮೀಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಮೀಪ ಭಾರಿ ಗಾತ್ರದ ಮರಗಳು ಉರುಳಿವೆ.

ತಿ.ನರಸೀಪುರ ತಾಲ್ಲೂಕಿನಲ್ಲಿ ಉದ್ದು, ಅಲಸಂದೆ ಬೆಳೆಗಳಿಗೆ ನೀರು ನುಗ್ಗಿದೆ. ತಾಲ್ಲೂಕಿನ ತಲಕಾಡು ಮತ್ತು ಹುಣಸೂರು ತಾಲ್ಲೂಕಿನ ಸಿಂಗಮಾರನಹಳ್ಳಿಯಲ್ಲಿ ತಲಾ ಒಂದು ಮನೆಯ ಗೋಡೆ ಕುಸಿದಿದೆ. ಹಸು ವಿದ್ಯುತ್ ಆಘಾತದಿಂದ ಮೃತಪಟ್ಟಿತು.

(ಮಂಡ್ಯ ವರದಿ): ಮಳವಳ್ಳಿ ಪಟ್ಟಣದ ಅನಂತ್ ರಾಂ ಸರ್ಕಲ್ ಸಮೀಪದ ಸರ್ಕಾರಿ ಶಾಲೆ ಆವರಣದಲ್ಲಿ ನೀರು ತುಂಬಿತ್ತು. ತಾಲ್ಲೂಕಿನ ಕಲ್ಕುಣಿ ಗ್ರಾಮದಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತ್ತು. ನಾಗಮಂಗಲದ ಹೊನ್ನಾವರದ ಹಿರಿಕೆರೆ, ಚನ್ನಾಪುರ ಕೆರೆ ಕೋಡಿ ಬಿದ್ದಿದೆ. ತಾಲ್ಲೂಕಿನ ವಿವಿಧೆಡೆ ಮರಗಳು ಉರುಳಿವೆ.

ಮಳೆಗೆ ನೆಲಕಚ್ಚುತ್ತಿವೆ ದ್ರಾಕ್ಷಿ ತೋಟ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಮಳೆಗೆ ದ್ರಾಕ್ಷಿ ಬೆಳೆಗಾರರು ಕಂಗಾಲಾಗಿದ್ದಾರೆ. ಬಹಳಷ್ಟು ಕಡೆಗಳಲ್ಲಿ ದ್ರಾಕ್ಷಿ ಫಸಲು ಕಟಾವಿಗೆ ಬಂದಿದೆ. ಮಳೆ, ಗಾಳಿಗೆ ತೋಟಗಳೇ ಮರಿದು ಬೀಳುತ್ತಿವೆ.

ಮಂಗಳವಾರ ಚಿಕ್ಕಕಾಡಿಗೇನಹಳ್ಳಿಯ ರೈತ ವೆಂಕಟರೆಡ್ಡಿ ಅವರ ಒಂದು ಎಕರೆ ದ್ರಾಕ್ಷಿ ತೋಟ ಹಾನಿಗೊಂಡಿದೆ. ಭಾನುವಾರ ಅರಸನಹಳ್ಳಿಯ ನಂಜೇಗೌಡ ಅವರ ಎರಡು ಎಕರೆ ತೋಟ ನೆಲಕಚ್ಚಿತ್ತು.

10 ದಿನದಲ್ಲಿ ಜಿಲ್ಲೆಯಲ್ಲಿ 57.83 ಹೆಕ್ಟೇರ್ ದ್ರಾಕ್ಷಿ ನೆಲಕಚ್ಚಿದೆ. 88.88ಹೆಕ್ಟೇರ್‌ನಷ್ಟು ತೋಟಗಾರಿಕಾ ಬೆಳೆಗೆ ಹಾನಿ ಆಗಿದೆ ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ.

'ದ್ರಾಕ್ಷಿಯನ್ನು ಶೀಘ್ರ ಕೊಯ್ಲು ಮಾಡಬೇಕು. ಗಾಳಿಗೆ ತೋಟದ ಒಂದು ಕಲ್ಲು ಕಂಬ ಮುರಿದರೂ ಇಡೀ ತೋಟ ನೆಲಕಚ್ಚುತ್ತದೆ' ಎಂದು ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ರಮೇಶ್ ತಿಳಿಸಿದ್ದಾರೆ.

ಉತ್ತರ ಕರ್ನಾಟಕ: ಗುಡುಗು ಸಹಿತ ಮಳೆ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ, ಹಾವೇರಿ, ಉತ್ತರ ಕನ್ನಡ ಹಾಗೂ ವಿಜಯನಗರ ಜಿಲ್ಲೆಗಳ ವಿವಿಧೆಡೆ ಮಂಗಳವಾರ ಮಳೆಯಾಗಿದೆ. ಕೆಲವೆಡೆ ಗುಡುಗು ಸಹಿತ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಸೋಮವಾರ ತಡರಾತ್ರಿ ಮತ್ತು ಮಂಗಳವಾರ ರಭಸದ ಮಳೆಯಾಗಿದೆ. ಮುಂಡಗೋಡ, ಹಳಿಯಾಳ ಭಾಗದಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಕುಮಟಾ ತಾಲ್ಲೂಕಿನ ವಿವಿಧೆಡೆ ಮೂರು ಮನೆಗಳ ಮೇಲೆ ಮರಗಳು ಬಿದ್ದಿದ್ದು, ಚಾವಣಿಗಳಿಗೆ ಭಾಗಶಃ ಹಾನಿಯಾಗಿದೆ. ಮತ್ತೊಂದು ಮನೆಯ ಚಾವಣಿ ಹಾರಿ ಹೋಗಿದೆ. ಸಿಡಿಲಿನಿಂದಾಗಿ ಆರು ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದ್ದು, 63 ಕಂಬಗಳು ಉರುಳಿವೆ.

'ರೆಡ್ ಅಲರ್ಟ್' ಘೋಷಣೆ: ಉತ್ತರ ಕನ್ನಡದಲ್ಲಿ ಮೇ 19ರವರೆಗೆ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಸೂಚನೆ ನೀಡಿದೆ. ಹಾವೇರಿ ಜಿಲ್ಲೆ ಮೋಟೆಬೆನ್ನೂರ ಗ್ರಾಮದಲ್ಲಿ ಮರ ಬಿದ್ದು ಎಮ್ಮೆ ಮೃತಪಟ್ಟಿದೆ. ಒಂದು ಎಕರೆಯಲ್ಲಿ ಬಾಳೆ ಫಸಲು ನಾಶವಾಗಿದೆ.

ಬ್ಯಾಡಗಿ ವ್ಯಾಪ್ತಿಯಲ್ಲಿ 80ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿವೆ. ಮಲ್ಲೂರು ರಸ್ತೆಯಲ್ಲಿ ನಂದಿ ಕೋಲ್ಡ್ ಸ್ಟೋರೇಜ್‌ನ ಚಾವಣಿಯ ತಗಡುಗಳು ಹಾರಿವೆ. ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದಲ್ಲಿ ಭಾರಿ ಮಳೆಗೆ ಮನೆಯ ಚಾವಣಿ ಕುಸಿದು ಬಿದ್ದಿದೆ.

ಧಾರವಾಡ ಜಿಲ್ಲೆಯ ಅಳ್ನಾವರ ಹಾಗೂ ಕಲಘಟಗಿ ಭಾಗ ಹಾಗೂ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಬೆಳಗಾವಿ ನಗರ ಹಾಗೂ ಜಿಲ್ಲೆಯ ಎಂ.ಕೆ.ಹುಬ್ಬಳ್ಳಿ, ಖಾನಾಪುರ, ಕೌಜಲಗಿ, ಅಥಣಿ, ಹಿರೇಬಾಗೇವಾಡಿ, ಬೈಲಹೊಂಗಲ, ಸವದತ್ತಿ, ಹಾರೂಗೇರಿ ಪ್ರದೇಶಗಳಲ್ಲಿ ಒಂದು ತಾಸಿಗೂ ಹೆಚ್ಚು ಸಮಯ ಜೋರು ಮಳೆಬಿದ್ದಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ವಿದ್ಯಾರ್ಥಿಗಳ ಅನಿಸಿಕೆ

'ಶಿಷ್ಯವೇತನದಿಂದ ಪುಸ್ತಕ ಖರೀದಿ'



ಔರಾದ್ (ಬೀದರ್ ಜಿಲ್ಲೆ): ನನ್ನದು ಬಡ ಕುಟುಂಬ. ಎಸ್ಸೆಸ್ಸೆಲ್ಸಿ ನಂತರ ಮುಂದೆ ಓದುವುದು ಹೇಗೆ ಎಂಬ ಯೋಚನೆಯಲ್ಲಿದ್ದೆ. ಶೇ 96.18 ಅಂಕ ಬಂದಿದ್ದು, ಭಾಲ್ಕಿ ಬಸವಲಿಂಗ ಪಟ್ಟದ್ದೇವರು ಪಿಯುಸಿಗೆ ಉಚಿತ ಪ್ರವೇಶ ಕೊಡಿಸಿದರು. ಆಗಲೇ 'ಪ್ರಜಾವಾಣಿ' ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದೆ. ಹಣ ಬಂತು. ಪುಸ್ತಕಗಳನ್ನು ಖರೀದಿಸಿದೆ. ಅನುಕೂಲವಾಯಿತು. ಕಷ್ಟದಲ್ಲಿ ನೆರವಾದ 'ಪ್ರಜಾವಾಣಿ' ಮರೆಯಲು ಸಾಧ್ಯವಿಲ್ಲ.

ಬಸವಪ್ರಸಾದ ಮಹಾದೇವ ಖಳೂರೆ, ವಡಗಾಂವ್ (ಡಿ), ಬೀದರ್

'ಸ್ಕಾಲರ್‌ಷಿಪ್ ಮುಂದಿನ ಓದಿಗೆ ಆಧಾರ'



ಮಂಗಳೂರು: ಕಾಲೇಜು ಶುಲ್ಕ ಭರಿಸಲು ಸಹಾಯ ಮಾಡಿರುವ 'ಪ್ರಜಾವಾಣಿ' ಪತ್ರಿಕೆಗೆ ಧನ್ಯವಾದಗಳು. ಆರ್ಥಿಕ ತೊಂದರೆ ಇರುವ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದರೆ, ಆತ್ಮವಿಶ್ವಾಸ ಹೆಚ್ಚುತ್ತದೆ. ತುಂಬಾ ಕುಟುಂಬದವರಿಗೆ ಮಕ್ಕಳ ಶೈಕ್ಷಣಿಕ ವೆಚ್ಚ ಭರಿಸಲು ಆಗುವುದಿಲ್ಲ. ಅಂತಹ ಮಕ್ಕಳಿಗೆ ಸ್ಕಾಲರ್‌ಷಿಪ್ ಶೈಕ್ಷಣಿಕ ಆಧಾರವಾಗಿ, ಅವರ ಓದು ಮುಂದುವರಿಸಲು ಅನುಕೂಲ.

ಮೆಲೀಶಾ ನರೋನ್ಹಾ, ವಗ್ಗ, ಬಂಟ್ವಾಳ

ಮಲ್ಕಾಪುರೆ ಹಂಗಾಮಿ ಸಭಾಪತಿ



ಬೆಂಗಳೂರು: ವಿಧಾನಪರಿಷತ್ತಿನ ಹಂಗಾಮಿ ಸಭಾಪತಿಯನ್ನಾಗಿ ಬಿಜೆಪಿಯ ರಘುನಾಥ ರಾವ್ ಮಲ್ಕಾಪುರೆ ಅವರನ್ನು ನೇಮಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಬಿಜೆಪಿಗೆ ಸೇರುವ ಉದ್ದೇಶದಿಂದ ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ರಾಜೀನಾಮೆ ನೀಡಿದ್ದರಿಂದ ಸಭಾಪತಿ ಹುದ್ದೆ ತೆರವಾಗಿದೆ. ಉಪಸಭಾಪತಿ ಹುದ್ದೆಯೂ ಖಾಲಿ ಇರುವ ಕಾರಣ ಹಂಗಾಮಿ ಸಭಾಪತಿಯನ್ನಾಗಿ ಮಲ್ಕಾಪುರೆ ಅವರನ್ನು ನೇಮಿಸಲಾಗಿದೆ. ಹೊಸ ಸಭಾಪತಿ ನೇಮಕವಾಗುವವರೆಗೂ ಮಲ್ಕಾಪುರೆ ಅವರೇ ಕಾರ್ಯನಿರ್ವಹಿಸಲಿದ್ದಾರೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಆದೇಶದಲ್ಲಿ ತಿಳಿಸಿದ್ದಾರೆ. ಮಲ್ಕಾಪುರೆ ವಿಧಾನಪರಿಷತ್ತಿಗೆ ಎರಡನೇ ಬಾರಿಗೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹುಬ್ಬಳ್ಳಿ ಗಲಭೆ: 11 ಎಫ್‌ಐಆರ್‌ಗೆ ಹೈಕೋರ್ಟ್ ತಡೆ

ಧಾರವಾಡ: ಹಳೇ ಹುಬ್ಬಳ್ಳಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 12 ಎಫ್‌ಐಆರ್‌ಗಳಲ್ಲಿ 11ಕ್ಕೆ ಹೈಕೋರ್ಟ್ ಧಾರವಾಡ ಪೀಠ ಮಂಗಳವಾರ ತಡೆ ನೀಡಿದೆ.

ವಿವಾದಾತ್ಮಕ ಪೋಸ್ಟ್ ಕುರಿತಂತೆ ಏ. 16ರಂದು ಹಳೇ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 158 ಜನರ ವಿರುದ್ಧ 12 ಎಫ್‌ಐಆರ್‌ಗಳು ಸಲ್ಲಿಕೆಯಾಗಿದ್ದವು. ಆದರೆ ಒಂದೇ ಪ್ರಕರಣ ಕುರಿತು ಹಲವು ಎಫ್‌ಐಆರ್‌ಗಳು ದಾಖಲಿಸುವ ಅಗತ್ಯವಿಲ್ಲ ಎಂಬ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪರಿಗಣಿಸುವಂತೆ ಆರೋಪಿಗಳ ಪರ ವಕೀಲರು ವಾದ ಮಂಡಿಸಿದರು.

ಪೀಠ ವಿಚಾರಣೆಯನ್ನು ಜೂ.7ಕ್ಕೆ ಮುಂದೂಡಿತು. ಆರೋಪಿಗಳ ಪರ ವಿಶ್ವನಾಥ ಬಿಚಗತ್ತಿ, ಎಸ್.ಎ.ಚೌಧರಿ, ಐ.ಕೆ.ಬೆಳಗಲಿ ವಾದ ಮಂಡಿಸಿದರು.

'ಟೆಂಟ್' ಪ್ರತಿಭಟನೆ: ಅಧಿಕಾರಿಗಳ ಸ್ಪಂದನೆ

ಬೆಳಗಾವಿ/ ರಾಮದುರ್ಗ: 'ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಮುದೇನೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದುರಸ್ತಿಗೆ ₹ 20 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ. ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ' ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ. 'ಜಿಲ್ಲಾ ಪಂಚಾಯಿತಿ ₹ 10 ಲಕ್ಷ, ತಾಲ್ಲೂಕು ಪಂಚಾಯ್ತಿಯ ₹ 5 ಲಕ್ಷ ಹಾಗೂ ಗ್ರಾಮ ಪಂಚಾಯ್ತಿ ವತಿಯಿಂದ ₹ 5 ಲಕ್ಷ ಒದಗಿಸಿ ಕಾಮಗಾರಿ ನಡೆಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

'ಜಿಲ್ಲಾ ಪಂಚಾಯಿತಿ ಸಿಇಒ ಎಚ್.ವಿ. ದರ್ಶನ್ ಹಾಗೂ ನಾನು ಕಾಮಗಾರಿ ಕುರಿತು ನಿರಂತರವಾಗಿ ಮಾಹಿತಿ ಪಡೆದುಕೊಳ್ಳುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಶಾಲಾ ಕೊಠಡಿಗಳು ದುಃಸ್ಥಿತಿಯಲ್ಲಿದ್ದು, ಆವರಣದಲ್ಲಿ ಟೆಂಟ್ ಹಾಕಿ ಶಾಲಾ ಪ್ರಾರಂಭೋತ್ಸವ ನಡೆಸುವ ಮೂಲಕ ಗ್ರಾಮಸ್ಥರು ಸೋಮವಾರ ಪ್ರತಿಭಟಿಸಿದ್ದರು. ಇದು ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಎಚ್ಚೆತ್ತ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿದ್ದಾರೆ.

ನಿಂದಿಸಿದ ವ್ಯಕ್ತಿಗೆ ಚಪ್ಪಲಿಯಿಂದ ಹೊಡೆದಿದ್ದ ವಕೀಲೆ

ಬಾಗಲಕೋಟೆ: ವಕೀಲೆ ವಕೀಲೆ ಸಂಗೀತಾ ಶಿಕ್ಕೇರಿ ಅವರು ತಮ್ಮ ಮೇಲೆ ಹಲ್ಲೆಗೂ ಮೊದಲೇ ಆರೋಪಿ ಮಹಾಂತೇಶ ಚೊಳಚಗುಡ್ಡ ಅವರಿಗೆ ಚಪ್ಪಲಿಯಲ್ಲಿ ಹೊಡೆದಿರುವ ವಿಡಿಯೊ ನಗರದಲ್ಲಿ ಮಂಗಳವಾರ ವೈರಲ್ ಆಗಿದೆ.

ಇದರಿಂದ ವಕೀಲೆಯ ಮೇಲಿನ ಹಲ್ಲೆ ಪ್ರಕರಣಕ್ಕೆ ಮತ್ತೊಂದು ತಿರುವು ದೊರೆತಿದೆ. ಇಲ್ಲಿನ ವಿನಾಯಕ ನಗರದಲ್ಲಿರುವ ನಡೆದಿದ್ದ ಘಟನೆ ಕುರಿತ ವಿಡಿಯೊ ವೈರಲ್ ಆಗಿತ್ತು. ಹೊಸ ವಿಡಿಯೊದಲ್ಲಿ ಮಹಾಂತೇಶ – ಸಂಗೀತಾ ವಾಗ್ವಾದ ನಡೆಸಿದ್ದು, ವಕೀಲೆ ಚಪ್ಪಲಿಯಿಂದ ಹೊಡೆಯುವುದು ದಾಖಲಾಗಿದೆ. ಸಂಗೀತಾ ಶಿಕ್ಕೇರಿ ಸದ್ಯ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿಗೆ ಮಹಾಂತೇಶಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ರಾಜ್ಯ ಮಾನವ ಹಕ್ಕು ಆಯೋಗಕ್ಕೂ ಈ ಕುರಿತು ದೂರು ನೀಡಲಾಗಿದೆ.

'ಶಸ್ತ್ರಾಸ್ತ್ರ ತರಬೇತಿ: ಸಾಮರಸ್ಯ ಹಾಳು'

ಹಾಸನ: 'ಕೊಡಗಿನಲ್ಲಿ ಬಜರಂಗ ದಳದ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ, ತ್ರಿಶೂಲ ದೀಕ್ಷೆ ನೀಡಿರುವುದು ಯಾವ ದೃಷ್ಟಿಯಿಂದ ಅಗತ್ಯ? ಮಕ್ಕಳನ್ನು ಹಿಂದೂ ಸಂಘಟನೆಗಳು ಭಯೋತ್ಪಾದಕರ ಗುಂಪುಗಳನ್ನಾಗಿ ತಯಾರು ಮಾಡುತ್ತಿವೆಯೇ' ಎಂದು ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತಿದೆ. ಶಸ್ತ್ರಾಸ್ತ ಇಟ್ಟುಕೊಳ್ಳುವುದು ಸಮಸ್ಯೆಗೆ ಪರಿಹಾರವಲ್ಲ' ಎಂದರು.

ಇಂಧನ ಇಲಾಖೆ: ವರ್ಗಾವಣೆ ಮಾರ್ಪಾಡು ನಿರಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ (ಎಸ್ಕಾಂ) ವಿವಿಧ ಶ್ರೇಣಿಯ ನೂರಾರು ಎಂಜಿನಿಯರ್‌ಗಳಿಗೆ ಪ್ರಭಾರ ಹುದ್ದೆಯಲ್ಲಿರಿಸಿ 'ಮುಂಬಡ್ತಿ' ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕೆಲವೇ ದಿನಗಳಲ್ಲಿ ವರ್ಗಾವಣೆ ಮಾರ್ಪಾಟು ಮಾಡಲಾಗಿದೆ. ವರ್ಷಕ್ಕೂ ಹಿಂದಿನಿಂದ ಈ ರೀತಿಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ ಎಂಬ ಆರೋಪಕ್ಕೆ ಇಲಾಖೆ ಗುರಿಯಾಗಿದೆ.

'ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವವರೆಗೂ ಯಾವುದೇ ಹುದ್ದೆಗಳನ್ನು ಮುಂಬಡ್ತಿ ಮೂಲಕ ಬಡ್ತಿ ಮಾಡಬಾರದು ಮತ್ತು ಅಧಿಕಾರಿಗಳನ್ನು ಶಾಶ್ವತವಾಗಿ ಸ್ಥಳ ನಿಯುಕ್ತಿ ಮಾಡುವಂತಿಲ್ಲ' ಎಂದು ಬಿ. ಗುರುಮೂರ್ತಿ ಮತ್ತು ಇತರರ ಪ್ರಕರಣದಲ್ಲಿ ಹೈಕೋರ್ಟ್ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ(ಕೆಪಿಟಿಸಿಎಲ್) ನಿರ್ದೇಶನ ನೀಡಿತ್ತು. ಷರತ್ತಿನ ಆಧಾರದಲ್ಲಿ ಪ್ರಭಾರದಲ್ಲಿರಿಸಲು ನ್ಯಾಯಾಲಯ ಅನುಮತಿ ನೀಡಿತ್ತು. ಈ ಅವಕಾಶವನ್ನೇ ದುರ್ಬಳಕೆ ಮಾಡಿಕೊಂಡು ಮನಸೋ ಇಚ್ಛೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ಕೆಲವು ಎಂಜಿನಿಯರ್‌ಗಳ ದೂರಿದ್ದಾರೆ.

> ಎಂಜಿನಿಯರ್‌ಗಳನ್ನು ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿ ಮಾಡಿ, ನಂತರದಲ್ಲಿ ಬದಲಾವಣೆ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ಪರಿಶೀಲನೆ ನಡೆಸುತ್ತೇನೆ.
> **ವಿ. ಸುನಿಲ್ ಕುಮಾರ್,** ಇಂಧನ ಸಚಿವ

ವಿವಿಧ ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 150 ಮಂದಿ ಸಹಾಯಕ ಎಂಜಿನಿಯರ್‌ಗಳಿಗೆ (ಎಇ) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ (ಎಇಇ) ಹುದ್ದೆಯಪ್ರಭಾರ ನೀಡಿ ಸ್ಥಳನಿಯುಕ್ತಿಗೊಳಿಸಿ 2021ರ ಮಾರ್ಚ್ 15ರಂದು ಆದೇಶ ಹೊರಡಿಸಲಾಗಿತ್ತು. ಆದರೆ, ಈ ಪಟ್ಟಿಯಲ್ಲಿದ್ದ 30ಕ್ಕೂ ಹೆಚ್ಚು ಜನರ ಸ್ಥಳ ನಿಯುಕ್ತಿಯನ್ನು ಬದಲಿಸಿ ನಂತರದ ದಿನಗಳಲ್ಲಿ ಪರಿಷ್ಕೃತ ಆದೇಶಗಳನ್ನು ಹೊರಡಿಸಲಾಗಿದೆ. 2021ರ ಮಾರ್ಚ್‌ನಲ್ಲಿ ಸ್ಥಳನಿಯುಕ್ತಿಗೊಳಿಸಿ ಹೊರಡಿಸಿದ್ದ ಆದೇಶವನ್ನು ಮಾರ್ಪಡಿಸುವ ಕೆಲಸ ಈಗಲೂ ಮುಂದುವರಿದಿದೆ.

'ಪ್ರಭಾರ ಹುದ್ದೆ ನೀಡುವ ಅವಕಾಶವನ್ನು ಬಳಸಿಕೊಂಡು ಕೆಲವರನ್ನು ಆಯಕಟ್ಟಿನ ಹುದ್ದೆಗಳಿಗೆ ವರ್ಗಾವಣೆ ಮಾಡಲಾಗಿದೆ. ಇಲಾಖೆಯ 'ದೊಡ್ಡವರ' ಜತೆ 'ಒಪ್ಪಂದ' ಮಾಡಿಕೊಂಡವರಿಗಷ್ಟೇ ಲಾಭದಾಯಕ ಹುದ್ದೆಗೆ ಸ್ಥಳನಿಯುಕ್ತಿ ಆದೇಶ ಹೊರಡಿಸಲಾಗುತ್ತಿದೆ. ಹೈಕೋರ್ಟ್ ಆದೇಶಕ್ಕೆ ವ್ಯತಿರಿಕ್ತವಾಗಿ ಈ ರೀತಿಯ ವರ್ಗಾವಣೆ ನಡೆಯುತ್ತಿದೆ. 'ಒಪ್ಪಂದ'ಕ್ಕೆ ಬಾರದವರನ್ನು 400ರಿಂದ 500 ಕಿ.ಮೀ. ದೂರಕ್ಕೆ ವರ್ಗಾವಣೆ ಮಾಡಲಾಗುತ್ತಿದೆ' ಎಂದು ಕೆಲವು ನೊಂದ ಎಂಜಿನಿಯರ್‌ಗಳು ಅಳಲು ತೋಡಿಕೊಂಡಿದ್ದಾರೆ.

ಕಿರಿಯ ಎಂಜಿನಿಯರ್‌ಗಳು ಮಾತ್ರವಲ್ಲ; ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಯಿಂದ ಕಾರ್ಯನಿರ್ವಾಹಕ ಎಂಜಿನಿಯರ್, ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಯಿಂದ ಸೂಪರಿಂಟೆಂಡಿಂಗ್ ಎಂಜಿನಿಯರ್, ನಂತರದ ಹಂತದಲ್ಲಿ ಮುಖ್ಯ ಎಂಜಿನಿಯರ್‌ಗಳ ಹುದ್ದೆಗಳವರೆಗೂ ಪ್ರಭಾರದ ಹೆಸರಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ವರ್ಗಾವಣೆ, ಸ್ಥಳನಿಯುಕ್ತಿ ಆದೇಶಗಳನ್ನು ಹೊರಡಿಸಲಾಗಿದೆ ಎಂದು ದೂರುತ್ತಾರೆ.

'ಹಿಂದೂ ಸಮಾಜದ ರಕ್ಷಣೆಗೆ ಅಭ್ಯಾಸ'

ಮಡಿಕೇರಿ: 'ಬಜರಂಗದಳ ಆಯೋಜಿಸುವ ಶಿಬಿರದಲ್ಲಿ ಶಾಸಕರು ಭಾಗವಹಿಸಬಾರದೆಂದು ಯಾವ ಕಾನೂನಿನಲ್ಲಿದೆ' ಎಂದು ಶಾಸಕ ಕೆ.ಜಿ.ಬೋಪಯ್ಯ ಪ್ರಶ್ನಿಸಿದರು.

'ಪರಿವಾರದ ಕಾರ್ಯಕ್ರಮಕ್ಕೆ ಹೋಗುವುದು ನನ್ನ ಕರ್ತವ್ಯ. ಅದನ್ನು ಪ್ರಶ್ನಿಸಲಾಗದು. ವಿಶ್ವ ಹಿಂದೂ ಪರಿಷತ್, ಬಜರಂಗದಳದ ಶಿಬಿರಗಳು ರಾಜ್ಯದ ವಿವಿಧೆಡೆ ನಡೆಯುತ್ತವೆ. ಈ ವರ್ಷ ಕೊಡಗಿನ ಪೊನ್ನಂಪೇಟೆಯಲ್ಲಿ ನಡೆದಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಬಂದೂಕು ಹಿಡಿಯುವುದು ಕೊಡಗಿನಲ್ಲಿ ಜನ್ಮಸಿದ್ಧ ಹಕ್ಕು. ಎಲ್ಲೂ ಕಾನೂನು ಉಲ್ಲಂಘನೆ ಆಗಿಲ್ಲ. ಅದನ್ನು ಕೇಳುವುದಕ್ಕೆ ಅವನ್ಯಾರು' ಎಂದು ಏಕವಚನದಲ್ಲಿ ವಿಪಕ್ಷದ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಶಿಬಿರದಲ್ಲಿ ಏರ್ ಗನ್ ಬಳಸಲು ಅನುಮತಿ ಬೇಕಿಲ್ಲ. ಖಾಸಗಿ ಶಾಲೆಯಲ್ಲಿ ಅಭ್ಯಾಸ ನಡೆದಿದೆ ಎಂಬುದು ಸತ್ಯ ಎಂದು ಅವರು ಹೇಳಿದರು.

ಕಾರ್ತಿ ವಿರುದ್ಧ ಮತ್ತೆ ಪ್ರಕರಣ ದಾಖಲಿಸಿ ಶೋಧ ನಡೆಸಿದ ಸಿಬಿಐ

ಒಂದನೇ ಪುಟದಿಂದ

'ಅವರು ನನಗೆ ಎಫ್‌ಐಆರ್ ತೋರಿಸಿದರು. ಆರೋಪಿ ಎಂದು ಅದರಲ್ಲಿ ನನ್ನನ್ನು ಉಲ್ಲೇಖಿಸಿರಲಿಲ್ಲ. ಶೋಧ ತಂಡಕ್ಕೆ ಏನೂ ಸಿಕ್ಕಿಲ್ಲ ಮತ್ತು ಅವರು ಏನನ್ನೂ ಜಪ್ತಿ ಮಾಡಿಲ್ಲ' ಎಂದು ಚಿದಂಬರಂ ಹೇಳಿದ್ದಾರೆ.

ತಲವಂಡಿ ಸಾಬೊ ಪವರ್ ಲಿ., ವೀಸಾಗಳಿಗಾಗಿ ಕಾರ್ತಿ ಅವರ ಆಪ್ತ ಎಸ್. ಭಾಸ್ಕರರಾಮನ್ ಅವರನ್ನು ಸಂಪರ್ಕಿಸಿತ್ತು. 2011ರ ಜುಲೈ 30ರಂದು ವೀಸಾ ಅರ್ಜಿಯನ್ನು ಗೃಹ ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು. ನಂತರ ಈ ಅರ್ಜಿಯನ್ನು ಕಾರ್ತಿ ಅವರಿಗೆ ಕಳುಹಿಸಲಾಗಿತ್ತು. ಇದರ ಅನುಮೋದನೆಗಾಗಿ ₹50 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಲಾಗಿತ್ತು. ಈ ಬಗ್ಗೆ ಕಾರ್ತಿ ಅವರು ಚಿದಂಬರಂ ಅವರ ಜತೆ ಮಾತುಕತೆ ನಡೆಸಿದ್ದರು. ಎರಡು ಹುಸಿ ಇನ್‌ವಾಯ್ಸ್‌ಗಳ ಮೂಲಕ ಕಾರ್ತಿ ಅವರಿಗೆ ₹50 ಲಕ್ಷ ನೀಡಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಕಾರ್ತಿ ಅವರ ವಿರುದ್ಧ ಕೇಂದ್ರ ಕಾನೂನು ಜಾರಿ ಸಂಸ್ಥೆಯು ನಡೆಸಿದ ಆರನೇ ಶೋಧ ಇದು. ಐಎನ್‌ಎಕ್ಸ್ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ 2018ರಲ್ಲಿ ಅವರನ್ನು ಸಿಬಿಐ ಬಂಧಿಸಿತ್ತು. ಇದೇ ಪ್ರಕರಣದಲ್ಲಿ ಚಿದಂಬರಂ ಅವರ ಬಂಧನವೂ ಆಗಿತ್ತು.

ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಶೋಧವನ್ನು ಖಂಡಿಸಿದ್ದಾರೆ. 'ಚಿದಂಬರಂ ಅವರು ರಾಷ್ಟ್ರವಾದಿ, ದೇಶಪ್ರೇಮಿ. ದೇಶದ ಬಗ್ಗೆ ಅವರ ಬದ್ಧತೆಯನ್ನು ಪ್ರಶ್ನಿಸುವಂತಿಲ್ಲ. ಕೇಂದ್ರದ ಮಾಜಿ ಗೃಹ ಸಚಿವರ ಮೇಲೆ ವಿವೇಕರಹಿತವಾಗಿ ಆರೋಪ ಹೊರಿಸುವುದು ಕೀಳು ಮಟ್ಟದ ರಾಜಕೀಯ' ಎಂದು ಅವರು ಹೇಳಿದ್ದಾರೆ.


ಚಿದಂಬರಂ ಅವರು ತಮಿಳುನಾಡಿನಿಂದ ರಾಜ್ಯಸಭೆಗೆ ಆಯ್ಕೆಯಾಗುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ಶೋಧ ನಡೆದಿದೆ. ಇದರ ಹಿಂದೆ ರಾಜಕೀಯ ಪಿತೂರಿ ಇದೆ ಎಂದು ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕೆ.ಎಸ್. ಅಳಗಿರಿ ಹೇಳಿದ್ದಾರೆ. ಚಿದಂಬರಂ ಅವರು ಕೂಡ ಶೋಧದ ಸಂದರ್ಭ ಆಸಕ್ತಿದಾಯಕವಾಗಿದೆ ಎಂದು ಸೂಚ್ಯವಾಗಿ ಹೇಳಿದ್ದಾರೆ.

ಸಿ.ಎಂ ಮನೆ ಎದುರು 23ರಿಂದ ಧರಣಿ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ನೀಡದಿದ್ದರೆ ಮೇ 23 ರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಶಿಗ್ಗಾವಿಯ ಮನೆಯಿಂದಲೇ ರಾಜ್ಯದಾದ್ಯಂತ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲಾಗುವುದು' ಎಂದು ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಶ್ರೀ ಎಚ್ಚರಿಸಿದರು.

ಪಟ್ಟಣದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ ತಾಲ್ಲೂಕು ಘಟಕದಿಂದ '2ಎ' ಮೀಸಲಾತಿಗೆ ಒತ್ತಾಯಿಸಿ ಮಂಗಳವಾರ ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆ ನೇತೃತ್ವ ವಹಿಸಿ ಅವರು ಮಾತನಾಡಿದರು.

'ಇದು ಪಂಚಮಸಾಲಿ '2ಎ' ಮಿಸಲಾತಿಗಾಗಿ ಮಾಡು ಇಲ್ಲವೇ ಮಡಿ ಹೋರಾಟವಾಗಲಿದೆ. ಸರ್ಕಾರ ಸಮಾಜದ ಬೇಡಿಕೆಯನ್ನು ಪರಿಗಣಿಸಬೇಕು. ತಪ್ಪಿದಲ್ಲಿ ಬರುವ ದಿನಗಳಲ್ಲಿ ಸಮಾಜದ ಜನರು ತಕ್ಕ ಪಾಠ ಕಲಿಸಲಿದ್ದಾರೆ. ಸರ್ಕಾರ ಕಾಲಹರಣ ಮಾಡದೆ ಸಮಾಜದ ಬೇಡಿಕೆಯನ್ನು ಈಡೇರಿಸಬೇಕು' ಎಂದರು.



ಕಾಳ್ಗಿಚ್ಚನ್ನು ಆರಿಸಬಲ್ಲದೆ ಕೃತಕ ಬುದ್ಧಿಮತ್ತೆ?

'ವೈಫೈರ್' ಹೆಸರಿನ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಕಾಳ್ಗಿಚ್ಚು ನಿಯಂತ್ರಣ ತಂತ್ರಾಂಶ ವ್ಯವಸ್ಥೆಯನ್ನು ಅಮೆರಿಕದ ಅಗ್ನಿಶಾಮಕ ಸಿಬ್ಬಂದಿ ಬಳಸುತ್ತಿದ್ದಾರೆ



ಉದಯ ಶಂಕರ ಪುರಾಣಿಕ

ಅಮೆರಿಕ, ಗ್ರೀಸ್, ಭಾರತ, ಕೆನಡಾ, ಸ್ಪೇನ್, ಮೆಕ್ಸಿಕೋ, ಸ್ವೀಡನ್, ಬ್ರಿಟನ್ ಮೊದಲಾದ ದೇಶಗಳಲ್ಲಿ ಬೆಂಕಿ ಬಿದ್ದು, ಪ್ರತಿವರ್ಷ ಲಕ್ಷಾಂತರ ಎಕರೆ ಅರಣ್ಯ ಬೆಂಕಿಗೆ ಆಹುತಿಯಾಗುತ್ತಿದೆ.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನ ತಂತ್ರಜ್ಞಾನ ಪರಿಣತರು, ಕಾಳ್ಗಿಚ್ಚಿಗೆ ಸಂಬಂಧಿಸಿದಂತೆ ಮೂರು ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿದ್ದಾರೆ.

ಪ್ರಕೃತಿ ಸಹಜ ಕಾರಣಗಳಿಂದಾಗಿ ಉಂಟಾಗುವ ಕಾಳ್ಗಿಚ್ಚು ಪ್ರಕರಣಗಳನ್ನು ಎಷ್ಟು ದಿನ ಮುಂಚಿತವಾಗಿ ತಿಳಿಯಬಹುದು? ಕಾಳ್ಗಿಚ್ಚು ಉಂಟಾದಾಗ, ಅತ್ಯಂತ ಕಡಿಮೆ ಸಮಯದಲ್ಲಿ ಈ ಕಾಳ್ಗಿಚ್ಚು ಎಷ್ಟು ಬೇಗ ಮತ್ತು ಯಾವ ದಿಕ್ಕಿನಲ್ಲಿ ಹರಡಬಹುದು ಎಂದು ತಿಳಿಯಲು ಸಾಧ್ಯವೇ? ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಳಸಿ ಲೇಸರ್ ಆಧಾರಿತ ಉಪಕರಣಗಳಿಂದ ಕಾಳ್ಗಿಚ್ಚು ಹರಡಂತೆ ನಿಯಂತ್ರಿಸಲು ಸಾಧ್ಯವೇ?

53 ವರ್ಷಗಳ ಹವಾಮಾನ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿದ ಈ ತಜ್ಞರ ತಂಡ, ಈಗ ಲಭ್ಯವಿರುವ ಹವಾಮಾನ ಮಾಹಿತಿಯನ್ನು ಸಂಗ್ರಹಿಸಿದರು. ಈ ಮಾಹಿತಿಗಳನ್ನು ಆಧರಿಸಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಬಳಸಿ, ಅರಣ್ಯಪ್ರದೇಶದ ಹೊಸ ನಕ್ಷೆಯನ್ನು ಸಿದ್ಧಪಡಿಸಲಾಯಿತು. ಅರಣ್ಯ ಪ್ರದೇಶದಾದ್ಯಂತ ಇರುವ ಎತ್ತರದ ಪ್ರದೇಶಗಳು ಮತ್ತು ಕಂದಕಗಳಲ್ಲಿ ಇರುವ ಒತ್ತಡದ ಪ್ರಮಾಣವನ್ನು ಆಧರಿಸಿ ರಚಿಸಲಾದ ಈ ನಕ್ಷೆಯಿಂದ, ಏಳು ದಿನಗಳು ಮುಂಚಿತವಾಗಿ ಅರಣ್ಯಪ್ರದೇಶದಲ್ಲಿ ಎಲ್ಲಿ ಕಾಳ್ಗಿಚ್ಚು ಆರಂಭವಾಗಬಹುದು ಎಂದು ಮುನ್ನೆಚರಿಕೆ ನೀಡಲು ಸಾಧ್ಯವಿದೆ.

'ವೈಫೈರ್' ಹೆಸರಿನ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಕಾಳ್ಗಿಚ್ಚು ಮುನ್ಸೂಚನೆ ಮತ್ತು ನಿಯಂತ್ರಣ ತಂತ್ರಾಂಶ ವ್ಯವಸ್ಥೆಯನ್ನು ಅಮೆರಿಕದ ಲಾಸ್ ಏಂಜೆಲಿಸ್‌ನ ಅಗ್ನಿಶಾಮಕ ಸಿಬ್ಬಂದಿ ಬಳಸುತ್ತಿದ್ದಾರೆ. ಕಾಳ್ಗಿಚ್ಚು ನಂದಿಸಲು ಹೋರಾಡುವ ಸಿಬ್ಬಂದಿ, ಕಾಳ್ಗಿಚ್ಚಿನ ಕುರಿತು ಅಧ್ಯಯನ ಮಾಡುವ ಸಂಶೋಧಕರು ಮತ್ತು ಕಾಳ್ಗಿಚ್ಚು ಎಲ್ಲಿ ಸಂಭವಿಸಿದೆ ಎಂದು ಆತಂಕದಲ್ಲಿರುವ ಜನಸಾಮಾನ್ಯರು ವೈಫೈರ್‌ನಿಂದ ಮಾಹಿತಿ ಪಡೆಯುತ್ತಿದ್ದಾರೆ. ಅಮೆರಿಕದ ರಾಷ್ಟ್ರೀಯ ವಿಜ್ಞಾನ ಫೌಂಡೇಷನ್ ಆರ್ಥಿಕ ನೆರವು ನೀಡಿರುವ ವೈಫೈರ್ ಯೋಜನೆಯಲ್ಲಿ ಅಗ್ನಿಶಾಮಕ ಮತ್ತು ಅರಣ್ಯತಜ್ಞರು ಹಾಗೂ ಸೂಪರ್ ಕಂಪ್ಯೂಟರ್ ಪರಿಣತರು ಜೊತೆಗೂಡಿ ಕೆಲಸ ಮಾಡಿ ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದಾರೆ.

ಹಲವು ದಿನ ಮುಂಚಿತವಾಗಿ ಕಾಳ್ಗಿಚ್ಚು ಸಂಭವಿಸುವ ಬಗ್ಗೆ ಮಾಹಿತಿ ದೊರೆತರೆ, ಅದರಿಂದಾಗುವ ಪ್ರಮುಖ ಪ್ರಯೋಜನಗಳು ಹೀಗಿವೆ:

1. ಕಾಳ್ಗಿಚ್ಚು ನಿಯಂತ್ರಣಕ್ಕೆ ಅಗತ್ಯವಾದ ಕಾರ್ಯಾಚರಣೆಯನ್ನು ರೂಪಿಸುವುದು ಮತ್ತು ಅಗ್ನಿನಿಯಂತ್ರಣಕ್ಕೆ ಬೇಕಾದ ಸಿಬ್ಬಂದಿ, ವಾಹನಗಳು ಮತ್ತು ನೀರಿನ ವ್ಯವಸ್ಥೆ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ.
2. ಕಾಳ್ಗಿಚ್ಚಿನ ಹತ್ತಿರದ ವಸತಿ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಕಳುಹಿಸುವುದು ಸಾಧ್ಯವಾಗುತ್ತದೆ.
3. ಕಾಳ್ಗಿಚ್ಚಿನಲ್ಲಿ ಹಾಳಾಗುವ ದೂರವಾಣಿ, ವಿದ್ಯುತ್, ಕುಡಿಯುವ ನೀರು, ಆಹಾರ ಮತ್ತು ಆರೋಗ್ಯ ವ್ಯವಸ್ಥೆಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು ಕಾಳ್ಗಿಚ್ಚಿಗೆ ಮುಖ್ಯ ಇಂಧನವಾಗುವುದು ಮರ, ಗಿಡಗಂಟಿ ಮತ್ತು ಹುಲ್ಲಿನ ಒಣಗಿದ ಭಾಗಗಳು ಮತ್ತು ತರಗೆಲೆಗಳು. ಕಾಳ್ಗಿಚ್ಚು ಹರಡಲು ಬಿಸಿಲು, ಗಾಳಿಯ ವೇಗ ಮತ್ತು ದಿಕ್ಕು ಪ್ರಮುಖ ಕಾರಣಗಳಾಗುತ್ತವೆ. ಇನ್ನು ಕಾಳ್ಗಿಚ್ಚು ಶುರುವಾಗಲು ಪ್ರಮುಖ ಕಾರಣ ಮನುಷ್ಯನ ಉದ್ದೇಶಪೂರ್ವಕ ಕುಕೃತ್ಯಗಳು ಅಥವಾ ನಿರ್ಲಕ್ಷ್ಯದ ವರ್ತನೆ. ಈ ಅಂಶಗಳನ್ನು ಪರಿಗಣಿಸಿ ಅಭಿವೃದ್ಧಿಪಡಿಸಲಾಗಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಕಾಳ್ಗಿಚ್ಚು ಮುನ್ನೆಚರಿಕೆ ವ್ಯವಸ್ಥೆಯಿಂದ ಕಾಳ್ಗಿಚ್ಚು ಉಂಟಾದಾಗ ಕಾಡಿನಲ್ಲಿ ಯಾವ ದಿಕ್ಕಿನಲ್ಲಿ ಮತ್ತು ಎಷ್ಟು ವೇಗವಾಗಿ ಹರಡಬಹುದು ಎಂದು ಅತ್ಯಂತ ಕಡಿಮೆ ಸಮಯದಲ್ಲಿ ತಿಳಿಯಲು ಸಾಧ್ಯವಿದೆ. ಇಂತಹ ಸೌಲಭ್ಯವನ್ನು ವೈಫೈರ್‌ನಂತಹ ಮುನ್ನೆಚ್ಚರಿಕೆ ಮತ್ತು ಕಾಳ್ಗಿಚ್ಚು ನಿಯಂತ್ರಣ ವ್ಯವಸ್ಥೆಯಲ್ಲಿ ನೀಡಲು ಪ್ರಯತ್ನ ನಡೆದಿದೆ.

ನೆಲದ ಮಟ್ಟದಲ್ಲಿ ಹರಡುವ ಕಾಳ್ಗಿಚ್ಚು, ಮರಗಳನ್ನು ಆವರಿಸಿಕೊಂಡಂತೆ, ನೋಡುನೋಡುತ್ತಿರುವಂತೆ ಮರಗಳ ಎತ್ತರದಲ್ಲಿ ಹರಡಲು ಪ್ರಾರಂಭಿಸುತ್ತದೆ. ಕಾಡಿನ ಸೂರಿಗೆ ಬೆಂಕಿ ಬಿದ್ದಂತಹ ಪರಿಸ್ಥಿತಿ ಅದು. ಗಾಳಿಯೂ ಪೂರಕವಾದರೆ ವೇಗವಾಗಿ ಹರಡುವ ಇಂತಹ ಕಾಳ್ಗಿಚ್ಚನ್ನು ನಿಯಂತ್ರಿಸುವುದು ಅತ್ಯಂತ ಕಷ್ಟದ ಕೆಲಸವಾಗುತ್ತದೆ ಎಂಬುದು ಕಾಳ್ಗಿಚ್ಚು ನಂದಿಸಲು ಹೋರಾಡುವ ಸಿಬ್ಬಂದಿಗಳ ಅಭಿಪ್ರಾಯವಾಗಿದೆ.

ಕಾಳ್ಗಿಚ್ಚು ನಿಯಂತ್ರಿಸಲು ಬಳಸಲಾಗುವ ಹೆಲಿಕಾಪ್ಟರ್‌ಗಳು, ಅಗ್ನಿಶಾಮಕ ವಾಹನಗಳು ಅಥವಾ ಕಾಡಿನ ಕಚ್ಚಾ ರಸ್ತೆಗಳಲ್ಲಿ ಸಂಚರಿಸುವ ಅರಣ್ಯ ಇಲಾಖೆ ಬಳಸುವ ವಾಹನಗಳು, ಇವುಗಳಿಗೆ ವಿಶೇಷವಾದ ಲೇಸರ್ ಆಧಾರಿತ ಉಪಕರಣವನ್ನು ಅಳವಡಿಸಲಾಗುತ್ತದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಬಳಸಿ ಕೆಲಸ ಮಾಡುವ ಈ ಲೇಸರ್ ಉಪಕರಣವು, ಮರಗಳಲ್ಲಿ ಎತ್ತರದಲ್ಲಿರುವ ಒಣಗಿದ ಎಲೆಗಳು, ಕೊಂಬೆಗಳು ಮತ್ತು ಹೂವು, ಕಾಯಿಗಳನ್ನು ಗುರುತಿಸುತ್ತದೆ. ನಂತರ ಅವುಗಳನ್ನು ಗುರಿಯಾಗಿಟ್ಟುಕೊಂಡು ಅರೆಕ್ಷಣ ಚಿಮ್ಮುವ ಲೇಸರ್‌ನಿಂದಾಗಿ, ಈ ಒಣಗಿದೆ ಎಲೆಗಳು, ಕೊಂಬೆಗಳು, ಹೂವು, ಕಾಯಿಗಳು ಕತ್ತರಿಸಿ ನೆಲಕ್ಕೆ ಬೀಳುತ್ತವೆ.

ಅತ್ಯಂತ ಕಡಿಮೆ ಅವಧಿಯಲ್ಲಿ ಬಳಸಲಾಗುವ ಲೇಸರ್‌ನಿಂದಾಗಿ ಮರಗಳಿಗಾಗಲಿ, ಮನುಷ್ಯರು ಮತ್ತು ವನ್ಯಜೀವಿಗಳಿಗಾಗಲಿ ತೊಂದರೆಯಾಗದಂತೆ ಉಪಕರಣವನ್ನು ಅಭಿವೃದ್ಧಿಪಡಿಸಿದೆ. ಮರಗಳನ್ನು ಆವರಿಸಿಕೊಳ್ಳುವ ಬೆಂಕಿ, ಮರವನ್ನೇರಿ, ಕಾಡಿನ ಸೂರಿನಂತೆ ಹರಡಲು ಒಣಗಿದೆ ಕೊಂಬೆಗಳು, ಎಲೆಗಳು, ಹೂವು, ಕಾಯಿಗಳು ಇಂಧನವಾಗುತ್ತವೆ. ಇದು ಇಲ್ಲದಂತೆ ಮಾಡಿದಾಗ, ಕಾಳ್ಗಿಚ್ಚು ನೆಲಮಟ್ಟಕ್ಕೆ ಇಳಿಯುವುದು ಅನಿವಾರ್ಯವಾಗುತ್ತದೆ. ಆಗ ಅದನ್ನು ನಿಯಂತ್ರಿಸಲು ಸುಲಭವಾಗುತ್ತದೆ.

ಕೆಲವೊಮ್ಮೆ ಕಾಳ್ಗಿಚ್ಚಿನ ನಡುವೆ ಸಿಕ್ಕಿಕೊಳ್ಳುವ ವನ್ಯಜೀವಿಗಳು ಮತ್ತು ಮನುಷ್ಯರನ್ನು ಸುರಕ್ಷಿತ ಪ್ರದೇಶಕ್ಕೆ ತರಲು ದಾರಿಗಳಿರುವುದಿಲ್ಲ. ಅಂತಹ ತುರ್ತು ಸಂದರ್ಭಗಳಲ್ಲಿ ಕೂಡ ಈ ಲೇಸರ್ ಆಧಾರಿತ ಉಪಕರಣವನ್ನು ಬಳಸಿ, ಕಾಳ್ಗಿಚ್ಚನ್ನು ನಿಯಂತ್ರಿಸಿ, ಜನ ಮತ್ತು ವನ್ಯಜೀವಿಗಳು ಹೊರಬರಲು ದಾರಿ ಮಾಡಿಕೊಡಲು ಸಾಧ್ಯವಿದೆ.

ಕಾಡಿಗೆ ಬೆಂಕಿ ಇಡುವ ಅಪರಾಧಿಗಳಿಂದಾಗಿ ನಮ್ಮ ದೇಶದಲ್ಲಿ ಪ್ರತಿವರ್ಷ ಸಾವಿರಾರು ಎಕರೆ ಅರಣ್ಯಪ್ರದೇಶ ಅಗ್ನಿಗೆ ಆಹುತಿಯಾಗುತ್ತಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಂತಹ ತಂತ್ರಜ್ಞಾನ ಬಳಸಿ ಕಾಳ್ಗಿಚ್ಚು ಮುನ್ನೆಚರಿಕೆ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಬಳಸಲು ಸಾಧ್ಯವಿದೆ. ❖

ರಿಮೋಟ್ ಸೆನ್ಸಿಂಗ್‌ಗೆ ಕ್ಲೌಡ್ ಬೆಂಬಲ

ಸುಧೀರ ಎಚ್. ಎಸ್.

ಕಳೆದ ತಿಂಗಳಷ್ಟೇ 'ಶಕುಂತಲಾ' ಎಂಬ ಭಾರತದ ಉಪಗ್ರಹವನ್ನು ಅಮೆರಿಕದ 'ಸ್ಪೇಸ್ ಎಕ್ಸ್ ಕಂಪನಿ'ಯ 'ಫಾಲ್ಕನ್' ಎಂಬ ವಾಹಕದಲ್ಲಿ ಅಂತರಿಕ್ಷಕ್ಕೆ ಹಾರಿಸಲಾಯಿತು. ಈ ಉಪಗ್ರಹ ಸಂಗ್ರಹಿಸುವ ಮಾಹಿತಿ ರೈತರಿಗೆ ವಿಶೇಷವಾಗಿ ಅನುಕೂಲವಾಗುತ್ತದೆ. ಅಂದರೆ ಇನ್ನು ಮುಂದೆ ನೆನ್ನೆಯಷ್ಟೇ ಉಪಗ್ರಹದಿಂದ ಸೆರೆಹಿಡಿದ ಮಾಹಿತಿ ಮೊಬೈಲ್‌ನ ಮೂಲಕ ರೈತರಿಗೆ ಅನುಕೂಲವಾಗುವಂತೆ ತಲುಪುವುದು ಸಾಧ್ಯವಾಗುತ್ತದೆ. ಇಷ್ಟೆಲ್ಲಾ ಮಾಹಿತಿಯ ವಿಶ್ಲೇಷಣೆ ಅಷ್ಟು ಬೇಗ ಸಾಧ್ಯವೇ?

ಕಂಪ್ಯೂಟರ್ ಸೈನ್ಸ್ ಮತ್ತು ಇಂಟರ್‌ನೆಟ್ ಯುಗದಲ್ಲಿ ಸಾಗುತ್ತಿರುವ ಬೆಳವಣಿಗೆಗಳನ್ನು ತಂತ್ರಜ್ಞರು ರಿಮೋಟ್ ಸೆನ್ಸಿಂಗ್‌ಗೆ ಬಳಸಿ ಈ ಕ್ಷೇತ್ರಕ್ಕೆ ಹೊಸ ಆಯಾಮವನ್ನೇ ಒದಗಿಸಿದ್ದಾರೆ.

ಕೆಲವು ವರ್ಷಗಳಿಂದ ಈಚೆಗೆ ಬಿಗ್ ಡೇಟಾ, ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಮತ್ತು ಯಂತ್ರಕಲಿಕೆ (ಮಷಿನ್ ಲರ್ನಿಂಗ್) ಎಂಬುದು ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಚಲಿತ ಅಂಶಗಳಾಗಿವೆ. 'ರಿಮೋಟ್ ಸೆನ್ಸಿಂಗ್' ಎಂಬುದು ಭೌತಶಾಸ್ತ್ರ ಮತ್ತು ಕಂಪ್ಯೂಟರ್ ಸೈನ್ಸ್‌ನ ಕವಲು. ಯಾವುದೇ ವಸ್ತುವನ್ನು ಸ್ಪರ್ಶಿಸದೆ ಅದರಿಂದ ಪ್ರತಿಫಲಿತ ಬೆಳಕನ್ನು ಸೆರೆ ಹಿಡಿಯುವ ಪ್ರಕ್ರಿಯೆಯನ್ನು ಸರಳವಾಗಿ 'ರಿಮೋಟ್ ಸೆನ್ಸಿಂಗ್' ಎನ್ನಬಹುದು.

ಮನುಷ್ಯರು ಕಾಣುವ ಬೆಳಕು ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್‌ನಲ್ಲಿ 'ವಿಸಿಬಲ್ ಬ್ಯಾಂಡ್' ಎನ್ನುತ್ತಾರೆ. ಈ ವಿಸಿಬಲ್ ಬ್ಯಾಂಡ್ ಎನ್ನುವುದು ಬೇರೆ ಬೇರೆ ಬ್ಯಾಂಡ್‌ಗಳಾದ ಕೆಂಪು, ಹಸಿರು, ನೀಲಿ (ರೆಡ್, ಗ್ರೀನ್, ಬ್ಲೂ – RGB) ಬ್ಯಾಂಡ್‌ಗಳಿಂದ ಕೂಡಿರುತ್ತದೆ. ಅಂದರೆ ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್‌ನಲ್ಲಿ ವಿಸಿಬಲ್ ಬ್ಯಾಂಡ್ ಎನ್ನುವುದು ಕೆಂಪು, ಹಸಿರು, ನೀಲಿಬಣ್ಣಗಳ ತರಂಗಾಂತರದ ಸಮ್ಮಿಶ್ರಿತ ತರಂಗಾಂತರ. ನಮ್ಮ ಕಣ್ಣುಗಳ ವಿಕಸನದಲ್ಲಿ ಈ ಮೂರು ಬಣ್ಣಗಳ ಸಮ್ಮಿಶ್ರಿತ ತರಂಗಾಂತರದ ಮಾಹಿತಿಯನ್ನು ವಿಶ್ಲೇಷಿಸಲು ವಿನ್ಯಾಸಗೊಂಡಿದೆ. ಮಾಹಿತಿಯ ಸೆರೆ ಕಣ್ಣಿನಿಂದಾದರೆ, ಅದರ ತ್ವರಿತ ರೀತಿಯಲ್ಲಿ ವಿಶ್ಲೇಷಣೆ ನಮ್ಮ ಮಿದುಳಿನಲ್ಲಿ ಆಗುತ್ತದೆ. ಅಂದಹಾಗೆ, ನಾವು ನೋಡಿದ ವಸ್ತುಗಳನ್ನೆಲ್ಲಾ ವಿಶ್ಲೇಷಿಸುವ ಪ್ರಕ್ರಿಯೆಗೆ (ಈಗ ಓದುತ್ತಿರುವುದನ್ನು) 'ರಿಮೋಟ್ ಸೆನ್ಸಿಂಗ್' ಅನ್ನಬಹುದು.

ಇನ್ನೊಂದು ರೀತಿಯಲ್ಲಿ ಅವಲೋಕಿಸಿದರೆ, ನಮ್ಮ ಕಣ್ಣುಗಳು ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್‌ನ ಕೇವಲ ವಿಸಿಬಲ್ ಬ್ಯಾಂಡ್‌ಗೆ ಮಾತ್ರ ಸೀಮಿತ. ಆದರೆ ಭೂಮಿಯಲ್ಲಿನ ಬೇರೆ ಬೇರೆ ವಸ್ತುಗಳು ಕೆಂಪು, ಹಸಿರು, ನೀಲಿ ಬ್ಯಾಂಡ್‌ಗಳನ್ನು ಹೊರತುಪಡಿಸಿ ಇನ್ನು ಹೆಚ್ಚು ಆವರ್ತನ ಹೊಂದಿರುವ ಬ್ಯಾಂಡ್‌ಗಳಾದ 'ನೀಯರ್ ಇನ್‌ಫ್ರಾರೆಡ್', 'ಶಾರ್ಟ್ ವೇವ್ ಇನ್‌ಫ್ರಾರೆಡ್' ಬ್ಯಾಂಡ್‌ಗಳಲ್ಲಿ ಪ್ರತಿಫಲನ ವಿಭಿನ್ನವಾಗಿರುತ್ತದೆ. ಇದನ್ನು ಆಧರಿಸಿ ಬೇರೆ ಬೇರೆ ವಸ್ತುಗಳಿಂದ ಪ್ರತಿಫಲಿತ ಮಾಹಿತಿಯನ್ನು ಬೇರೆ ಬೇರೆ ಬ್ಯಾಂಡ್‌ಗಳಲ್ಲಿ ಸೆರೆ ಹಿಡಿದು ಇದನ್ನು ವಿಶ್ಲೇಷಿಸಲಾಗುತ್ತದೆ.

ಮಾಹಿತಿ ಸಂಗ್ರಹಣೆಗೆ ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್

ಒಮ್ಮೆ ಸೆರೆ ಹಿಡಿದ ಪ್ರತಿಯೊಂದು ಬ್ಯಾಂಡಿನ ಮಾಹಿತಿ ಹಲವಾರು ಮೆಗಾ/ಗಿಗಾ ಬೈಟ್‌ನಿಂದ ಕೂಡಿರುತ್ತದೆ. ಉದಾಹರಣೆಗೆ, ಸುಮಾರು 800 ಚದರ ಕಿ. ಮೀ. ಇರುವ ಬೆಂಗಳೂರಿನ ವ್ಯಾಪ್ತಿಗೆ ಸೆರೆ ಹಿಡಿದ ಮಾಹಿತಿಯ ಭೌಗೋಳಿಕ ರೆಸಲ್ಯೂಷನ್ ಒಂದು ಪಿಕ್ಸೆಲ್ ಸುಮಾರು 30 ಮೀ. ಇದ್ದು, ಕೇವಲ ಒಂದು ಬ್ಯಾಂಡ್‌ನ ಮಾಹಿತಿಯೇ 200 ಮೆಗಾ ಬೈಟ್ (MB) ಇರುತ್ತದೆ. ಇನ್ನು ಒಮ್ಮೆ ಇಂತಹ ಉಪಗ್ರಹಗಳಲ್ಲಿ ಸೆರೆ ಹಿಡಿಯುವುದು ಕನಿಷ್ಠ ನಾಲ್ಕರಿಂದ ಹನ್ನೆರಡು ಬ್ಯಾಂಡ್‌ಗಳಿರುತ್ತವೆ. ಇನ್ನು ಭೌಗೋಳಿಕ ರೆಸಲ್ಯೂಷನ್ ಹೆಚ್ಚಾದಂತೆ ಇದರ ಗಾತ್ರ ಹೆಚ್ಚಾಗುತ್ತದೆ. ಅಂದರೆ ನಾವು ಇದನ್ನು ಓದುತ್ತಿದ್ದಂತೆ ಅಂತರಿಕ್ಷದಲ್ಲಿ ಸಾವಿರಾರು ಉಪಗ್ರಹಗಳು ನಿರಂತರವಾಗಿ ಭೂಮಿಯ ಸುತ್ತ ಸಾಗುತ್ತ ಅದೆಷ್ಟೋ ಮಾಹಿತಿಯನ್ನು ಕಲೆ ಹಾಕುತ್ತಿದೆ. ಒಂದು ಬಗೆಯಲ್ಲಿ ಇದೂ ಬಿಗ್ ಡೇಟಾ ಆಗಿದೆ. ಇದನ್ನೆಲ್ಲಾ ಕೆಲವೇ ವರ್ಷಗಳ ಹಿಂದೆ ಕ್ರೋಡೀಕರಿಸಿ ಒಂದೆಡೆ ಸಂಗ್ರಹಿಸಿ, ವಿಶ್ಲೇಷಿಸುವುದು ಒಂದು ದೊಡ್ಡ ತಲೆನೋವೇ ಆಗಿತ್ತು.

ಆದರೆ ಈಗ ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್‌ನಂತಹ ಕಂಪನಿಗಳು ಈ ರೀತಿ ಮಾಹಿತಿಯನ್ನು ಸಂಗ್ರಹಿಸಲು 'ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್' ಅನ್ನು ರೂಪಿಸಿದ್ದಾರೆ. ಹಾಗಾಗಿ ಕ್ಷಣಾರ್ಧದಲ್ಲಿ ಅಮೆರಿಕದ ನಾಸಾ ಸಂಸ್ಥೆ ಮತ್ತು ಯುರೋಪಿಯನ್ ಯೂನಿಯನ್‌ಗೆ ಸೇರಿದ ಹಲವಾರು ಡೇಟಾ ಈಗಾಗಲೇ ಇಂತಹ ಕ್ಲೌಡ್‌ನಲ್ಲಿದೆ. ಈ ಮಾಹಿತಿಯನ್ನು ವಿಶ್ಲೇಷಕರು ಯಾವಾಗ ಬೇಕಾದರೂ ಪಡೆಯಬಹುದಾಗಿದೆ.

ವಿಶ್ಲೇಷಣೆಗೆ ಯಂತ್ರಕಲಿಕೆ

ಬೇರೆ ಬೇರೆ ವಸ್ತುಗಳಿಂದ ಪ್ರತಿಫಲಿತ ಮಾಹಿತಿ ಬೇರೆ ಬೇರೆ ಬ್ಯಾಂಡ್‌ಗಳಲ್ಲಿ ಭಿನ್ನವಾಗಿರುತ್ತದೆ. ಇದನ್ನು ಆಧರಿಸಿ ಈ ವಿಶಿಷ್ಟವಾದ ಗುರುತಿನ ಮಾಹಿತಿಯನ್ನು ಸ್ಪೆಕ್ಟ್ರಲ್ ಲೈಬ್ರರಿಯಾಗಿ ರೂಪಿಸಲಾಗುತ್ತದೆ. ಈ ಲೈಬ್ರರಿ ಆಧರಿಸಿ ಈಗಷ್ಟೇ ಸೆರೆ ಹಿಡಿದ ಮಾಹಿತಿಯನ್ನು ವಿಶ್ಲೇಷಿಸಬಹುದಾಗಿದೆ.

ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲಿ ಈಗಾಗಲೇ ಎಲ್ಲ ಪ್ರಮುಖ ಕೃಷಿ ಬೆಳೆಗಳಿಗೆ ವಿಶಿಷ್ಟವಾದ 'ಸ್ಪೆಕ್ಟ್ರಲ್ ಸಿಗ್ನೇಚರ್ ಲೈಬ್ರರಿ'ಯನ್ನು ರೂಪಿಸಿಕೊಂಡಿದ್ದಾರೆ. ಹಾಗಾಗಿ ಇದನ್ನೇ ಕೃತಕ ಬುದ್ಧಿಮತ್ತೆ ಮತ್ತು ಯಂತ್ರಕಲಿಕೆಯ ಮಾಡೆಲ್‌ಗಳಿಗೆ ಪೂರಕವಾದ ಕಲಿಕೆಗೆ ಬಳಸುತ್ತಾರೆ. 'ರೇಡಿಯಂಟ್ ಅರ್ಥ್' ಎಂಬ ಲಾಭರಹಿತ ಸಂಸ್ಥೆ ಈಗಾಗಲೇ ಆಫ್ರಿಕಾ ದೇಶದಲ್ಲಿನ ಕೃಷಿ ಬೆಳೆಗಳಿಗೆ ವಿಶಿಷ್ಟವಾದ ಸ್ಪೆಕ್ಟ್ರಲ್ ಸಿಗ್ನೇಚರ್ ಲೈಬ್ರರಿಯನ್ನು ಕ್ರೋಡೀಕರಿಸುತ್ತಿದೆ. ಇದರಿಂದ ತ್ವರಿತ ರೀತಿಯಲ್ಲಿ ನೆನ್ನೆಯಷ್ಟೇ ಸೆರೆ ಹಿಡಿದ ಮಾಹಿತಿಯನ್ನು ಕ್ಷಣಾರ್ಧದಲ್ಲಿ ವಿಶ್ಲೇಷಿಸಿ ಫಲಿತಾಂಶಗಳನ್ನು ಪೂರೈಸುವುದು ಸಾಧ್ಯವಾಗುತ್ತದೆ.

ಇದನೆಲ್ಲ ವಿಶ್ಲೇಷಿಸಲು ವಿಶೇಷವಾದ ಕಂಪ್ಯೂಟರ್‌ನ ಅವಶ್ಯಕತೆ ಇರುತ್ತದೆ. ಅಂದರೆ ಇಂತಹ ಮಾಹಿತಿಯನ್ನೆಲ್ಲ ತ್ವರಿತ ರೀತಿಯಲ್ಲಿ ವಿಶ್ಲೇಷಿಸಲು ಹೆಚ್ಚು ಮೆಮೊರಿಯುಳ್ಳ ಸಿಸ್ಟಮ್‌ಗಳು ಅನಿವಾರ್ಯ. ಇದಕ್ಕೆಂದೇ ಗೂಗಲ್‌ನಿಂದ 'ಅರ್ಥ್ ಎಂಜಿನ್' ಮತ್ತು ಅಮೆಜಾನ್ ಏಡಬ್ಲ್ಯೂಎಸ್(AWS)ನ 'ಅರ್ಥ್' ಎಂಬ ವಿಶೇಷ ವ್ಯವಸ್ಥೆ ರೂಪಿಸಿದ್ದಾರೆ. ಇದನ್ನು ಬಳಸಿ ನಾನು ಗುಬ್ಬಿಯಲ್ಲಿ ಕುಳಿತುಕೊಂಡು ಭೂಮಿಯ ಯಾವುದೇ ಭಾಗದ ರಿಮೋಟ್ ಸೆನ್ಸಿಂಗ್ ಡೇಟಾ ಪಡೆದು ಈ ವ್ಯವಸ್ಥೆಯಲ್ಲಿ ಒದಗಿಸಿರುವ ವಿಶ್ಲೇಷಣೆಗೆ ಪೂರಕವಾದ ಮಾಡೆಲ್‌ಗಳನ್ನು ಬಳಸಿ ಫಲಿತಾಂಶವನ್ನು ಕ್ಷಣಾರ್ಧದಲ್ಲಿ ಪಡೆಯಬಹುದು. ಹಾಗೆಯೇ ಈ ಹಿಂದೆ ನಾಸಾ ಡೇಟಾ ಬಳಸಿ ನಮ್ಮ ದೇಶದ ಪ್ರಮುಖ ನಗರಗಳಲ್ಲಿ ಭೂ ಬಳಕೆ ಬದಲಾವಣೆಯನ್ನು ವಿಶ್ಲೇಷಿಸಲು ಸಾಧ್ಯವಾಗಿತ್ತು.

ಭಾರತದಲ್ಲಿ ಸ್ಪೇಸ್ ಪಾಲಿಸಿ

ಭಾರತದಲ್ಲಿ ರಿಮೋಟ್ ಸೆನ್ಸಿಂಗ್‌ಗೆ ಸುಮಾರು ನಾಲ್ಕು ದಶಕದ ಇತಿಹಾಸ ಇದೆ. ನಮ್ಮ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಅಂತರಿಕ್ಷದಲ್ಲಿ ಉಪಗ್ರಹವನ್ನು ಹಾರಿಸಲು ಬಳಸುವ ರಾಕೆಟ್‌ನಿಂದ ಹಿಡಿದು, ಅದರಲ್ಲಿನ ಪೇಲೋಡ್ ಆದ ಬೇರೆ ಬೇರೆ ಉಪಯೋಗಕ್ಕೆ ತಕ್ಕಂತೆ ಉಪಗ್ರಹಗಳನ್ನು ವಿನ್ಯಾಸಗೊಳಿಸಿ ಮತ್ತು ಅಭಿವೃದ್ಧಿಪಡಿಸುತ್ತಾ ಬಂದಿದ್ದಾರೆ. ಆದರೆ ಇದರ ಬಳಕೆಯನ್ನು ಹೆಚ್ಚಾಗಿ ಸರ್ಕಾರಿ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಇದ್ದು ಖಾಸಗಿ ವಲಯಗಳಲ್ಲಿ ಇಸ್ರೋ ಉಪಗ್ರಹಗಳಿಂದ ಪಡೆದ ಮಾಹಿತಿಯನ್ನು ಆಧರಿಸಿ ಇನ್ನು ಉಪಯುಕ್ತ ಅಪ್ಲಿಕೇಶನ್ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಪೂರಕವಾದ ನೀತಿ ಮತ್ತು ಮಾರ್ಗಸೂಚಿಗಳನ್ನು ಅನುಮೋದಿಸಬೇಕಿದೆ.

ವಿಪರ್ಯಾಸವೆಂದರೆ ಇಸ್ರೋ ಉಪಗ್ರಹಗಳಿಂದ ಸೆರೆ ಹಿಡಿದ ಮಾಹಿತಿ ಅಮೆರಿಕ ಮತ್ತು ಯುರೋಪಿಯನ್ ಯೂನಿಯನ್‌ನ ಉಪಗ್ರಹಗಳಿಂದ ಸೆರೆ ಹಿಡಿದ ಡೇಟಾಗೆ ತಾಂತ್ರಿಕವಾಗಿ ಸರಿಸಾಟಿಯಾಗಿದ್ದರೂ, ಇದರ ಲಭ್ಯತೆ ಅಷ್ಟು ಸುಲಭವಾಗಿಲ್ಲ. ಅಂದರೆ ಮೇಲೆ ತಿಳಿಸಿದಂತೆ ಯಾವುದೇ ಮುಕ್ತವಾದ ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಲಭ್ಯವಿಲ್ಲ. ನಮ್ಮ ದೇಶದ ಸ್ಪೇಸ್ ಪಾಲಿಸಿ ಪೂರಕವಾಗಿದ್ದರೆ ಶಕುಂತಲಾವನ್ನು ಅಂತರಿಕ್ಷದಲ್ಲಿ ಸೇರಿಸಲು ಅಮೆರಿಕದ ವಾಹಕದ ಬದಲು ಭಾರತದಲ್ಲಿಯೇ ವಿನ್ಯಾಸಗೊಂಡಿದ್ದ ವಾಹಕವಾಗಬಹುದಿತ್ತು. ಈ ನೀತಿಯನ್ನು ಸರಿಯಾಗಿ ರೂಪಿಸಿ ಅನುಮೋದಿಸಿದರೆ 'ಮೇಕ್ ಇನ್ ಇಂಡಿಯಾ'ಗೂ ಬೆಂಬಲವಾಗುತ್ತದೆ. ❖



ಕಣ್ಣಿಗೆ ಕರಿದೆಣ್ಣೆಯ ಔಷಧ!

ಬಳಸಿದ ಎಣ್ಣೆಯನ್ನು ಮತ್ತೆ ಮತ್ತೆ ಅಡುಗೆಗೆ ಬಳಸಿದರೆ ಆರೋಗ್ಯ ಕೆಡುವುದುಂಟು. ಆದರೆ ಈಗ ಅಂಥ ಎಣ್ಣೆಯಿಂದ ಔಷಧವೊಂದನ್ನು ತಯಾರಿಸಬಹುದು ಎನ್ನುತ್ತಿದ್ದಾರೆ ವಿಜ್ಞಾನಿಗಳು.

ಅಮೃತೇಶ್ವರಿ ಬಿ.

ರಾತ್ರಿಯಿಡೀ ಎದ್ದಿರಲು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಜಾಗರಣೆ ಇರುವ ತಂತ್ರವೊಂದು ನಿಮಗೆ ಗೊತ್ತೇ ಇದೆ. ಇದೀಗ ಕಣ್ಣಿಗೆ ಬಿಟ್ಟುಕೊಳ್ಳುವ ಔಷಧವನ್ನೂ ಎಣ್ಣೆಯಿಂದ ಪಡೆಯಬಹುದೆನ್ನುವ ಹೊಸ ಸುದ್ದಿ ಬಂದಿದೆ. ಅದೂ ಯಾವ ಎಣ್ಣೆ ಎಂದುಕೊಂಡಿರಿ?



ತಿಂಡಿಗಳನ್ನು ಕರಿದ ಎಣ್ಣೆ! ಕರಿದ, ಹಳೆಯ ಎಣ್ಣೆಯನ್ನು ಬಳಸಿಕೊಂಡು 'ನಟಾಮೈಸಿನ್' ಎನ್ನುವ ಔಷಧವನ್ನೂ ತಯಾರಿಸಬಹುದು ಎಂದು ಚೀನಾದ ವಿಜ್ಞಾನಿಗಳು ಇತ್ತೀಚೆಗೆ ವರದಿ ಮಾಡಿದ್ದಾರೆ.

ನಟಾಮೈಸಿನ್ ಎನ್ನುವುದು ಕಣ್ಣಿಗೆ ತಗುಲುವ ಶಿಲೀಂಧ್ರದ ಸೋಂಕಿಗೆ ಚಿಕಿತ್ಸೆಯಾಗಿ ಬಳಸುವ ಔಷಧ. ಕಣ್ಣಿಗೆ ಬಿಟ್ಟರೆ ಬೇರೆ ಯಾವ ಚಿಕಿತ್ಸೆಯಲ್ಲಿಯೂ ನಟಾಮೈಸಿನನ್ನು ಬಳಸಲಾಗದು. ಔಷಧವಾಗಲ್ಲದೆ ಇದನ್ನು ಆಹಾರಪದಾರ್ಥಗಳ ಸಂರಕ್ಷಣೆಯಲ್ಲಿಯೂ ಬಳಸುತ್ತಾರೆ. ಶಿಲೀಂಧ್ರಗಳು ಅಥವಾ ಬೂಸು ಜೀವಿಗಳಿಗೆ ಇದು ರಾಮಬಾಣ. ನಟಾಮೈಸಿನನ್ನು ಮೊದಲಿಗೆ 1955ರಲ್ಲಿ ಪತ್ತೆ ಮಾಡಲಾಯಿತು. ಸಾಮಾನ್ಯವಾಗಿ ಇದನ್ನು 'ಸ್ಟ್ರೆಪ್ಟೋಮೈಸಿಸ್ ನಟಾಲೆನ್ಸಿಸ್' ಎನ್ನುವ ವಿಶಿಷ್ಟ ಬ್ಯಾಕ್ಟೀರಿಯಾವನ್ನು ಕೃಷಿ ಮಾಡಿ ಸೃಷ್ಟಿಸುತ್ತಾರೆ. ಈ ಬ್ಯಾಕ್ಟೀರಿಯಾವನ್ನು ಕೃಷಿ ಮಾಡುವುದಕ್ಕೆ ಬೇಕಾದ ಪೋಷಕಾಂಶಗಳಿಗೆ ಗ್ಲುಕೋಸ್ ಮೊದಲಾದ ಸಾವಯವ ಪದಾರ್ಥಗಳನ್ನು ಉಪಯೋಗಿಸಬೇಕು.

ಅಂತಹ ಪದಾರ್ಥಗಳಿಗೆ ಪರ್ಯಾಯವಾಗಿ ಕರಿದ ಎಣ್ಣೆಯನ್ನು ಉಪಯೋಗಿಸಿದರೆ ಹೇಗೆ ಎನ್ನುವುದು ಚೀನಾದ ಹುನಾನ್ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿ ಮಿಂಗ್ಯಿ ಯೂ ಮತ್ತು ತಂಡದವರ ಯೋಚನೆ.

ಕರಿದ ಎಣ್ಣೆಯನ್ನು ಬಳಸುವುದರಿಂದ ಹಲವು ಲಾಭಗಳಿವೆ. ಮೊದಲನೆಯದಾಗಿ ಸ್ಟ್ರೆಪ್ಟೊಮೈಸೀಸ್ ಬ್ಯಾಕ್ಟೀರಿಯಾ ನಟಾಮೈಸಿನನ್ನು ತಯಾರಿಸಲು ಕೊಬ್ಬಿನಾಮ್ಲಗಳನ್ನು ಬಳಸುತ್ತದೆ. ಈ ಆಮ್ಲಗಳ ಅಣುಗಳು ದೊಡ್ಡದಾಗಿದ್ದಷ್ಟೂ ನಟಾಮೈಸಿನ್ನಿನ ಪ್ರಮಾಣ ಹೆಚ್ಚು. ಆದರೆ ಸಾಮಾನ್ಯವಾಗಿ ಬ್ಯಾಕ್ಟೀರಿಯಾ ಕೃಷಿಯಲ್ಲಿ ಬಳಸುವ ಗ್ಲುಕೋಸ್ ಹಾಗೂ ಅಸೆಟಿಕ್ ಆಮ್ಲಗಳು ಪುಟ್ಟ ಅಣುಗಳಾದ್ದರಿಂದ ಇವುಗಳಿಂದ ಉದ್ದ ಅಣುವನ್ನು ತಯಾರಿಸುವುದಕ್ಕೆ ಬಹಳಷ್ಟು ಶಕ್ತಿ ವ್ಯಯವಾಗಿಬಿಡುತ್ತದೆ. ಹೀಗಾಗಿ ತಯಾರಾಗುವ ನಟಾಮೈಸಿನ್ನಿನ ಪ್ರಮಾಣ ಕಡಿಮೆ ಹಾಗೂ ನಿಧಾನ. ಅದಕ್ಕೆ ಬದಲಾಗಿ ಈಗಾಗಲೇ ದೊಡ್ಡ ಕೊಬ್ಬಿನಾಮ್ಲಗಳ ಅಣುಗಳಿರುವ ಅಡುಗೆ ಎಣ್ಣೆಯನ್ನೇ ಬಳಸಬಹುದಲ್ಲ? ಅದಕ್ಕಿಂತಲೂ ಮುಖ್ಯವಾಗಿ ಬೇಡ ಎಂದು ಬಿಸಾಡುವ ಕರಿದ ಎಣ್ಣೆಯನ್ನು ಉಪಯೋಗಿಸಬಹುದಲ್ಲ? ಏಕೆಂದರೆ ಕರಿದಾಗ ಎಣ್ಣೆಯಲ್ಲಿನ ಕೊಬ್ಬಿನ ಆಮ್ಲಗಳಲ್ಲಿ ಆಗುವ ಬದಲಾವಣೆಗಳು ಇದಕ್ಕೆ ತಕ್ಕುದಾದವು.

ಅತಿ ಬಿಸಿಯಾದಾಗ ಎಣ್ಣೆಯಲ್ಲಿರುವ ಆಮ್ಲಗಳು ಗಾಳಿಯಲ್ಲಿರುವ ಆಕ್ಸಿಜನ್‌ನ ಜೊತೆಗೂಡುತ್ತವೆ. ಸ್ಯಾಚುರೇಟೆಡ್ ಆಮ್ಲಗಳಾಗುತ್ತವೆ. ಇವು ಆರೋಗ್ಯಕ್ಕೆ ಹಾನಿಕರವೆನ್ನಿಸುವ ಕೊಬ್ಬಿನ ಅಂಶಗಳು. ಮಿಂಗ್ಯಿ ಯೂ ಮತ್ತು ಸಂಗಡಿಗರು ಈ ಉಪ ಉತ್ಪನ್ನವನ್ನೇ ವಿಜ್ಞಾನಿಗಳು ನಟಾಮೈಸಿನ್ ಉತ್ಪಾದನೆಗೆ ಬಳಸಿಕೊಂಡಿದ್ದಾರೆ. ಸ್ಯಾಚುರೇಟೆಡ್ ಕೊಬ್ಬಿನಾಮ್ಲಗಳು ಸಾಮಾನ್ಯವಾಗಿ ಉತ್ತಮ ಪ್ರಮಾಣದ ನಟಾಮೈಸಿನ್ ಉತ್ಪಾದನೆ ಮಾಡುತ್ತದೆ. ಅದಕ್ಕಾಗಿ ಇವರು ಕರಿದ ಎಣ್ಣೆಯಲ್ಲಿರುವ ಅನ್ ಸ್ಯಾಚುರೇಟೆಡ್ ಕೊಬ್ಬಿನಾಮ್ಲಗಳನ್ನು ಹೈಡ್ರೋಜಿನೇಷನ್ ಕ್ರಿಯೆಯ ಮೂಲಕ ಪರಿವರ್ತಿಸಿದ್ದಾರೆ. ಹೀಗೆ ಪಡೆದ ಪ್ರತಿ 40g/L ಎಣ್ಣೆಯಿಂದ 2.1g/L ನಟಾಮೈಸಿನನ್ನು ಉತ್ಪಾದಿಸಿದ್ದಾರೆ. ಈ ಆಹಾರವನ್ನು ಬಳಸಿ ಮಾಡಿದ ಕೃಷಿಯಿಂದ ಉತ್ತಮ ಪ್ರಮಾಣದಲ್ಲಿ ನಟಾಮೈಸಿನ್ ದೊರಕಿದೆಯಷ್ಟೆ ಅಲ್ಲ ಕಡಿಮೆ ಸಮಯದಲ್ಲಿಯೇ ಇದು ದೊರೆತಿದೆ. ಪ್ರಯೋಗಾಲಯದಲ್ಲಿ ಮಾತ್ರವಲ್ಲ, ವಾಣಿಜ್ಯಕವಾಗಿಯೂ ತಯಾರಿಸಬಹುದಾದಷ್ಟು ದೊಡ್ಡ ಪ್ರಮಾಣದಲ್ಲಿ ಬ್ಯಾಕ್ಟೀರಿಯಾ ಕೃಷಿ ಮಾಡಿ ನಟಾಮೈಸಿನನ್ನು ಮಿಂಗ್ಯಿ ಯೂ ತಯಾರಿಸಿದ್ದಾರೆ.



ಹೀಗೆ, ಬಳಸಿದ ಎಣ್ಣೆಯನ್ನು ಮತ್ತೆ ಮತ್ತೆ ಅಡುಗೆಗೆ ಬಳಸಿಕೊಂಡು ಆರೋಗ್ಯ ಕೆಡಿಸಿಕೊಳ್ಳುವುದಕ್ಕಿಂತ ಉಪಯುಕ್ತವೆನಿಸುವ ಔಷಧವೊಂದನ್ನು ತಯಾರಿಸಬಹುದು ಎಂಬ ಇವರ ಉದ್ದೇಶ ಒಳ್ಳೆಯದೇ. ಏಕೆಂದರೆ ಕರಿದ ಎಣ್ಣೆ ಅನಾರೋಗ್ಯಕರ ಪದಾರ್ಥವಾದ್ದರಿಂದ ಇದನ್ನು ಅಡುಗೆಯಲ್ಲಿ ಮರು ಬಳಸಬಾರದೆಂದು ನಿರ್ಬಂಧವಿದ್ದರೂ ಬಹುಪಾಲು ಬೀದಿ ಬದಿಯ ವ್ಯಾಪಾರಿಗಳು ಕರಿದ ಎಣ್ಣೆಯನ್ನೇ ಉಪಯೋಗಿಸುವುದುಂಟು. ಇಂತಹ ಕಸದಿಂದ ನಟಾಮೈಸಿನ್ನಿನಂತಹ ರಸ ತೆಗೆಯುವುದು ಎಷ್ಟು ಚೆನ್ನ ಅಲ್ಲವೇ?

ಈ ಸಂಶೋಧನೆಯ ವಿವರಗಳು 'ಪ್ರೋಸೆಸ್ ಬಯೋಕೆಮಿಸ್ಟ್ರಿ'ಯ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟವಾಗಿದೆ. ❖

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ: ಮತ್ತೊಬ್ಬ ಆರ್‌ಪಿಐ ಬಂಧನ

ದಾಳಿಗೆ ಹೆದರಿ ₹ 1.50 ಕೋಟಿ ತಂದುಕೊಟ್ಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಡಿ ಬಂಧಿತರಾಗಿರುವ ಪೊಲೀಸ್ ನೇಮಕಾತಿ ವಿಭಾಗದ ನೌಕರ ಶ್ರೀಧರ್ ಅವರ ಮನೆ ಮೇಲೆ ಮಂಗಳವಾರವೂ ಸಿಐಡಿ ಅಧಿಕಾರಿಗಳು ದಾಳಿ ಮಾಡಿದ್ದು, ₹ 1.50 ಕೋಟಿ ನಗದು ಜಪ್ತಿ ಮಾಡಿದ್ದಾರೆ.

ನ್ಯಾಯಾಲಯದ ವಾರಂಟ್ ಪಡೆದಿದ್ದ ತನಿಖಾಧಿಕಾರಿ ಬಿ.ಕೆ. ಶೇಖರ್ ನೇತೃತ್ವದ ತಂಡ, ಆರೋಪಿ ಶ್ರೀಧರ್ ಅವರ ಬಸವೇಶ್ವರನಗರದ ಶಾರದಾ ಕಾಲೊನಿಯಲ್ಲಿರುವ ಮನೆ ಮೇಲೆ ಶನಿವಾರವಷ್ಟೇ (ಮೇ 14) ದಾಳಿ ಮಾಡಿತ್ತು, ₹ 16 ಲಕ್ಷ ಜಪ್ತಿ ಮಾಡಿತ್ತು. ಇದರ ಬೆನ್ನಲ್ಲೇ ಮಂಗಳವಾರ ಎರಡನೇ ಬಾರಿ ಪುನಃ ದಾಳಿ ಮಾಡಿತು.

'ಪೊಲೀಸ್ ನೇಮಕಾತಿ ವಿಭಾಗವೇ ಅಕ್ರಮದ ಕೇಂದ್ರ' ಎಂಬುದು ತನಿಖೆಯಿಂದ ಗೊತ್ತಾಗಿದೆ. ವಿಭಾಗದ ಡಿವೈಎಸ್ಪಿ ಶಾಂತಕುಮಾರ್, ಶ್ರೀಧರ್, ಹರ್ಷ ಸೇರಿದಂತೆ ಐವರು ನೌಕರರನ್ನು ಈಗಾಗಲೇ ಬಂಧಿಸಲಾಗಿದೆ. ಇವರೆಲ್ಲರನ್ನೂ ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ದಾಳಿಗೆ ಹೆದರಿದ ಸ್ನೇಹಿತ: 'ಪಿಎಸ್‌ಐ ಅಕ್ರಮ ಎಸಗಲು ಮಧ್ಯವರ್ತಿಗಳಿಂದ ಹಣ ಪಡೆದಿದ್ದ ಶ್ರೀಧರ್, ₹16 ಲಕ್ಷವನ್ನು ಮಾತ್ರ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದ. ಉಳಿದ ₹ 1.50 ಕೋಟಿಯನ್ನು ಸ್ನೇಹಿತರೊಬ್ಬರಿಗೆ ಕೊಟ್ಟಿದ್ದ. ಯಾರಿಗೂ ತಿಳಿಸದಂತೆ ಹೇಳಿದ್ದ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಆರೋಪಿಗಳ ಮನೆ ಮೇಲೆ ಕೆಲ ದಿನಗಳಿಂದ ದಾಳಿ ಮಾಡಲಾಗುತ್ತಿದೆ. ಇದರಿಂದ ಶ್ರೀಧರ್ ಸ್ನೇಹಿತನಿಗೆ ಭಯ ಶುರುವಾಗಿತ್ತು. ತಮ್ಮ ಮನೆ ಮೇಲೂ ಅಧಿಕಾರಿಗಳು ದಾಳಿ ಮಾಡಬಹುದೆಂದು ಹೆದರಿದ್ದರು. ಹೀಗಾಗಿ, ತಾವು ಬಚ್ಚಿಟ್ಟಿದ್ದ ₹ 1.50 ಕೋಟಿಯನ್ನು ಶ್ರೀಧರ್ ಮನೆಗೆ ಕೊಟ್ಟು ಹೋಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಹಣವನ್ನು ಜಪ್ತಿ ಮಾಡಲಾಗಿದೆ. ಸ್ನೇಹಿತನನ್ನು ಸಾಕ್ಷಿಯನ್ನಾಗಿ ಪರಿಗಣಿಸಲಾಗುವುದು' ಎಂದೂ ಮೂಲಗಳು ಹೇಳಿವೆ.

ಮತ್ತೊಬ್ಬ ಆರ್‌ಪಿಐ ಬಂಧನ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದ ಆರೋಪದಡಿ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಇನ್‌ಸ್ಪೆಕ್ಟರ್ ಮಧು ಅವರನ್ನು ಸಿಐಡಿ ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

'ಮೈಸೂರಿನ ಕೆಎಸ್‌ಆರ್‌ಪಿ ಬೆಟಾಲಿಯನ್‌ನಲ್ಲಿ ಕೆಲಸ ಮಾಡುತ್ತಿದ್ದ ಮಧು, ಕೆಲ ಅಭ್ಯರ್ಥಿಗಳನ್ನು ನೇಮಕಾತಿ ವಿಭಾಗದ ಸಿಬ್ಬಂದಿಗೆ ಪರಿಚಯ ಮಾಡಿಕೊಟ್ಟಿದ್ದ. ಈ ಅಭ್ಯರ್ಥಿಗಳ ಒಎಂಆರ್ ತಿದ್ದಿ, ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಲು ಸಿಬ್ಬಂದಿ ಸಹಕರಿಸಿದ್ದರು. ಇದಕ್ಕಾಗಿ ಅಭ್ಯರ್ಥಿಗಳು, ಲಕ್ಷಾಂತರ ರೂಪಾಯಿ ನೀಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.'ಬಂಧಿತ ಆರ್‌ಪಿಐ ಮಧುನನ್ನು ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಐವರ ಜಾಮೀನು ಅರ್ಜಿ ತಿರಸ್ಕೃತ

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಆರೋಪಿ ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಸೇರಿದಂತೆ ಐವರ ಜಾಮೀನು ಅರ್ಜಿಗಳನ್ನು ಇಲ್ಲಿನ 3ನೇ ಜೆಎಂಎಫ್‌ಸಿ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿದೆ.

ಆರೋಪಿಗಳಾದ ಜ್ಯೋತಿ ಪಾಟೀಲ, ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿಯರಾದ ಅರ್ಚನಾ ಶಿವಕುಮಾರ್, ಸುನಂದಾ ಹಾಗೂ ಅಭ್ಯರ್ಥಿ ಶ್ರೀಧರ ಪವಾರ ಎಂಬುವವರ ಜಾಮೀನು ಅರ್ಜಿಗಳನ್ನು ನ್ಯಾಯಾಧೀಶ ಬಸವರಾಜ ನೇಸರಗಿ ಅವರು ತಿರಸ್ಕರಿಸಿದರು.

ಸಿಐಡಿ ಪರ ಹಾಜರಾದ ಸಹಾಯಕ ಸರ್ಕಾರಿ ಅಭಿಯೋಜಕ ಶಿವಶರಣಪ್ಪ ಹೊಸಮನಿ, 'ಆರೋಪಿಗಳಿಗೆ ಜಾಮೀನು ನೀಡಿದರೆ ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಜಾಮೀನು ಅರ್ಜಿಯನ್ನು ಮಾನ್ಯ ಮಾಡಬಾರದು' ಎಂದು ವಾದ ಮಂಡಿಸಿದರು.

'ಅಕ್ರಮದಲ್ಲಿ ಭಾಗವಹಿಸಿದ್ದ ಆರೋಪಿಗಳಿಗೆ ಕರೆ ಮಾಡಿ 'ಪಿಎಸ್‌ಐ ನೇಮಕ ಅಕ್ರಮ ಬಹಿರಂಗಪಡಿಸಬಾರದು ಎಂದರೆ ನನಗೆ ₹ 10 ಲಕ್ಷ ನೀಡಬೇಕು' ಎಂದು ಬೆದರಿಕೆ ಹಾಕಿ ಹಣ ಪಡೆದಿರುವ ಆರೋಪ ಸಾಲಿ ಅವರ ಮೇಲಿದೆ.

ಸಿಐಡಿ ಕಚೇರಿ ಎದುರು ಪ್ರತಿಭಟನೆ

'ಅಕ್ರಮದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಯುತ್ತಿಲ್ಲ' ಎಂದು ಆರೋಪಿಸಿ ಕೆಲ ವಕೀಲರು ಹಾಗೂ ಸಂಘಟನೆ ಪದಾಧಿಕಾರಿಗಳು ಸಿಐಡಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು. ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದ ಪ್ರತಿಭಟನಾಕಾರರು, ರಸ್ತೆಯಲ್ಲಿ ಕುಳಿತು ಘೋಷಣೆ ಕೂಗಿದರು.

ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್, 'ಡಿವೈಎಸ್ಪಿ ಶಾಂತಕುಮಾರ್ ಬಂಧಿಸಿದಂತೆ ಕೆಲವರು ಸಿಐಡಿ ಮೇಲೆ ಒತ್ತಡ ಹೇರಿದ್ದಾರೆ. ಪ್ರಭಾವಿಗಳು ಭಾಗಿಯಾಗಿದ್ದು, ಎಲ್ಲರನ್ನೂ ವಿಚಾರಣೆ ನಡೆಸಬೇಕು' ಎಂದು ಆಗ್ರಹಿಸಿದರು.

ಕಿರುತೆರೆ ನಟಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ



ಚೇತನಾ ರಾಜ್

ಬೆಂಗಳೂರು: ದೇಹದಲ್ಲಿದ್ದ ಕೊಬ್ಬಿನ ಅಂಶ (ಫ್ಯಾಟ್) ಕರಗಿಸಲು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಕಿರುತೆರೆ ನಟಿ ಚೇತನಾ ರಾಜ್ (22) ಅನುಮಾನಾಸ್ಪದ ರೀತಿಯಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ. ವೈದ್ಯರ ನಿರ್ಲಕ್ಷ್ಯದಿಂದ ಸಾವು ಸಂಭವಿಸಿರುವುದಾಗಿ ಪೋಷಕರು ಆರೋಪಿಸಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಅಬ್ಬಿಗೆರೆ ನಿವಾಸಿಯಾಗಿದ್ದ ಚೇತನಾ, ಕಲರ್ಸ್ ಕನ್ನಡ ವಾಹಿನಿಯ 'ಗೀತಾ', 'ದೊರೆಸಾನಿ', 'ಒಲವಿನ ನಿಲ್ದಾಣ' ಧಾರಾವಾಹಿ ಹಾಗೂ ಕೆಲ ಸಿನಿಮಾಗಳಲ್ಲಿ ಸಹ ನಟಿಯಾಗಿ ಅಭಿನಯಿಸುತ್ತಿದ್ದರು. ದೊಡ್ಡಬಳ್ಳಾಪುರದ ಬೀರಯ್ಯನಪಾಳ್ಯದಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು.

'ದೇಹದಲ್ಲಿ ಕೊಬ್ಬಿನ ಅಂಶ ಹೆಚ್ಚುತ್ತಿರುವ ಬಗ್ಗೆ ಸ್ನೇಹಿತರ ಜೊತೆ ಅಭಿಪ್ರಾಯ ಹಂಚಿಕೊಂಡಿದ್ದ ಚೇತನಾ, ಅವರ ಸಲಹೆಯಂತೆ ಶಸ್ತ್ರಚಿಕಿತ್ಸೆಗೆ ಒಳಗಾಗಲು ಮುಂದಾಗಿದ್ದರು. ನವರಂಗ್ ವೃತ್ತ ಬಳಿ ಇರುವ ಡಾ. ಶೆಟ್ಟೀಸ್ ಕಾಸ್ಮೆಟಿಕ್ ಆಸ್ಪತ್ರೆಗೆ ಸೋಮವಾರ ದಾಖಲಾಗಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಶ್ವಾಸಕೋಶಗಳಲ್ಲಿ ನೀರು ತುಂಬಿ ಸಾವು: ಚೇತನಾ ಸಾವಿನ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ತಂದೆ ವರದರಾಜು, 'ಕೊಬ್ಬಿನ ಅಂಶ ಹೆಚ್ಚಿರುವ ಕಾರಣಕ್ಕೆ ಮಗಳು ಸೋಮವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಾಗಿದ್ದಳು. ಈ ಬಗ್ಗೆ ನಮಗೂ ಮಾಹಿತಿ ಇರಲಿಲ್ಲ. ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿದ್ದರಿಂದ ಮಗಳು ಮೃತಪಟ್ಟಿದ್ದಾಳೆ' ಎಂದು ಆರೋಪಿಸಿದರು.

'ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದಂತೆ ನಮ್ಮಿಂದ ಯಾವುದೇ ಸಹಿ ಪಡೆದಿಲ್ಲ. ಸ್ನೇಹಿತನ ಜೊತೆಗೆ ಆಸ್ಪತ್ರೆಗೆ ಚೇತನಾ ಹೋಗಿದ್ದರು. ರಾತ್ರಿ 9 ಗಂಟೆಗೆ ನಮಗೆ ಮಾಹಿತಿ ಸಿಕ್ಕಿತು. ಮಗಳಿಗೆ ಉಸಿರಾಟದ ಸಮಸ್ಯೆ ಹೆಚ್ಚಾಗಿತ್ತು. ಶಸ್ತ್ರಚಿಕಿತ್ಸೆ ವೇಳೆ ಕೊಬ್ಬಿನ ಅಂಶ ರಕ್ತನಾಳಗಳಲ್ಲಿ ಸೇರಿ, ಶ್ವಾಸಕೋಶದಲ್ಲಿ ನೀರು ತುಂಬಿಕೊಂಡಿದ್ದರಿಂದ ಹೃದಯಾಘಾತವಾಗಿ ಚೇತನಾ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಆದರೆ, ಮಗಳ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ. ಈ ಬಗ್ಗೆ ಸುಬ್ರಹ್ಮಣ್ಯನಗರ ಠಾಣೆಗೆ ದೂರು ನೀಡಲಾಗಿದೆ' ಎಂದೂ ಹೇಳಿದರು.

ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, 'ಚೇತನಾ ಮೃತದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸಾಗಿಸಿ, ಮರಣೋತ್ತರ ಪರೀಕ್ಷೆ ಮಾಡಿಸಲಾಗಿದೆ. ಸಾವಿನಲ್ಲಿ ಅನುಮಾನ ಇರುವುದರಿಂದ, ಸದ್ಯಕ್ಕೆ ಯುಡಿಆರ್ ಮಾತ್ರ ದಾಖಲಿಸಿಕೊಳ್ಳಲಾಗಿದೆ' ಎಂದರು.

'ಪ್ರಕರಣ ಸಂಬಂಧ ವೈದ್ಯರ ಹೇಳಿಕೆ ಪಡೆಯಲಾಗುವುದು. ಭಾರತೀಯ ವೈದ್ಯಕೀಯ ಮಂಡಳಿಗೂ ಪತ್ರ ಬರೆಯಲಾಗುವುದು. ಮಂಡಳಿಯ ತಜ್ಞರೇ ವರದಿ ಸಿದ್ಧಪಡಿಸಿ ನಮಗೆ ನೀಡಲಿದ್ದಾರೆ. ಅದರ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಪೊಲೀಸರು ಹೇಳಿದರು.

ಆರೋಪದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಆಸ್ಪತ್ರೆ ಪ್ರತಿನಿಧಿಗಳು ಸಂಪರ್ಕಕ್ಕೆ ಸಿಗಲಿಲ್ಲ.

ಇಂಡಿಗೊ ಸಂಸ್ಥೆಗೆ ಶೋಕಾಸ್ ನೋಟಿಸ್

ನವದೆಹಲಿ (ಪಿಟಿಐ): ರಾಂಚಿ ವಿಮಾನ ನಿಲ್ದಾಣದಲ್ಲಿ ಮಾನಸಿಕ ಅಸ್ವಸ್ಥ ಮಗುವಿಗೆ ವಿಮಾನ ಪ್ರಯಾಣಕ್ಕೆ ಅವಕಾಶ ನಿರಾಕರಿಸಿದ್ದ ಪ್ರಕರಣದಲ್ಲಿ ಇಂಡಿಗೊ ಸಂಸ್ಥೆಯ ಸಿಬ್ಬಂದಿ ಸಮರ್ಪಕವಾಗಿ ವರ್ತಿಸಿಲ್ಲ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತನ್ನ ತನಿಖಾ ವರದಿಯಲ್ಲಿ ಉಲ್ಲೇಖಿಸಿದೆ.

ನಿಯಮಗಳನ್ನು ಪಾಲಿಸಲಾಗಿಲ್ಲ ಎಂದು ವಿಮಾನ ಸಂಸ್ಥೆಗೆ ಶೋಕಾಸ್ ನೋಟಿಸ್ ಅನ್ನೂ ಜಾರಿ ಮಾಡಿದ್ದು, ಮೇ 26ರ ಒಳಗೆ ಪ್ರತಿಕ್ರಿಯಿಸಬೇಕು ಎಂದು ಸೂಚಿಸಲಾಗಿದೆ ಎಂದು ಡಿಜಿಸಿಎ ತಿಳಿಸಿದೆ.

ಪ್ರತಿಕ್ರಿಯೆಯನ್ನು ಆಧರಿಸಿ ವಿಮಾನಯಾನ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ. ಮೇ 9ರಂದು ಘಟನೆ ನಡೆದಿದ್ದು, ಮಾನಸಿಕ ಅಸ್ವಸ್ಥ ಮಗುವಿಗೆ ಪ್ರಯಾಣಕ್ಕೆ ಅವಕಾಶ ನಿರಾಕರಿಸಲಾಗಿತ್ತು. ಇದರ ಪರಿಣಾಮ ಮಗುವಿನ ಪೋಷಕರು ಕೂಡಾ ವಿಮಾನ ಪ್ರಯಾಣದಿಂದ ಹಿಂದೆ ಸರಿದಿದ್ದರು. ಘಟನೆ ಕುರಿತು ತನಿಖೆಗೆ ಡಿಜಿಸಿಎ ತ್ರಿಸದಸ್ಯರ ಸಮಿತಿಯನ್ನು ರಚಿಸಿತ್ತು.

ರೈತರಿಂದ ಪ್ರತಿಭಟನೆಗೆ ಸಜ್ಜು

ಚಂಡಿಗಡ (ಪಿಟಿಐ): ಗೋಧಿ ಬೆಳೆಗೆ ಬೋನಸ್ ಮತ್ತು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಚಂಡಿಗಡದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವುದಾಗಿ ಹಲವಾರು ರೈತ ಸಂಘಟನೆಗಳು ಘೋಷಿಸಿದ್ದರಿಂದ ರೈತರನ್ನು ತಡೆಯಲು ಚಂಡೀಗಡ-ಮೊಹಾಲಿ ಗಡಿಯಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಇಳುವರಿ ಕುಸಿದಿರುವುದರಿಂದ ಗೋಧಿ ಬೆಳೆಗೆ ಬೋನಸ್ ನೀಡಬೇಕು. ಮೆಕ್ಕೆಜೋಳ ಹಾಗೂ ಹೆಸರು ಬೆಳೆಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಭತ್ತ ಬಿತ್ತನೆಗೆ ಜೂನ್ 10 ರಿಂದಲೇ ಅವಕಾಶ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ವಿದ್ಯುತ್ ಹೊರೆ ಕಡಿಮೆ ಮಾಡಲು ಹಾಗೂ ಅಂತರ್ಜಲ ಸಂರಕ್ಷಿಸುವ ಉದ್ದೇಶದಿಂದ ಜೂನ್ 18 ರಿಂದ ಭತ್ತ ಬಿತ್ತನೆಗೆ ಅವಕಾಶ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ನಡೆಸಿದ ಪ್ರತಿಭಟನೆ ರೀತಿಯಲ್ಲಿಯೇ ಚಂಡಿಗಡದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ಹಲವಾರು ರೈತ ಸಂಘಗಳು ಕರೆ ನೀಡಿವೆ. ರೈತರು ಚಂಡಿಗಡ ಪ್ರವೇಶಿಸದಂತೆ ತಡೆಯಲು ಗಡಿಯಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದು, ಟಿಪ್ಪರ್‌ಗಳನ್ನು ಇರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮುಂಬೈ ಸರಣಿ ಸ್ಫೋಟ ಪ್ರಕರಣ: ನಾಲ್ವರ ಬಂಧನ

ಮುಂಬೈ (ಪಿಟಿಐ): 1993ರ ಮುಂಬೈ ಸರಣಿ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ಮಂಗಳವಾರ ಬಂಧಿಸಿದೆ.

'ನಕಲಿ ಪಾಸ್‌ಪೋರ್ಟ್ ಹೊಂದಿರುವ ಶಂಕೆಯ ಮೇರೆಗೆ 4 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಅವರು 1993ರ ಸರಣಿ ಸ್ಫೋಟದ ಆರೋಪಿಗಳು ಎಂಬುದು ತನಿಖೆ ವೇಳೆ ಖಚಿತವಾಗಿದೆ. ಬಂಧಿತರನ್ನು ಅಬೂಬಕರ್, ಸಯ್ಯದ್ ಖುರೇಷಿ, ಮಹಮ್ಮದ್ ಶೋಯಬ್ ಖುರೇಷಿ ಮತ್ತು ಮೊಹಮ್ಮದ್ ಯೂಸುಫ್ ಇಸ್ಮಾಯಿಲ್ ಎಂದು ಗುರುತಿಸಲಾಗಿದೆ ಎಂದು ಎಡಿಜಿಪಿ ಅಮಿತ್ ವಿಶ್ವಕರ್ಮ ತಿಳಿಸಿದ್ದಾರೆ.

1993ರ ಮಾರ್ಚ್ 12ರಂದು ಮುಂಬೈ ನಗರದ 12 ಕಡೆಗಳಲ್ಲಿ ಸಂಭವಿಸಿದ ಸರಣಿ ಸ್ಫೋಟಗಳಲ್ಲಿ ಕನಿಷ್ಠ 257 ಮಂದಿ ಮೃತಪಟ್ಟಿದ್ದರು.

ಎಲ್‌ಇಟಿಯ ಇಬ್ಬರು ಸಹಚರರ ಬಂಧನ

ಶ್ರೀನಗರ: ಜಮ್ಮು–ಕಾಶ್ಮೀರದ ಬುಡ್ಗಾಂ ಜಿಲ್ಲೆಯ ಚಾಂದ್‌ಪೋರಾ ಎಂಬಲ್ಲಿ ಮಂಗಳವಾರ ಲಷ್ಕರ್–ಎ–ತೈಯಬ (ಎಲ್‌ಇಟಿ) ಸಂಘಟನೆಯ ಇಬ್ಬರು ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ.

ಜಹೀದ್ ಅಹ್ಮದ್ ಶೇಖ್ ಹಾಗೂ ಸಹಿಲ್ ಬಶೀರ್ ದಾರ್ ಬಂಧಿತ ಸಹಚರರು.

'2030ರ ಒಳಗಾಗಿ 6ಜಿ ಸೇವೆ ಆರಂಭ'

ನವದೆಹಲಿ: ಈ ದಶಕದ ಅಂತ್ಯದ ಒಳಗಾಗಿ ದೇಶದಲ್ಲಿ 6ಜಿ ಸೇವೆ ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟಿಆರ್‌ಎಐ) ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, '6ಜಿ ಸೇವೆ ಆರಂಭಿಸುವುದಕ್ಕೆ ಸಂಬಂಧಿಸಿದ ಕಾರ್ಯಪಡೆ ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯ ಆರಂಭಿಸಿದೆ' ಎಂದರು.

'ಟೆಲಿಕಾಂ ಕಂಪನಿಗಳು 5ಜಿ ಸೇವೆ ಆರಂಭಿಸಲು ಸಜ್ಜಾಗುತ್ತಿವೆ. ಮುಂದಿನ ದಿನಗಳಲ್ಲಿ 6ಜಿ ಸೇವೆ ಲಭ್ಯವಾದಾಗ ಇಂಟರ್‌ನೆಟ್ ಸಂಪರ್ಕಕ್ಕೆ ಮತ್ತಷ್ಟು ವೇಗ ಸಿಗಲಿದೆ' ಎಂದು ಹೇಳಿದರು.

ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, 'ದೂರಸಂಪರ್ಕ ಇಲಾಖೆಯ ತರಂಗಾಂತರ ನಿರ್ವಹಣೆ ವಿಭಾಗದ ಸುಧಾರಣೆ ಪ್ರಕ್ರಿಯೆಯನ್ನು ತಿಂಗಳಾಂತ್ಯಕ್ಕೆ ಪೂರ್ಣಗೊಳಿಸಲಾಗುವುದು' ಎಂದರು.



ಸುಭಾಷಿತ

ನಮ್ಮ ಮಹಾನ್ ಶಕ್ತಿಯು ನಮ್ಮ ಹೃದಯ ಎಷ್ಟು ಮೃದುವಾಗಿದೆ ಮತ್ತು ಸೌಜನ್ಯಪೂರ್ಣವಾಗಿದೆ ಎಂಬುದನ್ನು ಅವಲಂಬಿಸಿರುತ್ತದೆ. -ರೂಮಿ

ಸಂಕಲ್ಪವು ಹೇಳಿಕೆಗೆ ಸೀಮಿತಗೊಳ್ಳದಿರಲಿ ಪುನಶ್ಚೇತನಕ್ಕೆ ಬೇಕು ದೃಢ ಹೆಜ್ಜೆ

ಚುನಾವಣೆಯಲ್ಲಿನ ಗೆಲುವು ಮಾತ್ರವೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷವನ್ನು ಪ್ರಸ್ತುತವಾಗಿ ಇರಿಸುತ್ತದೆ. 137 ವರ್ಷಗಳ ಸಮೃದ್ಧ ಇತಿಹಾಸವಿರುವ ಕಾಂಗ್ರೆಸ್ ಪಕ್ಷಕ್ಕೆ ಇದು ತಿಳಿಯದ ವಿಚಾರವೇನೂ ಅಲ್ಲ. ವಿವಿಧ ವಿಚಾರಗಳಲ್ಲಿ ಪಾಂಡಿತ್ಯವಿರುವ ಮತ್ತು ಜನರ ನಾಡಿಮಿಡಿತ ಬಲ್ಲ ನಾಯಕರ ಕೊರತೆ ಕಾಂಗ್ರೆಸ್‌ಗೆ ಇಲ್ಲ. ಆದರೆ, 2014ರಿಂದ ಕಾಂಗ್ರೆಸ್ ಸತತವಾಗಿ ಸೋಲುತ್ತಲೇ ಇದೆ. ಜನರೊಂದಿಗಿನ ಸಂಬಂಧ ಕಡಿದು ಹೋಗಿರುವುದೇ ಇದಕ್ಕೆ ಕಾರಣ. ಲೋಕಸಭೆಗೆ 2014ರಲ್ಲಿ ನಡೆದ ಚುನಾವಣೆಯ ಸೋಲು ಹೆಚ್ಚು ಹೀನಾಯವಾಗಿತ್ತು. ಪಕ್ಷದ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರೇ ಗಾಂಧಿ–ನೆಹರೂ ಕುಟುಂಬದ ಭದ್ರಕೋಟೆ ಅಮೇಠಿಯಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಸೋತರು. ಇತ್ತೀಚಿನ ವಿಧಾನಸಭಾ ಚುನಾವಣೆ ನಡೆದ ಐದು ರಾಜ್ಯಗಳಲ್ಲಿ ಕಾಂಗ್ರೆಸ್‌ನ ಸೋಲು ಆ ಪಕ್ಷಕ್ಕೆ ದೊಡ್ಡ ಆಘಾತ ನೀಡಿದ್ದು ಹೌದು. ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಬೆಂಬಲಿಗರ ನೈತಿಕಸ್ಥೈರ್ಯ ಸಂಪೂರ್ಣವಾಗಿ ನೆಲ ಕಚ್ಚಿದ್ದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ.



ಗೆಲುವಿನ ಹಾದಿಗೆ ಮರಳಬೇಕಿದ್ದರೆ ಕಾಂಗ್ರೆಸ್ ಪಕ್ಷವು ಗಮನಹರಿಸಬೇಕಾದ ವಿಚಾರಗಳು ಹತ್ತು- ಹಲವು...

ಪ್ರತೀ ಚುನಾವಣಾ ಸೋಲಿನ ಬಳಿಕವೂ ಆತ್ಮಾವಲೋಕನ ಮತ್ತು ಸೋಲಿನ ಕಾರಣ ಕಂಡುಕೊಳ್ಳಲು ಸಮಿತಿ ರಚಿಸುವುದು ಕಾಂಗ್ರೆಸ್‌ನಲ್ಲಿ ಸಾಮಾನ್ಯ. ಎಷ್ಟೋ ಆತ್ಮಾವಲೋಕನ ಸಭೆಗಳು ನಡೆದಿವೆ ಮತ್ತು ಸಮಿತಿಯು ಕೊಟ್ಟ ವರದಿಯಲ್ಲಿ ಏನಿದೆ ಎಂಬುದು ಬಹಿರಂಗ ಆಗಿದ್ದೇ ಇಲ್ಲ. ಜತೆಗೆ, ಈ ಆತ್ಮಾವಲೋಕನ ಮತ್ತು ವರದಿಯ ಪರಿಣಾಮ ಪಕ್ಷದ ಕಾರ್ಯನಿರ್ವಹಣೆಯಲ್ಲಿ ಕಾಣಿಸಿಕೊಂಡದ್ದೂ ಇಲ್ಲ. ಆದರೆ, ಈ ಬಾರಿ ರಾಜಸ್ಥಾನದ ಉದಯಪುರದಲ್ಲಿ ನಡೆಸಿದ 'ನವಸಂಕಲ್ಪ ಚಿಂತನ ಶಿಬಿರ'ವು ಕಾಂಗ್ರೆಸ್ ನಾಯಕರು ಹೆಚ್ಚು ಗಂಭೀರವಾಗಿದ್ದಾರೆ ಎಂಬುದನ್ನು ತೋರಿಸುವಂತಿದೆ. ಪಕ್ಷದ ಮುಂದಿರುವ ಸವಾಲುಗಳೇನು ಮತ್ತು ಪಕ್ಷದ ದೌರ್ಬಲ್ಯಗಳೇನು ಎಂಬುದರ ಬಗ್ಗೆ ಚಿಂತನ ಮಂಥನ ನಡೆದಿದೆ. 'ಒಂದು ಕುಟುಂಬಕ್ಕೆ ಒಂದೇ ಟಿಕೆಟ್', '50 ವರ್ಷದ ಒಳಗಿನವರಿಗೆ ಪಕ್ಷದ ಹುದ್ದೆಗಳ ಮತ್ತು ಚುನಾವಣೆಗೆ ಸ್ಪರ್ಧಿಸುವ ಟಿಕೆಟ್‌ನಲ್ಲಿ ಶೇ 50ರಷ್ಟು ಮೀಸಲು' ಮುಂತಾದ ಮಹತ್ವದ ತೀರ್ಮಾನಗಳನ್ನೂ ಕೈಗೊಳ್ಳಲಾಗಿದೆ. ಆದರೆ, ಗೆಲುವಿನ ಹಾದಿಗೆ ಮರಳಬೇಕಿದ್ದರೆ ಪಕ್ಷವು ಗಮನಹರಿಸಬೇಕಾದ ವಿಚಾರಗಳು ಇನ್ನೂ ಹಲವಿವೆ. 'ಪ್ರಾದೇಶಿಕ ಪಕ್ಷಗಳಿಗೆ ಸಿದ್ಧಾಂತವೇ ಇಲ್ಲ' ಮತ್ತು 'ಪ್ರಾದೇಶಿಕ ಪಕ್ಷಗಳು ಬಿಜೆಪಿಯನ್ನು ಸೋಲಿಸಲಾರವು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶಿಬಿರದಲ್ಲಿ ಹೇಳಿದ್ದಾರೆ. ಇವು ದೂರಗಾಮಿ ಪರಿಣಾಮ ಉಂಟು ಮಾಡಬಹುದಾದ ಹೇಳಿಕೆಗಳು. ಬಿಜೆಪಿಯನ್ನು ಏಕಾಂಗಿಯಾಗಿ ಸೋಲಿಸುವ ಶಕ್ತಿ ತನಗೆ ಈಗ ಇಲ್ಲ ಎಂಬ ವಾಸ್ತವವನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು. ದೇಶದಾದ್ಯಂತ ಅಸ್ತಿತ್ವ ಇರುವ ಪ್ರಾದೇಶಿಕ ಪಕ್ಷ ಎಂಬ ಸ್ಥಿತಿ ಕಾಂಗ್ರೆಸ್‌ಗೆ ಈಗ ಬಂದಿದೆ. ಪ್ರಾದೇಶಿಕ ಪಕ್ಷಗಳೇ ಬಿಜೆಪಿಯನ್ನು ಸೋಲಿಸಲಾಗದು ಎಂಬುದು ನಿಜ. ಅದೇ ರೀತಿ, ಪ್ರಾದೇಶಿಕ ಪಕ್ಷಗಳ ಬೆಂಬಲ ಇಲ್ಲದೆ ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್‌ಗೂ ಸಾಧ್ಯ ಇಲ್ಲ. ಹಾಗೆಯೇ ಸಿದ್ಧಾಂತದ ವಿಚಾರದಲ್ಲಿಯೂ ಕಾಂಗ್ರೆಸ್‌ನಲ್ಲಿ ಇರುವ ಗೊಂದಲಗಳು ಕಡಿಮೆ ಏನಲ್ಲ. ಕಾಂಗ್ರೆಸ್ ಯಾವ ಸಿದ್ಧಾಂತ ಅನುಸರಿಸುತ್ತಿದೆ ಎಂಬುದರ ಬಗ್ಗೆ ಚಿಂತನ ಶಿಬಿರದಲ್ಲಿ ಚರ್ಚೆಯಾಗಿದೆ. ಬಿಜೆಪಿಯನ್ನು ಸೋಲಿಸಬೇಕಿದ್ದರೆ ಹಿಂದುತ್ವವಾದದ ಪರ ಇರಬೇಕು ಎಂಬ ಉತ್ತರ ಭಾರತದ ಕೆಲವು ಮುಖಂಡರ ಪ್ರತಿಪಾದನೆಯನ್ನು ದಕ್ಷಿಣದ ಮುಖಂಡರು ಒಪ್ಪಿಲ್ಲ. ಕಾಂಗ್ರೆಸ್ ಪಕ್ಷದ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಇಲ್ಲ, ಜಾತ್ಯತೀತ ನಿಲುವು ಹಾಗೆಯೇ ಉಳಿಯಲಿದೆ ಎಂಬ ನಿಲುವಿಗೆ ಚಿಂತನ ಶಿಬಿರವು ಬಂದಿದೆ. ಈ ಹಿಂದಿನ ಚುನಾವಣೆಗಳ ಸಂದರ್ಭದಲ್ಲಿ ರಾಹುಲ್ ಅವರು 'ಮೃದು ಹಿಂದುತ್ವ'ವನ್ನು ಅನುಸರಿಸಿದ್ದರು. ಹಾಗಿದ್ದರೆ ಕಾಂಗ್ರೆಸ್‌ನ ಸಿದ್ಧಾಂತ ಯಾವುದು?

ಕಾಂಗ್ರೆಸ್ ಪಕ್ಷಕ್ಕೆ ಜನರ ಜತೆಗಿನ ಸಂಪರ್ಕವೇ ಕಡಿದುಹೋಗಿದೆ ಎಂಬ ವಾಸ್ತವವು ರಾಹುಲ್ ಅವರಿಗೆ ಅರ್ಥವಾಗಿದೆ. ಹಾಗಾಗಿಯೇ ಸಂವಹನವನ್ನು ಹೆಚ್ಚಿಸುವ ಬಗ್ಗೆ ಒತ್ತು ನೀಡಲಾಗಿದೆ. ಆದರೆ, ಯಾತ್ರೆಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ಸಂವಹನವಷ್ಟೇ ಎಲ್ಲವನ್ನೂ ಮಾಡುವುದಿಲ್ಲ. ಪಕ್ಷದ ನಿಲುವು, ಸಿದ್ಧಾಂತ ಮತ್ತು ಯೋಜನೆಗಳನ್ನು ಜನರಿಗೆ ತಲುಪಿಸಲು ತಳ ಮಟ್ಟದ ಕಾರ್ಯಕರ್ತರಿಂದ ಹಿಡಿದು ಮೇಲ್ಮಟ್ಟದ ನಾಯಕರವರೆಗೆ ಎಲ್ಲರೂ ಸಜ್ಜಾಗಬೇಕು. ಜನರ ಆಗ್ರಹಗಳ ಪರವಾಗಿ ಹೋರಾಟಗಳನ್ನು ಸಂಘಟಿಸಿ, ಅಂತಹ ಹೋರಾಟಗಳನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವ ಮೂಲಕವೂ ಜನರ ಜತೆಗೆ ಸಂಪರ್ಕ ಸಾಧ್ಯ ಎಂಬುದನ್ನು ಪಕ್ಷವು ಅರ್ಥ ಮಾಡಿಕೊಳ್ಳಬೇಕು. ನಿರುದ್ಯೋಗ, ಬೆಲೆ ಏರಿಕೆಯಂತಹ ಸಮಸ್ಯೆಗಳು ಇದ್ದಾಗಲೂ ಕಾಂಗ್ರೆಸ್ ಪಕ್ಷವು ದೊಡ್ಡ ಮಟ್ಟದ ಹೋರಾಟವನ್ನು ಸಂಘಟಿಸಿಲ್ಲ. ಇದೆಲ್ಲಕ್ಕಿಂತ ಮುಖ್ಯವಾಗಿ, ಕೇಂದ್ರ ಮತ್ತು ರಾಜ್ಯಗಳಲ್ಲಿ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ತಾನು ಎಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ ಎಂಬ ಪ್ರಶ್ನೆಯನ್ನು ಕಾಂಗ್ರೆಸ್ ಪ್ರಾಮಾಣಿಕವಾಗಿ ಕೇಳಿಕೊಳ್ಳಬೇಕು. ಜನರಿಗಾಗಿ ಬೀದಿಗಿಳಿಯಲು ಹಿಂಜರಿದರೆ, ಪಕ್ಷಕ್ಕೆ ಮತ ಹಾಕಲು ಜನರು ಹಿಂದೇಟು ಹಾಕುತ್ತಾರೆ ಎಂಬುದು ಅರಿವಾಗದಿದ್ದರೆ ಪಕ್ಷದ ಪುನಶ್ಚೇತನ ಸಾಧ್ಯವಿಲ್ಲ.

ದಿನದ ಟ್ವೀಟ್


ಊರಿನ ಹೆಸರು ಘೋಷಿಸಿ



ಕಡಿಮೆ ದೂರ ಕ್ರಮಿಸುವ 'ನಮ್ಮ ಮೆಟ್ರೊ'ನಲ್ಲೇ ಮುಂದೆ ಬರುವ ನಿಲ್ದಾಣ ಮತ್ತು ತಲುಪಿದ ನಿಲ್ದಾಣದ ಹೆಸರನ್ನು ಅನೌನ್ಸ್ ಮಾಡಲಾಗುತ್ತದೆ. ಆದರೆ ಬೇರೆ ಬೇರೆ ರಾಜ್ಯಗಳನ್ನು ಹಾದು ಹೋಗುವ ದೂರ ಪ್ರಯಾಣದ ರೈಲುಗಳಲ್ಲಿ ಈ ವ್ಯವಸ್ಥೆಯಿಲ್ಲದಿರುವುದರಿಂದ ಪ್ರಯಾಣಿಕರಿಗೆ ಅನನುಕೂಲ. ರೈಲ್ವೆಗಿರುವ ಕಷ್ಟವೇನು?

ಪುಟ್ಟೇಗೌಡ, ನಾಗರಿಕ

ಕಿಡಿನುಡಿ



ಟೊಮೆಟೊ ಜ್ವರಕ್ಕೂ ಟೊಮೆಟೊಗೂ ಯಾವುದೇ ಸಂಬಂಧವಿಲ್ಲ ನಿಜ. ಆದರೆ ಬೆಂಗಳೂರಿನಲ್ಲಿ ಟೊಮೆಟೊ ದರವನ್ನು ಕೇಳಿದ ಗ್ರಾಹಕನಿಗೆ ನಿಜಕ್ಕೂ 'ಜ್ವರ' ಬರುವ ಹಾಗಿದೆ.

ಸುದರ್ಶನ್ ಜಯರಾಮು, ನಾಗರಿಕ

25 ವರ್ಷಗಳ ಹಿಂದೆ

ಭಾನುವಾರ, 18-5-1997

• ಮಹಿಳಾ ಮೀಸಲಾತಿ: ರಾಷ್ಟ್ರೀಯ ಚರ್ಚೆಗೆ ಪ್ರಧಾನಿ ಗುಜ್ರಾಲ್ ಕರೆ

ನವದೆಹಲಿ, ಮೇ 17 (ಪಿಟಿಐ): ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ನೀಡುವ ಕುರಿತ ಮಸೂದೆಯ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆ ನಡೆಯಬೇಕಾಗಿದೆ ಎಂದು ಪ್ರಧಾನಿ ಗುಜ್ರಾಲ್ ಅಭಿಪ್ರಾಯಪಟ್ಟಿದ್ದಾರೆ.

ಅಗರ್‌ವಾಲ್ ಜನಾಂಗದ ಸಮಾವೇಶ ಉದ್ಘಾಟಿಸಿದ ಅವರು, ಇದು ದೇಶದ ಅರ್ಧ ಭಾಗದಷ್ಟು ಜನತೆಗೆ ಸಂಬಂಧಿಸಿದ್ದಾಗಿರುವುದರಿಂದ ಈ ಮಸೂದೆ ಬಗ್ಗೆ ಸಂಸತ್ತಿನಲ್ಲಿ ಮಾತ್ರ ಚರ್ಚೆ ನಡೆದರೆ ಸಾಲದು ಎಂದರು.

• ಜಾತಿ ಆಧಾರಿತ ಮಹಿಳಾ ಮೀಸಲಾತಿ ಅಪಕ್ವ ವಿಚಾರ: ಅಡ್ವಾಣಿ ವಾದ

ಬೆಂಗಳೂರು, ಮೇ 17– ಜಾತಿ, ಮತ, ಕೋಮು, ಧರ್ಮ ಆಧರಿಸಿ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವುದನ್ನು ತಮ್ಮ ಪಕ್ಷ ಶತಾಯಗತಾಯ ವಿರೋಧಿಸುವುದು ಎಂದು ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಘೋಷಿಸಿದರು.

ಈ ಸಂಬಂಧದ ಮಸೂದೆ ಮಂಡನೆಗೆ ನಿನ್ನೆ ಲೋಕಸಭೆಯಲ್ಲಿ ವಿರೋಧ ವ್ಯಕ್ತವಾದ ರೀತಿಯನ್ನು ಟೀಕಿಸಿದ ಅವರು, ಮತೀಯ ಆಧಾರಿತ ಮೀಸಲಾತಿಗೆ ಒಲವು ತೋರುವ ಮೂಲಕ ಕೇಂದ್ರದ ಸಂಯುಕ್ತ ರಂಗ ಸರ್ಕಾರವು ರಾಷ್ಟ್ರೀಯ ರಾಜಕಾರಣಕ್ಕೆ ಭಾರಿ ಹಾನಿಯನ್ನು ಮಾಡುತ್ತಿದೆ ಎಂದರು.

ಸಂವಿಧಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮಾತ್ರ ಮೀಸಲಾತಿ ನಿಗದಿಪಡಿಸಿದ್ದರ ಹಿಂದೆ ಐತಿಹಾಸಿಕ ವಿಚಾರಧಾರೆ ಅಡಗಿದೆ. ಅದನ್ನು ಹೊಸಕಿ ಹಾಕಿ ಮತ, ಧರ್ಮಾಧಾರಿತ ಮೀಸಲಾತಿಗೆ ಸರ್ಕಾರ ಹೊರಟಿರುವುದು ಅಪಾಯದ ಮುನ್ಸೂಚನೆ ಎಂದು ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 18-5-1972

• ಭೂ ಹಿಡುವಳಿ ಮಿತಿ ಜಾರಿಗೆ ಬಂದರೆ ಸ್ವಹಿತಕ್ಕೆ ಧಕ್ಕೆ: ಶಾಸಕರ ಭೀತಿ?

ನವದೆಹಲಿ, ಮೇ 17– ಒಬ್ಬ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಎಷ್ಟು ಜಮೀನು ಇರಬೇಕೆಂಬ ಬಗ್ಗೆ ಪ್ರಧಾನಿ ಇಂದಿರಾ ಗಾಂಧಿ ಅವರು ತೀವ್ರವಾಗಿ ಗಮನ ಹರಿಸದಿರುವುದರಿಂದ ಈ ಪ್ರಶ್ನೆ ಆಯಾ ಲಾಬಿಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುವ ಮಟ್ಟದಲ್ಲೇ ಇದೆ.

ಪ್ರಶ್ನೆಯನ್ನು ಮುಖ್ಯಮಂತ್ರಿಗಳಿಗೇ ಬಿಟ್ಟರೆ, ಅವರು ಉದ್ದೇಶಿತ ಭೂ ಹಿಡುವಳಿ ಮಿತಿಯನ್ನು ಒಪ್ಪದೇ ಹೋಗಬಹುದು; ಏಕೆಂದರೆ ಬಹುತೇಕ ಶಾಸಕರು ಗ್ರಾಮಾಂತರ ಪ್ರದೇಶದಿಂದ ಬಂದವರಾದ್ದರಿಂದ ಅವರಿಗೆ ಹೆಚ್ಚಿನ ಹಿಡುವಳಿ ಬಗ್ಗೆ ಹಿತಾಸಕ್ತಿ ಇದೆ; ಅಲ್ಲದೆ ಇವರಲ್ಲಿ ಅನೇಕರಿಗೆ ಭಾರಿ ಪ್ರಮಾಣದ ಜಮೀನುಗಳಿವೆ.

ಆದರೆ, ಪ್ರಧಾನಿಯವರ ನಿಲುವೇನು ಎಂಬುದು ಬಹಿರಂಗವಾದಾಗ, ಭೂ ಸುಧಾರಣೆಗಳನ್ನು ತಮ್ಮ ಮೇಲೆ ಹೇರಲಾಯಿತೆಂದು ಮುಖ್ಯಮಂತ್ರಿಗಳು ಹೇಳಬಹುದು. ಆಗಲೂ ಮಿತಿ ಹೇರಿದರೆ ದೇಶದಾದ್ಯಂತ ಸಂಚಲನ, ಕಳವಳ ಉಂಟಾಗುವುದು ಖಚಿತ.

ಇದರ ನಿಜವಾದ ಹಿನ್ನೆಲೆ ಕಥೆ ಸ್ವಾತಂತ್ರ್ಯ ಪೂರ್ವ ಕಾಲದ್ದು. ಆಗ ಜನಬೆಂಬಲ ಪಡೆಯಲು ಬಳಸುತ್ತಿದ್ದ ಘೋಷಣೆ ಎಂದರೆ, 'ಸ್ವಾತಂತ್ರ್ಯಾನಂತರ ಜಮೀನ್ದಾರಿಕೆಯನ್ನು ನಿರ್ಮೂಲನಗೊಳಿಸುವುದು' ಎಂಬುದು.

ಶೇ 80ರಷ್ಟು ಜನ ಗ್ರಾಮಾಂತರ ವಾಸಿಗಳಾದ್ದರಿಂದ ಈ ಘೋಷಣೆ ಜನಮನ ಸೂರೆಗೊಂಡಿತು. ಈಗಲೂ ಶೇ 25ರಷ್ಟು ಗ್ರಾಮಾಂತರ ವಾಸಿಗಳು ಭೂಹೀನರು, 18 ಕೋಟಿ ಜನಕ್ಕೆ 5 ಎಕರೆಗೂ ಕಡಿಮೆ ಜಮೀನಿದೆ.

ಕೇಂದ್ರ– ರಾಜ್ಯ, ಅಂತರರಾಜ್ಯ ಸಹಕಾರಕ್ಕೆ ಧಕ್ಕೆ ತಂದಿದೆ ರಾಜಕೀಯ ವಾಕ್ಸಮರ

ರಾಜಕೀಯ ಪ್ರತೀಕಾರ ಮತ್ತು 'ಆಟದ ನಿಯಮ'



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

'ಲಕ್ಷ್ಮಣ ರೇಖೆ' ಹಾಗೂ ಒಬ್ಬರ ಅಧಿಕಾರದ ಮಿತಿಗಳನ್ನು ಗೌರವಿಸಬೇಕಾದ ಅಗತ್ಯವನ್ನು ಇತ್ತೀಚಿನ ಕೆಲವು ದಿನಗಳಲ್ಲಿ ಪದೇ ಪದೇ ಉಲ್ಲೇಖಿಸಲಾಗಿದೆ. ಹೀಗಿದ್ದೂ ಲಕ್ಷ್ಮಣ ರೇಖೆ ಎಳೆಯುವವರು ಯಾರು ಎಂಬ ಬಗ್ಗೆ ಚರ್ಚೆ ಮುಂದುವರಿದಿದೆ. ಒಬ್ಬರ ಅಗತ್ಯ ಹಾಗೂ ಹಿತಾಸಕ್ತಿಗೆ ಅನುಗುಣವಾಗಿ ನಿರಂತರವಾಗಿ ಬದಲಿಸಬಹುದಾದ ಅನುಕೂಲಸಿಂಧು ರೇಖೆಯಾಗಬಹುದೇ ಇದು? ಬೇರೆ ಬೇರೆ ಗಳಿಗೆಗಳಲ್ಲಿ ನಾಟಕೀಯ ಎನಿಸಬಹುದಾದ ಭಿನ್ನ ಭಿನ್ನ ದೃಷ್ಟಿಕೋನಗಳೊಂದಿಗೆ 'ಲಕ್ಷ್ಮಣ ರೇಖೆ'ಯನ್ನು ಅಧಿಕಾರ ಸ್ಥಾನಗಳಲ್ಲಿ ಇರುವವರು ಆಗಾಗ್ಗೆ ಉಲ್ಲೇಖಿಸಬಹುದೇ? ರಾಜಕೀಯ ಕುರಿತಾದ ಇಂದಿನ ವಿಶ್ಲೇಷಣೆಯಲ್ಲಿ ಅಂತಹ ಒಂದು ಪ್ರಕರಣವನ್ನು ಎತ್ತಿ ತೋರಲಾಗಿದೆ.

ನಾಗರಿಕ ಸೇವೆ ಹಾಗೂ ಸರ್ಕಾರದ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒಳಗೊಂಡ ಒಕ್ಕೂಟ ಸರ್ಕಾರದ ಚೌಕಟ್ಟಿನಲ್ಲಿ ಹೆಚ್ಚಿನ ತಿಕ್ಕಾಟಗಳು ನಡೆಯುವುದು ಹೊಸ ವಿದ್ಯಮಾನವೇನಲ್ಲ. ಪಂಜಾಬ್, ಹರಿಯಾಣ ಹಾಗೂ ದೆಹಲಿ ಪೊಲೀಸರನ್ನು ಒಳಗೊಂಡ ಇತ್ತೀಚಿನ ನಗೆಪಾಟಲಿನ ವಿದ್ಯಮಾನವು ಒಕ್ಕೂಟ ಆಡಳಿತದ ಮೂಲಭೂತ ತತ್ವಗಳ ಗೌರವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಈ 'ಲಕ್ಷ್ಮಣ ರೇಖೆ'ಗೆ ಗೌರವ ನೀಡಬೇಕಾದ ಅಗತ್ಯದೆಡೆಗೆ ಗಮನ ಸೆಳೆದಿದೆ. ಪಕ್ಷಾಧಾರಿತ ರಾಜಕೀಯಕ್ಕಾಗಿ ಮತ್ತು ವೈಯಕ್ತಿಕ ಕಾರ್ಯಸೂಚಿಗಾಗಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳದೆ ಸಾರ್ವಜನಿಕ ಹಿತಕ್ಕಾಗಿ ವಿವೇಚನೆಯಿಂದ ಅಧಿಕಾರವನ್ನು ಬಳಸಬೇಕಿರುವ ಅಗತ್ಯದ ಪ್ರಶ್ನೆಯನ್ನೂ ಈ ಪ್ರಕರಣ ಎತ್ತುತ್ತದೆ.

ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಸದೃಢವಾಗಿ ಪ್ರತಿಷ್ಠಾಪಿತಗೊಂಡಿರುವ ತತ್ವಗಳನ್ನು ಪಕ್ಕಕ್ಕಿರಿಸಿ, ತಮ್ಮ ಪಕ್ಷದ ತಕ್ಷಣದ ರಾಜಕೀಯ ಹಿತಾಸಕ್ತಿಗಳಿಗಾಗಿ ನಿಯಮಗಳ ವ್ಯಾಖ್ಯಾನವನ್ನು ವಿಸ್ತರಿಸುವ ಅಥವಾ ತಿರುಚುವ ಪ್ರವೃತ್ತಿಯು ಇತ್ತೀಚಿನ ದಿನಮಾನಗಳಲ್ಲಿ ಕಂಡುಬರುತ್ತಿರುವುದು ಎಲ್ಲರ ಗಮನಕ್ಕೆ ಬಂದಿದೆ.

'ತಜಿಂದರ್ ಪಾಲ್ ಸಿಂಗ್ ಬಗ್ಗಾ ಪ್ರಕರಣ'ವು ಪ್ರತಿನಿಧಿಸಿದ 'ಅಸಂಗತ ನಾಟಕ'ವನ್ನು ಸ್ವಲ್ಪ ನೆನಪಿಸಿಕೊಳ್ಳೋಣ. ಪ್ರತಿಸ್ಪರ್ಧಿ ರಾಜಕೀಯ ಪಕ್ಷದ ನಾಯಕನ ಬಗ್ಗೆ ರಾಜಕಾರಣಿಯೊಬ್ಬರು ಟೀಕೆಗಳ ಹೊಳೆಯನ್ನೇ ಹರಿಸುತ್ತಾರೆ. ನಮ್ಮಲ್ಲಿ ಅನೇಕರಿಗೆ ಇದು ಮಾಮೂಲಿ ವಿದ್ಯಮಾನ. ಟೀಕೆಗಳು, ಪ್ರತಿ ಟೀಕೆಗಳು ಉಗ್ರ ಆಕ್ರಮಣಶೀಲತೆಯೊಂದಿಗೆ ಹರಿದಾಡಿ ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾದಾಗ, ರಾಜಕಾರಣದ ನಾಟಕ ಸ್ಪಷ್ಟವಾಗಿ ಎದ್ದುಕಾಣುತ್ತದೆ.


ಹೀಗೆ ದೂರುಗಳು ದಾಖಲಾಗಿರುವ ಪೊಲೀಸ್ ಠಾಣೆಗಳು, ತನ್ನ ನೇತಾರರ ವಿರುದ್ಧ ಮಾಡಿದ ಹೇಳಿಕೆಗಳಿಗೆ ಪ್ರತೀಕಾರ ತೆಗೆದುಕೊಳ್ಳಲು ಉತ್ಸುಕವಾಗಿರುವ ಪಕ್ಷವೇ ಆಡಳಿತದಲ್ಲಿರುವ ರಾಜ್ಯಗಳಲ್ಲೇ ಇರುವುದು ಪ್ರಾಸಂಗಿಕ ಮಾತ್ರವೇ?

ಈ ಪ್ರಕರಣದಲ್ಲಿ, ಎಎಪಿ ನಾಯಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಮಾಡಿದ ಟೀಕೆಗಳಿಗಾಗಿ ದೆಹಲಿಯ ಬಿಜೆಪಿ ನಾಯಕ ಬಗ್ಗಾ ಅವರ ವಿರುದ್ಧ ದೂರು ದಾಖಲಾಯಿತು. ಎಎಪಿಯು ಇತ್ತೀಚೆಗೆ ಅಧಿಕಾರಕ್ಕೆ ಬಂದಿರುವಂತಹ ಪಂಜಾಬ್‌ನ ಪೊಲೀಸ್ ಠಾಣೆಯಲ್ಲಿ ಈ ದೂರು ದಾಖಲಾಯಿತು. ಈ ವಿಚಾರದ ಬೆನ್ನಟ್ಟಲು ಹಾಗೂ ಬಗ್ಗಾ ಅವರನ್ನು ಬಂಧಿಸಲು ಪಂಜಾಬ್ ಪೊಲೀಸರು ನಿರ್ಧರಿಸುತ್ತಾರೆ. ಬಂಧನಕ್ಕೆ ಅವಕಾಶ ನೀಡುವ ಕಡ್ಡಾಯ ನಿರ್ದೇಶನ ಪಡೆದುಕೊಳ್ಳುವುದಿಲ್ಲ ಹಾಗೂ ತಮ್ಮ ರಾಜ್ಯದ ವ್ಯಾಪ್ತಿಯ ಹೊರಗೆ ದೆಹಲಿಯಲ್ಲಿ ಈ ಬಂಧನ ಕಾರ್ಯವನ್ನು ಪಂಜಾಬ್ ಪೊಲೀಸರು ಜರುಗಿಸುತ್ತಾರೆ.

ದೆಹಲಿಯ ಪೊಲೀಸ್ ಠಾಣೆಯೊಂದರಲ್ಲಿ ಅಪಹರಣದ ದೂರನ್ನು ಬಗ್ಗಾ ಅವರ ತಂದೆ ದಾಖಲಿಸುತ್ತಾರೆ. 'ಅಪಹರಣ ಆರೋಪ'ದ ಬಗ್ಗೆ ದೆಹಲಿ ಪೊಲೀಸರು (ಕೇಂದ್ರ ಗೃಹ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದ ವ್ಯಾಪ್ತಿಗೆ ಬರುತ್ತಾರೆ) ಹರಿಯಾಣ ಪೊಲೀಸರಿಗೆ ಸೂಚನೆ ನೀಡುತ್ತಾರೆ. ಹರಿಯಾಣದ ಮೂಲಕ ಪಂಜಾಬ್‌ಗೆ ಬಗ್ಗಾ ಅವರನ್ನು ಕರೆದೊಯ್ಯುತ್ತಿದ್ದ ಪಂಜಾಬ್ ಪೊಲೀಸ್ ವಾಹನವನ್ನು ಹರಿಯಾಣ ಪೊಲೀಸರು ತಡೆಯುತ್ತಾರೆ. ದೆಹಲಿ ಪೊಲೀಸರಿಗೆ ಬಗ್ಗಾ ಅವರನ್ನು ಹಸ್ತಾಂತರಿಸಲಾಗುತ್ತದೆ, ಅವರು ದೆಹಲಿಗೆ ವಾಪಸಾಗುತ್ತಾರೆ. ರಾಜಕೀಯ ವಾಕ್ಸಮರ ಮುಂದುವರಿಯುತ್ತಿರುವಂತೆಯೇ ಬಂಧನದಿಂದ ಬಗ್ಗಾ ಅವರನ್ನು ನ್ಯಾಯಾಲಯ ರಕ್ಷಿಸುತ್ತದೆ.

ಮೇಲಿನ ಈ ಕಥನದಲ್ಲಿ ಗಮನದಲ್ಲಿ ಇಡಬೇಕಾದ ಮುಖ್ಯ ಅಂಶಗಳು ಯಾವುವು? ಕಾನೂನು ಮತ್ತು ಸುವ್ಯವಸ್ಥೆಯು ರಾಜ್ಯದ ವಿಷಯವೇ ಆಗಿದ್ದು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತದೆಯಾದರೂ ಈ ವಿಚಾರದಲ್ಲಿ ತಮ್ಮ ಅಧಿಕಾರವನ್ನು ರಾಜ್ಯ ಸರ್ಕಾರಗಳು ಚಲಾಯಿಸುವಾಗ ಅನುಸರಿಸಬೇಕಾದ ಸ್ಪಷ್ಟ ನಿಯಮಗಳಿವೆ. ಪೊಲೀಸರ ಅಧಿಕಾರವು ರಾಜ್ಯ ಗಡಿಗಳಿಗೆ ಬಹುಪಾಲು ಸೀಮಿತವಾಗಿದೆ. ರಾಜ್ಯದ ಗಡಿಗಳಾಚೆಗೆ ಅವರು ಕ್ರಮ ಕೈಗೊಳ್ಳಬೇಕಾದ ಅಗತ್ಯ ಬಂದಾಗ ಹಲವಾರು ಅನುಮತಿಗಳನ್ನು ಪಡೆದುಕೊಳ್ಳ ಬೇಕಾಗುತ್ತದೆ. ಅಲ್ಲದೆ ಅದಕ್ಕೆ ಸಂಬಂಧಿಸಿದ ರಾಜ್ಯದ ಪೊಲೀಸರನ್ನೂ ಸಂಪರ್ಕದಲ್ಲಿ ಇಟ್ಟುಕೊಳ್ಳುವುದು ಅಗತ್ಯ.

ಬಗ್ಗಾ ಪ್ರಕರಣದಲ್ಲಿ ಈ ಎಲ್ಲಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬ ಬಗ್ಗೆ ಈಗಲೂ ಜೋರಾದ ಚರ್ಚೆ ನಡೆಯುತ್ತಿದೆ. ನ್ಯಾಯಾಲಯಗಳ ಒಳಗೊಳ್ಳುವಿಕೆ ಹಾಗೂ ಬಂಧನ ಜರುಗಿಸಲು ನ್ಯಾಯಾಲಯದ ನಿರ್ದಿಷ್ಟ ನಿರ್ದೇಶನಗಳ ಅಗತ್ಯವು ಈ ವಿಚಾರದ ಸಂಕೀರ್ಣತೆಯನ್ನು ಹೆಚ್ಚಿಸಿದೆ. ದೆಹಲಿ ಪೊಲೀಸರು ದೆಹಲಿ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಬರುವುದಿಲ್ಲ. ಕೇಂದ್ರ ಗೃಹ ಸಚಿವಾಲಯದ ನಿಯಂತ್ರಣದಡಿ ದೆಹಲಿ ಪೊಲೀಸರು ಬರುವುದರಿಂದ ಈ ಪ್ರಕರಣದ ವಿವಾದವು ಮತ್ತಷ್ಟು ಸಂಕೀರ್ಣವಾಗುತ್ತದೆ.



ಅಂತರರಾಜ್ಯ ಹಾಗೂ ಕೇಂದ್ರ- ರಾಜ್ಯ ಸಂಬಂಧಗಳು, ಪರಿಣಾಮಕಾರಿ ಸಮನ್ವಯ ಹಾಗೂ ಅರ್ಥಪೂರ್ಣ ಸಹಕಾರಗಳ ಸುತ್ತ ಸುತ್ತುತ್ತವೆ ಎಂಬ ಅಂಶವನ್ನು ಇಲ್ಲಿ ಎತ್ತಿ ಹೇಳುವುದು ಮುಖ್ಯ. ಚರ್ಚಿಸುತ್ತಿರುವ ಈ ಪ್ರಕರಣದ ಸಂಬಂಧದಲ್ಲಿ ಎರಡು ಕಡೆಯೂ ಹೆಚ್ಚು ಗಾಸಿಯಾಯಿತು. ಬಿರುಸಾದ ರಾಜಕೀಯ ಸ್ಪರ್ಧೆ ಮೇಲುಗೈ ಪಡೆಯಿತು. ಯಾವುದೇ ಪ್ರಮುಖ ನಾಗರಿಕ ಅಥವಾ ಸಾರ್ವಜನಿಕ ಹಿತಾಸಕ್ತಿಯ ವಿಚಾರವೇನೂ ಇಲ್ಲಿ ವಿವಾದದ ಬಿಂದುವಾಗಿರಲಿಲ್ಲ. ಬದಲಿಗೆ ಇದು, ಎದ್ದು ಕಾಣಿಸುವ ಪಕ್ಷಾಧಾರಿತ ರಾಜಕೀಯ ಕುಸ್ತಿಪಂದ್ಯವಾಗಿತ್ತಷ್ಟೇ. ಆಟದ ನಿಯಮಗಳನ್ನು ಉಲ್ಲಂಘಿಸುತ್ತಾ ಬೇಕಾಬಿಟ್ಟಿ ವ್ಯಾಖ್ಯಾನಿಸುತ್ತಾ ತಮಗೆ ಬೇಕಾದಷ್ಟನ್ನೇ ಆಯ್ದುಕೊಂಡು ಉಲ್ಲೇಖಿಸುತ್ತಾ ಆಡುವ ಗೊಂದಲಮಯ ರಾಜಕೀಯ ಕುಸ್ತಿ ಪಂದ್ಯವಿದು.

ನ್ಯಾಯದ ಪಾಲನೆ ಅಥವಾ ನ್ಯಾಯೋಚಿತ ಆಟ ಎಂಬುದಕ್ಕಿಂತ ರಾಜಕೀಯ ಪ್ರತೀಕಾರವೇ ಗುರಿ ಎಂಬಂತೆ ತೋರುತ್ತಿತ್ತು. ತಾವು ಪ್ರತಿನಿಧಿಸುವ ರಾಜಕೀಯ ವರ್ಣಗಳನ್ನಾಧರಿಸಿ ರಾಜಕೀಯ ಪ್ರತೀಕಾರದ ಇತ್ಯರ್ಥದಲ್ಲಿ ಸರ್ಕಾರದ ವಿವಿಧ ಹಂತಗಳು ತೊಡಗಿಕೊಂಡಲ್ಲಿ, ನ್ಯಾಯದ ಆಡಳಿತವು ಮೊದಲ ಹಾಗೂ ಪ್ರಮುಖ ಬಲಿಯಾಗುತ್ತದೆ. ಅಂತರರಾಜ್ಯ ಸಹಭಾಗಿತ್ವ ಹಾಗೂ ಸಮನ್ವಯದ ತತ್ವದಲ್ಲಿ ಬೇರೂರಿರುವ ಒಕ್ಕೂಟ ತತ್ವವು ರಾಜಕೀಯ ಸ್ಪರ್ಧೆಯ ನೆಲೆಯಾಗಿಬಿಟ್ಟಾಗ, ಒಕ್ಕೂಟ ತತ್ವದ ನ್ಯಾಯದ ಸಿದ್ಧಾಂತಗಳನ್ನು ಮೊದಲು ಬದಿಗೆ ಇರಿಸಬೇಕಾಗುತ್ತದೆ.

ಇಂತಹ ಪ್ರಸಂಗಗಳು ನಮಗೆ ನೆನಪಿಸುವುದೇನೆಂದರೆ, ಪ್ರತಿಸ್ಪರ್ಧಿಗಳೊಡನೆ ರಾಜಕೀಯ ಪ್ರತೀಕಾರಕ್ಕಾಗಿ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಬಳಸಿಕೊಳ್ಳದಿರುವಂತೆ ನೋಡಿಕೊಳ್ಳುವ ಅಗತ್ಯ. 'ಆಟದ ನಿಯಮ'ಗಳಿಗೆ ಅಕ್ಷರಶಃ ಬದ್ಧವಾಗುವಂತೆ ಪಕ್ಷದ ಕಾರ್ಯಕರ್ತರಿಗೆ ಎಲ್ಲಾ ರಾಜಕೀಯ ಪಕ್ಷಗಳ ನೇತಾರರು ಮನಗಾಣಿಸಬೇಕಾದುದರ ಅಗತ್ಯ. ಪಕ್ಷದ ರಾಜಕೀಯ ಗಳಿಕೆಗಳಿಗಾಗಿ ಅಧಿಕಾರದ ಪ್ರಭಾವವನ್ನು ಬಳಸುವ ಆಮಿಷವನ್ನು ಕಟ್ಟುನಿಟ್ಟಾಗಿ ತೊಲಗಿಸಬೇಕು.

ಒಕ್ಕೂಟ ವ್ಯವಸ್ಥೆಯಲ್ಲಿ ನಿರ್ದಿಷ್ಟ ಕರಾರುಗಳ ಮೇಲೆ ಸರ್ಕಾರದ ವಿವಿಧ ಹಂತಗಳು ಅಧಿಕಾರ ಸ್ಥಾನಗಳಿಗೆ ಚುನಾಯಿತವಾಗಿರುತ್ತವೆ. ರಾಜಕೀಯ ಪ್ರತಿಸ್ಪರ್ಧಿಗಳ ಮೇಲಿನ ಪ್ರತೀಕಾರಕ್ಕಾಗಿ ಅಧಿಕಾರವನ್ನು ತಂತ್ರಗಾರಿಕೆಯಿಂದ ಬಳಸಿಕೊಳ್ಳುವ ವಿಚಾರವು ಈ ಕರಾರಿನಲ್ಲಿ ಸೇರಿರುವುದಿಲ್ಲ. ಆದರೆ ಹೀಗೆ ಮಾಡುವಂತಹ ಆಮಿಷವು ಆಗಾಗ್ಗೆ ಪ್ರಕಟಗೊಳ್ಳಬಹುದು. ಅಂತಹ ಅಲ್ಪಾವಧಿ ಗಳಿಕೆಗಳನ್ನು ಮೀರಿ, ಸಾಮಾಜಿಕವಾಗಿ ಅದಕ್ಕಿಂತ ದೊಡ್ಡದಾಗಿ ಒಳಿತಾಗುವುದನ್ನು ಮಾಡುವುದರ ಮೇಲೆ ನಾಯಕತ್ವ ಗಮನಹರಿಸುವುದೇ?

ಪಕ್ಷಾಧಾರಿತ ರಾಜಕೀಯ ಸ್ಪರ್ಧೆಗೆ ಸಾಧನವಾಗುವುದಕ್ಕಿಂತ ಎಲ್ಲರ ಒಳ್ಳೆಯದಕ್ಕಾಗಿ ಸಹಭಾಗಿತ್ವ ಹಾಗೂ ಸಹಕಾರದ ಮೇಲೆ ಕೇಂದ್ರ- ರಾಜ್ಯ ಮತ್ತು ಅಂತರ ರಾಜ್ಯ ಸಂಬಂಧಗಳು ಗಮನಹರಿಸುವುದು ಅಗತ್ಯ.

ಚುರುಮುರಿ



ಬೆಲೆ ಬೇನೆ

• ಮಣ್ಣೆ ರಾಜು

'ಲೀಟರ್ ಪೆಟ್ರೋಲ್‌ಗಿಂತ ಕೇಜಿ ಟೊಮೆಟೊ ಬೆಲೆಯೇ ಜಾಸ್ತಿಯಾಗಿದೆ...' ತರಕಾರಿ ತಂದು ಶಂಕ್ರಿ ಸಂಕಟ ಹೇಳಿಕೊಂಡ.

'ಬಡಪಾಯಿ ಟೊಮೆಟೊ ಬೆಲೆ ಅಪರೂಪಕ್ಕೆ ಹೆಚ್ಚಾಗಿದೆ ಬಿಡ್ರೀ, ಕೆಲವು ಸಾರಿ ರಸ್ತೆಗೆ ಸುರಿಯುವಷ್ಟು ಬೆಲೆ ಕಳೆದುಕೊಳ್ಳುತ್ತದೆ' ಎಂದಳು ಸುಮಿ.

'ಟೊಮೆಟೊಗೆ ಗ್ರಹಚಾರ ಕೆಟ್ಟಿದೆ ಅನ್ಸುತ್ತೆ. ಟೊಮೆಟೊ ಹೆಸರು ಕೆಡಿಸಲು ಟೊಮೆಟೊ ಜ್ವರ ಬೇರೆ ಕಾಣಿಸಿಕೊಂಡಿದೆ... ಹಕ್ಕಿ ಜ್ವರ, ಹಂದಿ ಜ್ವರದಂತಹ ನಾನ್‌ವೆಜ್ ಜ್ವರಗಳ ಜೊತೆಗೆ ವೆಜಿಟೇರಿಯನ್ ಟೊಮೆಟೊ ಜ್ವರ ಹರಡುತ್ತಿದೆ'.

'ಮುಂದೆ ಕುಂಬಳಕಾಯಿ, ಬದನೆಕಾಯಿ ಜ್ವರಗಳೂ ಬರಬಹುದು...'

'ಟೊಮೆಟೊ ಜ್ವರ ಹರಡುತ್ತಿರುವುದರಿಂದ ಗೃಹಿಣಿಯರು ಅಡುಗೆಗೆ ಟೊಮೆಟೊ ಬಳಸಬೇಡಿ ಅಂತ ಟೀವಿ ಗುರುಗಳು ಹೇಳಬಹುದು, ನೀನು ನಂಬಬೇಡ'.

'ನಂಬುವುದಿಲ್ಲ. ಆದರೆ ಜ್ವರ, ನೆಗಡಿಯಂಥ ಕಾಯಿಲೆಗಳು ಮಾತ್ರೆ, ಇಂಜೆಕ್ಷನ್‌ಗೆ ವಾಸಿಯಾಗ್ತವೆ. ಪೆಟ್ರೋಲ್, ಗ್ಯಾಸ್, ಅಡುಗೆಎಣ್ಣೆ ಬೆಲೆ ಏರಿಕೆಯ ಬೇನೆ ನಿಯಂತ್ರಣಕ್ಕೆ ಚಿಕಿತ್ಸೆನೇ ಇಲ್ವೇನ್ರೀ?' ಸುಮಿಗೆ ಸಂಕಟ.

ಅಷ್ಟೊತ್ತಿಗೆ ಗ್ಯಾಸ್ ಏಜೆನ್ಸಿಯವ ಸಿಲಿಂಡರ್ ಡೆಲಿವರಿಗೆ ಬಂದ, 'ಇಲ್ಲಾ ಮೇಡಂ, ಗ್ಯಾಸ್ ಬೆಲೆ ಬೇನೆಗೆ ಸರ್ಕಾರಿ ಚಿಕಿತ್ಸೆ ಇಲ್ಲ, ನೀವೇ ಮನೆ ಮದ್ದಿನಿಂದ ಕಾಯಿಲೆ ಕಂಟ್ರೋಲ್ ಮಾಡ್ಕೊಬೇಕು' ಅಂದ.

'ಗ್ಯಾಸ್ ರೇಟ್ ರೋಗಕ್ಕೆ ಮನೆ ಮದ್ದು ಇದೆಯಾ?!...' ಸಿಲಿಂಡರ್ ದುಡ್ಡು ಕೊಡುತ್ತಾ ಸುಮಿ ಕೇಳಿದಳು.

'ಇದೆ ಮೇಡಂ, ವಾರಕ್ಕೆ ಎರಡು ಮೂರು ದಿನ ಅಡುಗೆ ಮನೆ ಲಾಕ್‌ಡೌನ್ ಮಾಡಿ, ಬಾಯಿಗೆ ಮಾಸ್ಕ್ ಕಟ್ಟಿಕೊಂಡು ಉಪವಾಸ ಸತ್ಯಾಗ್ರಹ ಮಾಡಿ...' ಅಂದ.

'ಸರ್ಕಾರದ ವಿರುದ್ಧ ಸತ್ಯಾಗ್ರಹನಾ?' ಶಂಕ್ರಿ ಕೇಳಿದ.

'ಅಲ್ಲಾ ಸಾರ್, ನಿಮ್ಮ ಆರ್ಥಿಕ ದುಃಸ್ಥಿತಿ ವಿರುದ್ಧ ನೀವೇ ಹೋರಾಟ ಮಾಡಿದ್ರೆ ಗ್ಯಾಸ್ ಕಾಯಿಲೆ ಕಂಟ್ರೋಲಿಗೆ ಬರಬಹುದು... ಹೆಹ್ಹೆಹ್ಹೆ...' ನಗುತ್ತಾ ಖಾಲಿ ಸಿಲಿಂಡರ್ ಎತ್ತಿಕೊಂಡು ಹೊರಟ.

ಸಂಗತ

ಆರ್ಡರ್ ಕ್ಯಾನ್ಸಲ್ ಮಾಡುವ ಮುನ್ನ...

ಸಣ್ಣ ಮಟ್ಟಿಗಿನ ಸ್ವಾವಲಂಬನೆಗೆ ದಾರಿ ಮಾಡಿಕೊಂಡಿರುವ ಡೆಲಿವರಿ ಬಾಯ್‌ಗಳ ಜೀವಹಾನಿಯಾಗದಂತೆ ನೋಡಿಕೊಳ್ಳಬೇಕಾದದ್ದು ಎಲ್ಲರ ಜವಾಬ್ದಾರಿ

• ದೀಪಾ ಹಿರೇಗುತ್ತಿ

ಈ ವರ್ಷದ ಜನವರಿಯಲ್ಲಿ ದೆಹಲಿಯಲ್ಲಿ 36 ವರ್ಷದ ಸಲೀಲ್ ತ್ರಿಪಾಠಿ ಫುಡ್ ಡೆಲಿವರಿ ಮಾಡುವಾಗ ಅಪಘಾತವಾಗಿ ಪ್ರಾಣ ಕಳೆದುಕೊಂಡರು. ಜೋರು ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೆ ಅವರು ಕೆಲಸಕ್ಕೆ ಹೋಗಿದ್ದರು. ಹೋಟೆಲ್‌ನಲ್ಲಿ ಮ್ಯಾನೇಜರ್ ಆಗಿ ತಿಂಗಳಿಗೆ ₹ 60 ಸಾವಿರ ದುಡಿಯುತ್ತಿದ್ದ ಸಲೀಲ್, ಕೋವಿಡ್ ಮೊದಲ ಅಲೆಯಲ್ಲಿ ಆ ಹೋಟೆಲ್ ಮುಚ್ಚಿದ ಕಾರಣ ಕೆಲಸ ಕಳೆದುಕೊಂಡಿದ್ದರು. ಎರಡನೇ ಅಲೆಯಲ್ಲಿ ಮತ್ತೊಂದು ಕೆಲಸವನ್ನೂ ಕಳೆದುಕೊಂಡರು. ಕೋವಿಡ್‌ನಿಂದ ತಂದೆ ತೀರಿಕೊಳ್ಳುವ ಮೊದಲು ವೆಂಟಿಲೇಟರ್‌ನಲ್ಲಿ ತಿಂಗಳುಗಟ್ಟಲೆ ಇದ್ದ ಕಾರಣ ಆಸ್ಪತ್ರೆಯ ಬಿಲ್ ಮುಗಿಲು ಮುಟ್ಟಿತ್ತು. ಶಾಲೆಯ ಫೀಸ್ ಎಂಟು ಸಾವಿರ ರೂಪಾಯಿ ಕಟ್ಟಲಾಗದೆ ಮಗ ಶಾಲೆಯಿಂದ ಹೊರಹಾಕಲ್ಪಟ್ಟ. ಅದಾದ ಮೇಲೆ ಸಲೀಲ್ ಅನಿವಾರ್ಯವಾಗಿ ಡೆಲಿವರಿ ಬಾಯ್ ಕೆಲಸ ಮಾಡಲಾರಂಭಿಸಿದರು.

ತಿಂಗಳಿಗೆ ₹ 10 ಸಾವಿರ ಸಂಬಳದಲ್ಲೇ ಕುಟುಂಬ ನಿರ್ವಹಿಸಬೇಕಾದ ದುಃಸ್ಥಿತಿ. ಕಂಪನಿ ಪರಿಹಾರವನ್ನೇನೋ ನೀಡಿದೆ. ಜನರೂ ಕ್ರೌಡ್ ಫಂಡಿಂಗ್ ಮೂಲಕ ಸಹಾಯ ಮಾಡಿದ್ದಾರೆ. ಆದರೆ ಹತ್ತು ವರ್ಷದ ಅವರ ಮಗನಿಗೆ ತಂದೆಯನ್ನು, ವೃದ್ಧ ತಾಯಿಗೆ ಮಗನನ್ನು, ಹೆಂಡತಿಗೆ ಗಂಡನನ್ನು ತಂದುಕೊಡುವವರು ಯಾರು? ಆ ಖಾಲಿತನವನ್ನು ತುಂಬುವವರು ಯಾರು?

ಆರ್ಡರ್ ಮಾಡಿದ ಕೇವಲ ಹತ್ತು ನಿಮಿಷದಲ್ಲಿ ಮನೆಬಾಗಿಲಿಗೆ ಆಹಾರ ತಲುಪಿಸುವುದಾಗಿ ಕಂಪನಿಯೊಂದು ಇತ್ತೀಚೆಗೆ ಹೇಳಿದ್ದನ್ನು ನೋಡಿ ಸಲೀಲ್ ಪ್ರಕರಣ ನೆನಪಾಯಿತು. ಮಾಡಿದ ಆಹಾರ ಬಿಸಿ ಮಾಡಿಕೊಳ್ಳಲಿಕ್ಕೇ ನಮಗೆ ಹತ್ತು ನಿಮಿಷ ಬೇಕು. ಇನ್ನು ಫೋನ್ ಕರೆ ಸ್ವೀಕರಿಸಿ, ಆಹಾರ ಪ್ಯಾಕ್ ಮಾಡಿ, ಎಷ್ಟೇ ಹತ್ತಿರವಾದರೂ ಹತ್ತು ನಿಮಿಷದಲ್ಲಿ ತಲುಪಿಸುವುದೆಂದರೆ, ಡೆಲಿವರಿ ಹುಡುಗರ ಮೇಲೆ ಇರಬಹುದಾದ ಒತ್ತಡವನ್ನು ಅಂದಾಜಿಸಬಹುದು. ಅಪರಾತ್ರಿಯಲ್ಲೂ ಈ ಕೆಲಸ ನಡೆದೇ ಇರುತ್ತದೆ.

ಕೆಲವು ಗ್ರಾಹಕರೂ ಅಷ್ಟೆ, ಹತ್ತು ನಿಮಿಷ ತಡವಾದರೂ ನೆಗೆಟಿವ್ ರೇಟಿಂಗ್ ಕೊಡುವುದು, ಆರ್ಡರ್ ಕ್ಯಾನ್ಸಲ್ ಮಾಡುವುದು ಮಾಡುತ್ತಿರುತ್ತಾರೆ. ಹತ್ತು ನಿಮಿಷ ನಾವು ತಿನ್ನುವುದು ತಡವಾದರೂ ಪರವಾಗಿಲ್ಲ, ಮಿತಿಮೀರಿದ ವೇಗದಿಂದ ಜೀವವೊಂದು ಹೋಗಬಾರದು ಎಂದು ಯೋಚಿಸುವ ಬದಲು ಈ ಕಂಪನಿ ಹತ್ತು ನಿಮಿಷದಲ್ಲಿ ಕೊಡಲಿಲ್ಲ, ಮತ್ತೊಂದು ಕಂಪನಿಯಿಂದ ಆರ್ಡರ್ ಮಾಡೋಣ ಎನ್ನುವವರೂ ಇದ್ದಾರೆ. ಇದು ಕಂಪನಿಗಳ ನಡುವೆ ಅನಾರೋಗ್ಯಕರ ಪೈಪೋಟಿಗೆ ಕಾರಣವಾಗುತ್ತದೆ. ಗ್ರಾಹಕರು ಮತ್ತು ಕಂಪನಿಗಳ ನಡುವೆ ಸಿಕ್ಕಿ ನರಳುವುದು ಮಾತ್ರ ಎಂಟೋ ಹತ್ತೋ ಸಾವಿರ ರೂಪಾಯಿಗೆ ದುಡಿಯಲು ಬರುವ ಈ ಹುಡುಗರು! ಮುನ್ನೂರು ರೂಪಾಯಿಗೆ ಪ್ರತಿದಿನ ಜೀವ ಕೈಲಿ ಹಿಡಿದುಕೊಂಡು ತಮ್ಮ ಗಮ್ಯ ತಲುಪಬೇಕಿರುವ ಈ ಹುಡುಗರಿಗಾಗಿ ನಮ್ಮ ಮನಸ್ಸು ಅರೆಕ್ಷಣವಾದರೂ ಮಿಡಿಯದಿದ್ದರೆ ನಾವೆಂಥ ಮನುಷ್ಯರು?!

ಇಂತಹ ಅಪಘಾತಗಳು ಬೇಡುವ ಪ್ರತೀ ಬಲಿಯ ಹಿಂದೆಯೂ ಒಂದು ಬಡ ಕುಟುಂಬದ ಕಥೆಯಿರುತ್ತದೆ. ಬಹುತೇಕ ಸಾಯುವವರು ಹದಿನೆಂಟರಿಂದ ಮೂವತ್ತರ ಒಳಗಿನವರು. ಅವರಲ್ಲಿ ಸಂಜೆ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಯಿರುತ್ತಾನೆ, ಕಾಯಿಲೆಯಿಂದ ಹಾಸಿಗೆ ಹಿಡಿದಿರುವ ಅಮ್ಮನ ಔಷಧಿ ಖರ್ಚಿಗೆ ಅನಿವಾರ್ಯವಾಗಿ ದುಡಿಯಲು ಹೋದ ಹುಡುಗನಿರುತ್ತಾನೆ, ಸಣ್ಣ ಸಂಬಳದ ಅಪ್ಪನಿಗೆ ಹೊರೆಯಾಗುವುದು ಬೇಡ ಎಂದು ಈ ಕೆಲಸ ಮಾಡುತ್ತಿರುವವರಿರುತ್ತಾರೆ. ಇನ್ನು ಡೆಲಿವರಿ ಬಾಯ್ ಎಂದರೆ ಅದು ಥ್ಯಾಂಕ್‌ಲೆಸ್ ಜಾಬ್! ಸಾಮಾನ್ಯ ದಿನವಿರಲಿ, ಹಬ್ಬವಿರಲಿ, ರಜೆಯಿರಲಿ ಬೆನ್ನಿಗೋ ಗಾಡಿಗೋ ಭಾರವಾದ ಬ್ಯಾಗ್ ಹಾಕಿಕೊಂಡು ಕಚೇರಿ, ಮನೆಗಳಿಗೆ ಆಹಾರ ಒದಗಿಸುವ ಈ ಹುಡುಗರು ಪ್ರತೀ ಮಹಾನಗರದ ಅವಿಭಾಜ್ಯ ಅಂಗವೇ ಆಗಿದ್ದಾರೆ. ಗಿಜಿಗುಡುವ ಟ್ರಾಫಿಕ್ಕಿನಲ್ಲಿ, ಯಾವುದೋ ಮೂಲೆಯಲ್ಲಿರುವ ಲೊಕೇಶನ್ ಹುಡುಕುತ್ತ, ಸಮಯ ಆಗಿಹೋಯಿತು ಎಂದು ಪರಿತಪಿಸುವ ಈ ಹುಡುಗರಿಗೆ ಸಂಬಳವೂ ಕೆಲಸಕ್ಕೆ ತಕ್ಕಂತೆ ಸಿಗುವುದಿಲ್ಲ.



ಒಂದೆರಡು ವರ್ಷಗಳ ಹಿಂದೆ, ಮಳೆಯಿಂದ ಸಮಯಕ್ಕೆ ಸರಿಯಾಗಿ ಡೆಲಿವರಿ ಕೊಡಲಾಗದೆ, ಗ್ರಾಹಕ ಆಹಾರ ಪಡೆಯಲು ನಿರಾಕರಿಸಿದ್ದರಿಂದ ಆ ಹಣವನ್ನು ತಾನೇ ಭರಿಸಬೇಕು ಎಂದು ಪಾಕಿಸ್ತಾನದ ಡೆಲಿವರಿ ಬಾಯ್ ಒಬ್ಬ ಅಳುತ್ತ ನಿಂತಿದ್ದ ಚಿತ್ರ ವೈರಲ್ ಆಗಿತ್ತು! ಹತ್ತು ನಿಮಿಷದಲ್ಲಿ ಡೆಲಿವರಿ ನೀಡಲೇಬೇಕೆಂದು ತಮ್ಮ ಹುಡುಗರನ್ನು ಒತ್ತಾಯಿಸುವ ಈ ಕಂಪನಿಗಳು, ರಸ್ತೆ ಸುರಕ್ಷತೆಯ ಬಗ್ಗೆ ಅವರಿಗೆ ಮಾಹಿತಿ ನೀಡುತ್ತೇವೆ, ಜೀವವಿಮೆಯನ್ನೂ ನೀಡುತ್ತೇವೆ, ತಡವಾದರೆ ದಂಡ ಹಾಕುವುದಿಲ್ಲ ಎಂದು ಹೇಳುವುದು ತಮಾಷೆಯೆನಿಸುತ್ತದೆ.

ನಿಜ, ಎಷ್ಟೋ ಹುಡುಗರಿಗೆ ಈ ಡೆಲಿವರಿ ಬಾಯ್ ಕೆಲಸ ಸಣ್ಣ ಮಟ್ಟಿಗಿನ ಸ್ವಾವಲಂಬನೆಗೆ ದಾರಿ ಮಾಡಿಕೊಟ್ಟಿದೆ. ಆದರೆ ಜೀವಹಾನಿಯಾಗದಂತೆ ನೋಡಿಕೊಳ್ಳಬೇಕಾದದ್ದು ಎಲ್ಲರ ಜವಾಬ್ದಾರಿ. ಹತ್ತು ನಿಮಿಷಕ್ಕೆ ಆಹಾರ ತಲುಪಿಸುವ ಸಾಹಸದ ಕೆಲಸಕ್ಕೆ ಕೈಹಾಕದಿರುವುದೇ ಒಳಿತು. ಕಂಪನಿಗಳೂ ಮಾನವೀಯತೆಯಿಂದ ವರ್ತಿಸಬೇಕು. ನಾವೂ ಅಷ್ಟೆ, ತಡವಾದರೆ ಮುಖ ಕೆಂಪಗೆ ಮಾಡುವ ಮುನ್ನ ಕೊಂಚ ಯೋಚಿಸಬೇಕು. ಟಿಪ್ಸ್ ಕೊಡದಿದ್ದರೂ ಪರವಾಗಿಲ್ಲ, ಆರ್ಡರ್ ಕ್ಯಾನ್ಸಲ್ ಮಾಡದಿದ್ದರಾಯಿತು!

ವಾಚಕರ ವಾಣಿ

ಮನ ಕಲಕುವ ಘಟನೆಗೆ ಹೊಣೆ ಯಾರು?

ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ 18 ಬಾಣಂತಿಯರಿಗೆ ಸಿಜೇರಿಯನ್ ಸಂದರ್ಭದಲ್ಲಿ ಹಾಕಿದ್ದ ಹೊಲಿಗೆ ಬಿಚ್ಚಿಕೊಂಡಿದ್ದು, ಕೀವು ತುಂಬಿ ಅವರು ನೋವಿನಿಂದ ನರಳುವಂತೆ ಆಗಿರುವುದು ಕರುಳು ಚುರುಕ್ ಎನ್ನುವಂತಹ ಪ್ರಕರಣ. ಆ ಹೆಣ್ಣುಮಕ್ಕಳು ವಿಪರೀತ ನೋವಿನಿಂದ ಕಣ್ಣೀರಿಡುತ್ತಿರುವ ದೃಶ್ಯ ಮನಕಲಕುವಂಥದ್ದು.

ಆಸ್ಪತ್ರೆ ಸಿಬ್ಬಂದಿಯ ಬೇಜವಾಬ್ದಾರಿಯಿಂದ ಅಮಾಯಕ ಬಾಣಂತಿಯರಿಗೆ ಆದ ತೊಂದರೆಯಿಂದ ಅವರ ಕುಟುಂಬದವರೂ ತೀವ್ರ ನೋವು ಅನುಭವಿಸುವಂತೆ ಆಗಿದೆ. ಇದಕ್ಕೆಲ್ಲ ಹೊಣೆಗಾರರು ಯಾರು? ಈ ಪ್ರಕರಣವನ್ನು ಆರೋಗ್ಯ ಇಲಾಖೆಯು ಗಂಭೀರವಾಗಿ ಪರಿಗಣಿಸಿ, ಕಾರಣರಾದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ರಾಜ್ಯದಾದ್ಯಂತ ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆಯನ್ನು ಸರಿಪಡಿಸಲು ಮುಂದಾಗಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಮತ್ತೆ ಸಿಗಲಿ ರಿಯಾಯಿತಿ

ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ರದ್ದು ಮಾಡಿದ್ದರಿಂದ ರೈಲ್ವೆ ಇಲಾಖೆಯು ಕಳೆದ ಎರಡು ವರ್ಷಗಳಲ್ಲಿ ₹ 1,500 ಕೋಟಿ ಹೆಚ್ಚುವರಿ ವರಮಾನ ಗಳಿಸಿದೆ ಎಂಬ ಸುದ್ದಿ (ಪ್ರ.ವಾ., ಮೇ 17) ಓದಿ ಒಂದು ಕ್ಷಣ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಒಂದೆಡೆ, ಜನಪ್ರತಿನಿಧಿಗಳು ಅಪರೂಪದ ಒಗ್ಗಟ್ಟನ್ನು ಪ್ರದರ್ಶಿಸಿ ತಮ್ಮ ವೇತನ ಮತ್ತು ಇತರ ಭತ್ಯೆಗಳನ್ನು ಯಾವುದೇ ಚರ್ಚೆ ಇಲ್ಲದೆ ಏರಿಸಿಕೊಳ್ಳುತ್ತಾರೆ. ಆಗ ಕೋವಿಡ್ ಅಡ್ಡ ಬರುವುದಿಲ್ಲ. ಹಿರಿಯ ನಾಗರಿಕರಿಗೆ ನೀಡುವ ರಿಯಾಯಿತಿಯನ್ನು 2020ರ ಮಾರ್ಚ್ 20ರಿಂದಲೇ ರದ್ದುಪಡಿಸಲಾಗಿದ್ದು, ಈ ರಿಯಾಯಿತಿಯನ್ನು ಪುನರ್‌ಸ್ಥಾಪಿಸಲು ಒಬ್ಬರೂ ರೈಲ್ವೆ ಇಲಾಖೆಗೆ ಹೇಳದೆ ಜಾಣ ಮೂಕರಾಗುತ್ತಾರೆ.

ಈಗಂತೂ, ಕೋವಿಡ್ ನಿಯಂತ್ರಣದಲ್ಲಿದೆ. ಕೇಂದ್ರವು ಹಿರಿಯ ನಾಗರಿಕರಿಗೆ ರಿಯಾಯಿತಿಯನ್ನು ಪುನಃ ಘೋಷಿಸಿ, ಹಿರಿಯ ನಾಗರಿಕರ ಭಾವನೆಗಳನ್ನು ಗೌರವಿಸುವ ವಿಷಯದಲ್ಲಿ ಬದ್ಧತೆ ತೋರಲಿ.

ವೆಂಕಟೇಶ ಮುದಗಲ್, ಕಲಬುರಗಿ

ಎಣ್ಣೆಕಾಳು: ಬೆಂಬಲ ಬೆಲೆ ನಿಗದಿಯಾಗಲಿ

ಹಿಂದಿನ ಕಾಲದಲ್ಲಿ ರೈತರೆಲ್ಲರೂ ಶೇಂಗಾ, ಕುಸುಬೆಯಂತಹ ಎಣ್ಣೆಕಾಳು ಬೆಳೆಗಳನ್ನು ಬೆಳೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ರಸಗೊಬ್ಬರ, ಬಿತ್ತನೆ ಬೀಜ, ಕೂಲಿ ದರ ಹೆಚ್ಚಳವಾಗಿದೆ. ಕೂಲಿಕಾರ್ಮಿಕರ ಸಮಸ್ಯೆ ಇದೆ. ಎಣ್ಣೆಕಾಳು ಬೆಳೆಗಳ ಇಳುವರಿ ಕಡಿಮೆ ಮತ್ತು ನಿರ್ವಹಣಾ ವೆಚ್ಚ ಹೆಚ್ಚು. ಇದಕ್ಕೆ ತಕ್ಕಂತೆ ಮಾರುಕಟ್ಟೆಯಲ್ಲಿ ಎಣ್ಣೆಕಾಳು ಬೆಳೆಗಳಿಗೆ ಸೂಕ್ತ ಬೆಲೆ ಸಿಗದಿರುವುದು ಅದರ ಉತ್ಪಾದನೆಗೆ ಹೊಡೆತ ಬಿದ್ದಂತಾಗಿದೆ. ರೈತರು ಕೂಡ ಬೇರೆ ವಾಣಿಜ್ಯ ಬೆಳೆಗಳಿಗೆ ಮೊರೆ ಹೋದರು.

ಸರ್ಕಾರ ಬೆಂಬಲ ಬೆಲೆ ನಿಗದಿ ಮಾಡಿ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡಿದರೆ ಮಾತ್ರ ದೇಶದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಬಹುದು ಮತ್ತು ಅಡುಗೆಎಣ್ಣೆ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಬಹುದು.

ಸಿದ್ಧನೂರು ದಿಲೀಪ್, ದಾವಣಗೆರೆ

ಕಪ್ಪುಹಣ: ದಶಕಗಳ ಇತಿಹಾಸ!

'ಕಪ್ಪುಹಣವು ರಾಷ್ಟ್ರದಲ್ಲಿ ಪ್ರತಿ ಆರ್ಥಿಕ ವ್ಯವಸ್ಥೆಯಾಗಿ ಕೆಲಸ ಮಾಡುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವರಾಗಿದ್ದ ವೈ.ಬಿ.ಚವಾಣ್ ಅವರು ರಾಜ್ಯಸಭೆಯಲ್ಲಿ ಒಪ್ಪಿಕೊಂಡಿದ್ದು, ಅದನ್ನು ಹೊರತೆಗೆಯುವ ಬಗ್ಗೆ ದೀರ್ಘಾವಧಿ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿರುವುದು ಪತ್ರಿಕೆಯ '50 ವರ್ಷಗಳ ಹಿಂದೆ' ಅಂಕಣದಲ್ಲಿ ಪ್ರಕಟವಾಗಿದೆ (ಪ್ರ.ವಾ., ಮೇ 17). ಸ್ವಾತಂತ್ರ್ಯ ಲಭಿಸಿದ ಎರಡೇ ದಶಕಗಳಿಗೆ ಈ ಕಪ್ಪುಹಣದ ಸಮಸ್ಯೆಯನ್ನು ದೇಶ ಎದುರಿಸಬೇಕಾಗಿ ಬಂದಿದ್ದು ಇಂದಿನವರಿಗೆ ಅಚ್ಚರಿಯ ಸಂಗತಿ. ಈಗಲೂ ಸ್ವಿಸ್ ಬ್ಯಾಂಕುಗಳಲ್ಲಿ ಭಾರಿ ಪ್ರಮಾಣದಲ್ಲಿ ಕಪ್ಪುಹಣ ಇದ್ದು, ಹೊರತಂದೇ ಸಿದ್ಧ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದನ್ನು ಜನ ಮರೆತಿಲ್ಲ ಹಾಗೂ ಅದು ಕಾರ್ಯಗತವಾಗಿಲ್ಲ.

ಐವತ್ತು ವರ್ಷಗಳಿಂದಲೂ ಈ ಸಂಬಂಧ ಪ್ರಯತ್ನ ನಡೆಯುತ್ತಿದ್ದರೂ ಅದು ಪೂರ್ಣವಾಗಿಲ್ಲ (ಬಹುಶಃ ಆಗುವುದೂ ಇಲ್ಲ). ಆಳುವ ನಾಯಕರು, ಆಳುವ ಪಕ್ಷಗಳು ಬದಲಾದರೂ ಸಮಸ್ಯೆ ಕೊನೆಗಾಣಲಿಲ್ಲ. ಹಾಗಾದರೆ ಇನ್ನೂ ಎಷ್ಟು ವರ್ಷಗಳ ಕಾಲಾವಕಾಶ ಬೇಕು? ನಾವು ಆ ಕ್ಷಣವನ್ನು ನೋಡುತ್ತೇವೆಯೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಆಕ್ಸಿಜನ್ ದುರಂತ: ಉತ್ತರ ಸಿಗದ ಪ್ರಶ್ನೆಗಳು

ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ದುರಂತ ಸಂಭವಿಸಿ ಒಂದು ವರ್ಷ ಕಳೆದುಹೋಯಿತು. ಅಧಿಕೃತ ಮಾಹಿತಿಯ ಅನುಸಾರವೇ 30ಕ್ಕೂ ಹೆಚ್ಚು ಮಂದಿ ಮೃತರಾದರು. ಹೈಕೋರ್ಟ್ ನೇಮಿಸಿದ ಸಮಿತಿಯ ವರದಿ ಇದನ್ನು ದೃಢೀಕರಿಸಿದೆ. ಸರ್ಕಾರ ಇದನ್ನು ತಿರಸ್ಕರಿಸಿದೆ. ಪ್ರಾಮಾಣಿಕವಾದ ತನಿಖೆಯೇ ನಡೆಯದಿದ್ದುದರಿಂದ ನೈಜ ಚಿತ್ರಣ ಈವರೆಗೂ ತಿಳಿದಿಲ್ಲ. ಸತ್ತವರ ಕುಟುಂಬಗಳಿಗೆ ಒಂದೆರಡು ಲಕ್ಷ ರೂಪಾಯಿ ಪರಿಹಾರ ನೀಡಿ ಸರ್ಕಾರ ಕೈ ತೊಳೆದುಕೊಂಡಿತು. ಈ ದುರಂತಕ್ಕೆ ಕಾರಣ ಯಾರು? ಆಡಳಿತ ನಿರ್ವಹಣೆಯ ದೋಷ ಏನಿತ್ತು? ವೈದ್ಯಕೀಯ ನಿರ್ಲಕ್ಷ್ಯ ಎಷ್ಟಿತ್ತು? ನೊಂದ ಕುಟುಂಬಗಳ ಪರಿಸ್ಥಿತಿ ಹೇಗಿದೆ? ತಪ್ಪಿತಸ್ಥರಿಗೆ (ಕಂಡುಹಿಡಿದಿದ್ದರೆ) ಶಿಕ್ಷೆ ಆಗಿದೆಯೇ ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ.

ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸುವ ದಿಸೆಯಲ್ಲಿ ಸ್ಥಳೀಯ ಶಾಸಕರು, ಸಂಸದರು, ರಾಜಕೀಯ ನಾಯಕರು ಯಾವ ಕ್ರಮ ಕೈಗೊಂಡಿದ್ದಾರೆ? ಹತ್ತಾರು ಅಮಾಯಕ ಬಡವರ ಜೀವಹಾನಿಯಾದ ಪ್ರಕರಣದ ತನಿಖೆಗೆ ಒಂದು ವರ್ಷ ಬೇಕೇ? ಚಾಮರಾಜನಗರ ಜಿಲ್ಲಾಸ್ಪತ್ರೆಯ ಯಾವ ವೈದ್ಯರು, ಅಧಿಕಾರಿಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ? ಜಿಲ್ಲಾಡಳಿತದ ಯಾವ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಲಾಗಿದೆ? ಸ್ಥಳೀಯ ಶಾಸಕರು, ಸಂಸದರು ಮತ್ತು ಉಸ್ತುವಾರಿ ಸಚಿವರಿಗೆ ಈ ಘಟನೆಯ ನೆನಪಾದರೂ ಉಳಿದಿದೆಯೇ? ಕೊನೆಯದಾಗಿ, ಇಷ್ಟೆಲ್ಲಾ ಪ್ರಶ್ನೆಗಳನ್ನು ಯಾರು, ಯಾರಲ್ಲಿ, ಹೇಗೆ ಕೇಳಿದರೆ ನೊಂದವರಿಗೆ ನ್ಯಾಯ ದೊರೆಯಲು ಸಾಧ್ಯ?


ನಾ.ದಿವಾಕರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಅವರ ಭಾಷಣವೊಂದರ ಬರಹರೂಪವನ್ನು ಹತ್ತನೇ ತರಗತಿಯ ಪಠ್ಯದಲ್ಲಿ ಸೇರಿಸಲಾಗಿದೆ. ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಶಿಫಾರಸಿನಂತೆ ಈ ಕ್ರಮ ಕೈಗೊಳ್ಳಲಾಗಿದೆ. ಜಿ.ರಾಮಕೃಷ್ಣ ಅವರು ಭಗತ್ ಸಿಂಗ್ ಬಗ್ಗೆ ಬರೆದಿರುವ ಲೇಖನವು ಈ ಹಿಂದೆ ಪಠ್ಯದಲ್ಲಿ ಇತ್ತು. ಅದನ್ನು ಕೈಬಿಡಲಾಗಿದೆ ಎಂದು ಆರೋಪಿಸಲಾಗಿದೆ. ಹೆಡಗೇವಾರ್ ಭಾಷಣದ ಬರಹರೂಪವನ್ನು ಪಠ್ಯದಲ್ಲಿ ಸೇರಿಸಿದ್ದಕ್ಕೆ ವ್ಯಾಪಕ ಪರ ಮತ್ತು ವಿರೋಧ ವ್ಯಕ್ತವಾಗಿದೆ. ಹೆಡಗೇವಾರ್ ಭಾಷಣ ಮತ್ತು ಪಠ್ಯಕ್ಕೆ ಅದನ್ನು ಸೇರಿಸಿದ್ದಕ್ಕೆ ವ್ಯಕ್ತವಾದ ಕೆಲವು ಅಭಿಪ್ರಾಯಗಳು ಇಲ್ಲಿವೆ:

ಪಠ್ಯದಲ್ಲಿ ಹೆಡಗೇವಾರ್ ಪರ–ವಿರೋಧದ ಪರಾಕಾಷ್ಠೆ

‘ಪ್ರಾದೇಶಿಕ ಕನ್ನಡ ಪ್ರಜ್ಞೆಗೆ ಮಾಡಿದ ಅವಮಾನ’



ಪತ್ರಕರ್ತ ಪಿ.ಲಂಕೇಶ್, ಸಾರಾ ಅಬೂಬಕ್ಕರ್ ಹಾಗೂ ಜಿ.ರಾಮಕೃಷ್ಣ ಅವರ ಪಠ್ಯಗಳನ್ನು ಕೈಬಿಟ್ಟಿರುವುದು ಪ್ರಾದೇಶಿಕ ಕನ್ನಡ ಪ್ರಜ್ಞೆಗೆ ಮಾಡಿದ ಅವಮಾನ.

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಕ್ಷೇತ್ರದಲ್ಲಿ ಪ್ರಾದೇಶಿಕ ಅಸ್ಮಿತೆ ಹಾಗೂ ಅನನ್ಯತೆ ಕಾಪಾಡಿಕೊಳ್ಳುವುದು ಶಿಕ್ಷಣದ ಧರ್ಮ. ಅದಕ್ಕೆ ಚ್ಯುತಿ ಬರುವ ರೀತಿಯಲ್ಲಿ ಪಠ್ಯಗಳನ್ನು ತಿರುಚಲಾಗಿದೆ, ಸೇರಿಸಲಾಗಿದೆ ಹಾಗೂ ಕೈಬಿಡಲಾಗಿದೆ. ಇದು ಕನ್ನಡಿಗರಿಗೆ ಮಾಡಿದ ದ್ರೋಹ.

ಹೆಡಗೇವಾರ್ ಅವರ ಭಾಷಣ ಸೇರ್ಪಡೆ ಮಾಡಿ, ಭಗತ್ ಸಿಂಗ್‌ಗೆ ಸಂಬಂಧಿಸಿದ ಪಠ್ಯ ಕೈಬಿಟ್ಟಿರುವುದು ಅಪಾಯಕಾರಿ ಬೆಳವಣಿಗೆ. ಭಗತ್ ಸಿಂಗ್ ಸ್ವಾತಂತ್ರ್ಯ ಹೋರಾಟಗಾರ. ಹೆಡಗೇವಾರ್ ಆರ್‌ಎಸ್‌ಎಸ್ ಕಟ್ಟಿಕೊಂಡಿದ್ದವರು. ಆರ್‌ಎಸ್‌ಎಸ್ ಎನ್ನುವುದು ಬಹುತ್ವ ಭಾರತವನ್ನು ಗೌರವಿಸುವುದಲ್ಲ. ಪಠ್ಯದ ಮೂಲಕ ಹೆಡಗೇವಾರ್ ಬಗ್ಗೆ ಹೇಳುತ್ತಲೇ ಎಳೆಯ ಮಕ್ಕಳಿಗೆ ಆರ್‌ಎಸ್‌ಎಸ್ ಕುರಿತು ಪರಿಚಯಿಸುವ ಹುನ್ನಾರ ಇದರ ಹಿಂದೆ ಅಡಗಿದೆ. ಇದು ಆರ್‌ಎಸ್‌ಎಸ್‌ನವರ ರಹಸ್ಯ ಕಾರ್ಯಸೂಚಿ.

ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಸಾಹಿತಿ

ಅಮರ ಹುತಾತ್ಮ ಸರ್ದಾರ್ ಭಗತ್ ಸಿಂಗ್ ಅವರನ್ನು ಬಿಜೆಪಿ ಇಷ್ಟೊಂದು ದ್ವೇಷಿಸುವುದೇಕೆ? ಶಾಲಾ ಪಠ್ಯಪುಸ್ತಕಗಳಿಂದ ಭಗತ್ ಸಿಂಗ್ ಅವರ ಹೆಸರನ್ನು ತೆಗೆದುಹಾಕಿದ್ದು, ಅವರ ತ್ಯಾಗಕ್ಕೆ ಮಾಡಿದ ಅವಮಾನ. ಹುತಾತ್ಮರಿಗೆ ಮಾಡುವ ಇಂತಹ ಅಪಮಾನವನ್ನು ದೇಶವು ಸಹಿಸುವುದಿಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

‘ಇದು ಇಷ್ಟಕ್ಕೆ ನಿಲ್ಲುವುದಿಲ್ಲ’



ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷನನ್ನಾಗಿ ಕೀಳು ಅಭಿರುಚಿಯ ರೋಹಿತ್ ಚಕ್ರತೀರ್ಥ ನೇಮಕವಾದಾಗಲೇ ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಉದ್ದೇಶ ಸ್ಪಷ್ಟವಾಗಿತ್ತು. ಇದಕ್ಕೆ ರಾಜ್ಯದ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದಷ್ಟೇ ಈಗಿರುವ ಪ್ರಶ್ನೆ.

ಇದು ಯೋಜಿತ ನಿರ್ಧಾರ. ಇದರ ಹಿಂದೆ ಸಾಕಷ್ಟು ಶಕ್ತಿಗಳು ಕೆಲಸ ಮಾಡಿವೆ. ಇದನ್ನು ಹೇಗೆ ತಡೆಯಬೇಕು ಎಂಬುದನ್ನು ಕಾಲವೇ ಹೇಳಬೇಕು. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ಅವರು ಇನ್ನೂ ಅತಿರೇಕಕ್ಕೆ ಹೋಗುತ್ತಾರೆ. ತಾಜ್‌ಮಹಲ್ ಕೆಡವಿದರೂ ಅಚ್ಚರಿಪಡಬೇಕಿಲ್ಲ.

ಕುವೆಂಪು ಅವರನ್ನು ಅವಮಾನಿಸಿದವನನ್ನೇ ಹುಡುಕಿ ಸಮಿತಿಯ ಅಧ್ಯಕ್ಷನನ್ನಾಗಿ ನೇಮಿಸುತ್ತಾರೆ ಎಂದರೆ ಅರ್ಥವೇನು? ಚಕ್ರತೀರ್ಥನಿಗಿಂತಲೂ ಹೆಚ್ಚು ತಿಳಿದುಕೊಂಡಿರುವವರು ಬಲಪಂಥೀಯರಲ್ಲಿ ಯಾರೂ ಇಲ್ಲವೇ?

ಪ್ರೊ. ಪುರುಷೋತ್ತಮ ಬಿಳಿಮಲೆ, ಲೇಖಕ

‘ಮಕ್ಕಳ ಮನಸ್ಸನ್ನು ಒಡೆಯಲಾಗುತ್ತಿದೆ’



‘ಶಾಲಾ–ಕಾಲೇಜುಗಳನ್ನು ಪವಿತ್ರ ಸ್ಥಳಗಳು ಎಂದು ಇತ್ತೀಚಿನ ದಿನಗಳವರೆಗೂ ಕರೆಯಲಾಗುತ್ತಿತ್ತು. ಆದರೆ, ವಿದ್ಯಾಸಂಸ್ಥೆಗಳ ಒಳಗಡೆಯೇ ಕೋಮುವಾದವನ್ನು ದೊಡ್ಡ ಪ್ರಮಾಣದಲ್ಲಿ ಬಿತ್ತರಿಸಲಾಗುತ್ತಿದೆ. ಮಕ್ಕಳ ಮನಸ್ಸನ್ನು ಒಡೆಯಲಾಗುತ್ತಿದೆ. ಧರ್ಮದ ಅಮಲನ್ನು ಮಕ್ಕಳಲ್ಲಿ ತುಂಬುತ್ತಾ ಹೋದರೆ, ಕೋಮುವಾದದ ವಿಚಾರಧಾರೆಯನ್ನು ಬಿತ್ತರಿಸಿದವರನ್ನೇ ನಾಯಕರು ಎಂದು ಬಿಂಬಿಸಿದರೆ ಅದರ ಪರಿಣಾಮ ಕ್ರೂರ ಆಗುತ್ತದೆ. ಭಾರತೀಯತೆ ಎನ್ನುವ ಪರಿಕಲ್ಪನೆ ಆದರ್ಶದ ಮಟ್ಟದಲ್ಲಿಯೂ ಕುಸಿದು ಹೋದರೆ ಭಾರತದ ಭವಿಷ್ಯ ಅಂಧಕಾರಕ್ಕೆ ಹೊಗಲಿದೆ. ಶಾಲಾ–ಕಾಲೇಜುಗಳನ್ನು ‘ಸರ್ವಜನಾಂಗದ ಶಾಂತಿಯ ತೋಟ’ವಾಗಿ ಉಳಿಸಿಕೊಳ್ಳಲು ಅವಕಾಶ ನೀಡಬೇಕು. ಆಗ ಮಾತ್ರ ದೇಶಕ್ಕೆ ಭವಿಷ್ಯ ಇರುತ್ತದೆ.’

ವಿನಯಾ ಒಕ್ಕುಂದ, ಲೇಖಕಿ

• ಕೇಶವ ಬಲಿರಾಮ್ ಹೆಡಗೇವಾರ್

ನಿಜವಾದ ಆದರ್ಶ ಪುರುಷ ಯಾರಾಗಬೇಕು?

ನನ್ನ ಗೆಳೆಯರು ನನಗೆ ಬಗೆ ಬಗೆಯ ಪ್ರಶ್ನೆಗಳನ್ನು ಹಾಕುವುದುಂಟು. ಅವುಗಳಲ್ಲೊಂದು: ನಾವು ಇನ್ನು ಮುಂದೆ ಇಟ್ಟುಕೊಳ್ಳಬೇಕಾದ ಆದರ್ಶ ಯಾವುದು? ತತ್ವವೇ ಅಥವಾ ವ್ಯಕ್ತಿಯೇ? ಯಾರಾದರೊಬ್ಬ ವ್ಯಕ್ತಿಯನ್ನೇ ಆದರ್ಶವೆಂದು ನಾವು ಭಾವಿಸುವುದಾದರೆ, ಆತ ಯಾರು?

ತತ್ವವೇ ಎಂದೆಂದೂ ನಮ್ಮ ಆದರ್ಶವಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ತತ್ವದ ಪ್ರತಿಪಾದನೆಯು ಎಷ್ಟು ಸವಿ ಅನಿಸುತ್ತದೆಯೋ ಅದನ್ನು ಆಚರಣೆಯಲ್ಲಿ ತರುವುದು ಅಷ್ಟೇ ಕಠಿಣ. ಸಮಾಜದಲ್ಲಿ ಮೂರ್ತಿಪೂಜೆಯು ರೂಢಿಯಲ್ಲಿ ಬಂದಿರುವುದಕ್ಕೂ ಇದೇ ಕಾರಣ. ವಾಸ್ತವವಾಗಿ ಕಲ್ಲಿನಲ್ಲಿ ಭಗವಂತ ಇದ್ದಾನೆಯೆ? ಅದೃಶ್ಯ, ಅವ್ಯಕ್ತ ಹಾಗೂ ಅಸ್ಪಷ್ಟ ವಿಶ್ವಚಾಲಕ ಶಕ್ತಿಯನ್ನು ನಿರ್ಗುಣ ಮತ್ತು ನಿರಾಕಾರ ರೂಪದಲ್ಲಿ ಪೂಜೆ ಮಾಡುವುದು ಎಲ್ಲರಿಗೂ ಸಾಧ್ಯವಿಲ್ಲ. ಆದ್ದರಿಂದ ಆ ವಿಶ್ವವ್ಯಾಪೀ ಶಕ್ತಿಯದೇ ದೃಶ್ಯರೂಪವಾಗಿ ಭಾವಿಸಿ ಮೂರ್ತಿಯನ್ನು ಜನರು ಪೂಜಿಸುತ್ತಾರೆ. ಆದರೂ ಮೂರ್ತಿ ಪೂಜೆಯೇ ಧರ್ಮದ ಜೀವಾಳವಲ್ಲ. ಮೂರ್ತಿಪೂಜೆ ಮಾಡುವುದು, ಆ ಮೂರ್ತಿ ಸುಂದರವಾಗಿದೆ, ಲಕ್ಷಣವಾಗಿದೆ ಎಂದಾಗಲೀ ಉತ್ತಮ ಕಲೆಯ ಪ್ರತೀಕ ಎಂದಾಗಲೀ ಅಲ್ಲ. ಆದರೆ ಒಂದು ವಿಶಿಷ್ಟ ತತ್ವವು ಆ ಮೂರ್ತಿಯ ರೂಪದಲ್ಲಿ ಗೋಚರವಾಗುತ್ತದೆ ಎಂದೇ ಅದಕ್ಕೆ ಪೂಜೆ ಸಲ್ಲುತ್ತದೆ. ಜನಸಾಮಾನ್ಯರಿಗೆ ವಿಶ್ವಶಕ್ತಿಯ ನಿರಾಕಾರ ಸ್ವರೂಪದ ಅರಿವು ಮೂಡಿಸಲು ಮೂರ್ತಿ ಪೂಜೆಯು ಒಂದು ಸುಲಭ ಸಾಧನ, ಅಷ್ಟೆ.

ಒಬ್ಬ ಆದರ್ಶ ವ್ಯಕ್ತಿಯ ಬಗ್ಗೆ ಚಿಂತಿಸುವಾಗಲೂ ಇದೇ ನಮ್ಮ ದೃಷ್ಟಿ. ನಮ್ಮಿಂದ ಎಂದೂ ದೂರವಾಗದಂಥ ಹಾಗೂ ನಾವೂ ಆತನಿಂದ ದೂರ ಹೋಗದಂಥ ವ್ಯಕ್ತಿಯೇ ನಮ್ಮ ಆದರ್ಶ ಆಗಬಲ್ಲನು. ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದೂ, ಸರ್ವಥಾ ಪ್ರಮಾದಾತೀತನೆಂದೂ ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬೇಕು. ಇಲ್ಲವಾದಲ್ಲಿ ಆದರ್ಶವೆಂದು ಭಾವಿಸಲ್ಪಟ್ಟ ವ್ಯಕ್ತಿಯಿಂದ ಏನಾದರೂ ತಪ್ಪಾದರೆ ನಾವು ಬೇರೊಬ್ಬನನ್ನು ಹುಡುಕಬೇಕಾಗುತ್ತದೆ. ಆ ಎರಡನೆಯವನಲ್ಲಿ ದೋಷ ಕಂಡುಬಂದರೆ, ಅವನ ಬಗ್ಗೆ ಇರುವ ಶ್ರದ್ಧೆ ಸಹ ಹಾರಿಹೋಗುವುದು ಸ್ವಾಭಾವಿಕ. ಆಗ ಪುನಃ ನಾವು ಮೂರನೆಯ ವ್ಯಕ್ತಿಯನ್ನು ಹುಡುಕುವಂತೆ ಆದೀತು. ಹೀಗಾದರೆ ನಿತ್ಯವೂ ಹೊಸ ಹೊಸ ವ್ಯಕ್ತಿಯನ್ನು ಆದರ್ಶಕ್ಕಾಗಿ ಹುಡುಕುತ್ತ ಹೊರಡಬೇಕಾಗುತ್ತದೆ. ಆದ್ದರಿಂದ ಆದರ್ಶ ವ್ಯಕ್ತಿಯನ್ನು ಕುರಿತು ಯೋಚಿಸುವಾಗ ದೋಷರಹಿತ ವ್ಯಕ್ತಿಯನ್ನಾರಿಸುವುದೇ ಯೋಗ್ಯ. ಅಷ್ಟೇ ಅಲ್ಲ, ನಾವು ಆದರ್ಶವೆಂದು ಭಾವಿಸುವ ಎಲ್ಲ ಗುಣಗಳೂ ಆ ವ್ಯಕ್ತಿಯಲ್ಲಿ ನಮಗೆ ಎದ್ದು ಕಾಣಬೇಕು.

ನಾವು ಧ್ವಜವನ್ನೇ ಗುರುವೆಂದು ಭಾವಿಸಿ ಗುರುಪೂರ್ಣಿಮಾ ದಿನದಂದು ಅದನ್ನು ಪೂಜಿಸುತ್ತೇವೆ. ನಾವು ಯಾವ ವ್ಯಕ್ತಿಯನ್ನೂ ಪೂಜಿಸುವುದಿಲ್ಲ. ಏಕೆಂದರೆ ಯಾರೇ ಆಗಲಿ ಅವರು ತಮ್ಮ ಮಾರ್ಗದಲ್ಲಿ ಅಚಲರಾಗಿಯೇ ಇದ್ದಾರು ಎಂಬ ಭರವಸೆಯಾದರೂ ಏನು? ಕೇವಲ ತತ್ವ ಒಂದೇ ಆ ಅಚಲ ಪದವಿಯಲ್ಲಿ ಇರಬಲ್ಲದು. ಅದನ್ನು ಧ್ವಜವು ಸಾಂಕೇತಿಸುವುದು. ಯಾವ ಧ್ವಜವನ್ನು ನೋಡಿದೊಡನೆ ನಮ್ಮ ರಾಷ್ಟ್ರದ ಸಮಸ್ತ ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಗಳು ನಮ್ಮ ಕಣ್ಣಿಗೆ ಕಟ್ಟುತ್ತವೆಯೋ, ಯಾವುದನ್ನು ಕಂಡ ಕೂಡಲೇ ಹೃದಯದ ಭಾವನೆಗಳು ಉಕ್ಕಿ ಬರುತ್ತವೆಯೋ, ಹೃದಯದಲ್ಲಿ ಅಪೂರ್ವ ಸ್ಫೂರ್ತಿಯ ಸಂಚಾರವಾಗುತ್ತದೆಯೋ ಅಂತಹ ಧ್ವಜವನ್ನೇ ನಾವು ನಮ್ಮ ಗುರುವೆಂದು ಭಾವಿಸುತ್ತೇವೆ.

ಮಹಾಪುರುಷರ ವಿಷಯದಲ್ಲಿ ಕೆಲವು ವಿಚಿತ್ರ ಭಾವನೆಗಳು ಸಮಾಜದಲ್ಲಿ ಬೇರೂರಿಬಿಟ್ಟಿವೆ. ಶ್ರೀಕೃಷ್ಣನನ್ನು ಆದರ್ಶ ಎನ್ನಬಹುದಾದಂಥ ಹಲವಾರು ಮಹಾನ್ ಕಾರ್ಯಗಳನ್ನು ಅವನು ತನ್ನ ಜೀವನದಲ್ಲಿ ಸಾಧಿಸಿದ್ದಾನೆ. ಆದರೆ ಶ್ರೀಕೃಷ್ಣನು ತನ್ನ ಜೀವನದಲ್ಲಿ ಮಾಡಿದ ಅದ್ಭುತ ಕಾರ್ಯಗಳನ್ನು ನಮ್ಮ ಕೈಗಳಿಂದ ಮಾಡುವುದು ಅಸಾಧ್ಯ; ಅವನಾದರೋ ದೇವರು, ಪೂರ್ಣಾವತಾರನಾಗಿದ್ದ; ದೇವರ ಅನುಕರಣೆಯನ್ನು ಮನುಷ್ಯರು ಮಾಡಲು ಸಾಧ್ಯವೆ?– ಇತ್ಯಾದಿ ಹಲವಾರು ಭಾವನೆಗಳು ನಮ್ಮ ಸಮಾಜದಲ್ಲಿ ರೂಢವಾಗಿವೆ. ಶ್ರೀಕೃಷ್ಣನಂತಹ ಪೂರ್ಣ ಪುರುಷರನ್ನು ಈಶ್ವರನ ಅಥವಾ ಅವತಾರಿಗಳ ಸಾಲಿಗೆ ತಳ್ಳಿ, ಅವರಂತೆ ನಡೆಯುವುದು ನಮ್ಮ ಶಕ್ತಿಗೆ ನಿಲುಕದ ವಿಷಯವೆಂಬ ಭಾವನೆ ಬಂದಿದೆ. ಶ್ರೀರಾಮ ಶ್ರೀಕೃಷ್ಣರನ್ನು ಪೂಜಿಸುವುದು, ರಾಮಾಯಣ, ಮಹಾಭಾರತ, ಗೀತೆ ಮುಂತಾದ ಶ್ರೇಷ್ಠ ಗ್ರಂಥಗಳನ್ನು ಪಠಿಸುವುದು ಗುಣಗ್ರಹಣಕ್ಕಾಗಿ ಅಲ್ಲ, ಕೇವಲ ಪುಣ್ಯಸಂಚಯಕ್ಕಾಗಿ! ಎಂಥ ಸಂಕುಚಿತ ಯೋಚನೆ ಇದು!

ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಮ್ಮೆ ನಮ್ಮ ಪರಿಚಿತ ಮಹನೀಯರೊಬ್ಬರು ನಮ್ಮಲ್ಲಿ ಬಂದರು. ಅವರು ದಿನನಿತ್ಯ ಸ್ನಾನ, ಸಂಧ್ಯಾವಂದನೆಗಳಾದ ನಂತರ ಅಧ್ಯಾತ್ಮ ರಾಮಾಯಣದ ಒಂದು ಅಧ್ಯಾಯವನ್ನು ಓದುತ್ತಿದ್ದರು. ಒಂದು ದಿನ ನಾನು ಊಟದ ಸಮಯದಲ್ಲಿ, ‘ನೀವು ಈಗಾಗಲೇ ಪಠಿಸಿರುವ ಅಧ್ಯಾಯಗಳನ್ನು ಆಚರಣೆಯಲ್ಲಿ ತರಲು ಯತ್ನಿಸಿರಬೇಕು ಅಲ್ಲವೆ?’ ಎಂದು ಅವರನ್ನು ಕೇಳಿದೆ. ನಾನು ಅಷ್ಟು ಕೇಳಿದ್ದೇ ತಡ ಅವರು ಕೆರಳಿ ಕೆಂಡವಾದರು. ‘ನೀವು ಶ್ರೀರಾಮಚಂದ್ರನ, ಆ ಪ್ರತ್ಯಕ್ಷ ಭಗವಂತನ ಅಪಹಾಸ್ಯ ಮಾಡುವಿರಾ? ಭಗವಂತನ ಗುಣ ಎಂದಾದರೂ ಮನುಷ್ಯನಲ್ಲಿ ಬಂದೀತೆ? ನಾನು ಗುಣಗ್ರಹಣಕ್ಕಾಗಿ ಅಲ್ಲ, ಆದರೆ ಪುಣ್ಯಸಂಚಯ ಹಾಗೂ ಮೋಕ್ಷಪ್ರಾಪ್ತಿಗಾಗಿ ಗ್ರಂಥಪಠಣ ಮಾಡುತ್ತೇನೆ’ ಎಂದರು!

ನಮ್ಮ ಸಮಾಜದ ಅಧಃಪತನಕ್ಕೆ ಕಾರಣವಾದ ಅಂಶಗಳಲ್ಲಿ ಇದೂ ಒಂದು. ವಾಸ್ತವಿಕವಾಗಿ ನಮ್ಮ ಧಾರ್ಮಿಕ ಸಾಹಿತ್ಯದಲ್ಲಿ ಒಂದಕ್ಕಿಂತ ಒಂದು ಶ್ರೇಷ್ಠವಾದ ಗ್ರಂಥಗಳಿವೆ. ನಮ್ಮ ಗತ ಇತಿಹಾಸವಾದರೂ ಅಷ್ಟೇ, ಅತ್ಯಂತ ಮಹತ್ವಪೂರ್ಣವಾಗಿದೆ, ವೀರರಸಪ್ರಧಾನವಾಗಿದೆ. ಹಾಗೆಯೇ ಸ್ಫೂರ್ತಿದಾಯಕವೂ ಆಗಿದೆ. ಆದರೆ ನಾವೆಂದೂ ಅವುಗಳ ಬಗ್ಗೆ ಯೋಗ್ಯ ದೃಷ್ಟಿಯಿಂದ ಯೋಚಿಸಲು ಕಲಿತಿಲ್ಲ. ಎಲ್ಲಿಯಾದರೂ ಯಾರಾದರೊಬ್ಬ ಕರ್ತೃತ್ವವುಳ್ಳ ಅಥವಾ ವಿಚಾರವಂತ ವ್ಯಕ್ತಿ ಜನ್ಮತಾಳಿದರೆ ಸಾಕು, ನಾವು ಆತನನ್ನು ಅವತಾರಿಗಳ ಶ್ರೇಣಿಗೆ ತಳ್ಳಿಬಿಡುತ್ತೇವೆ. ಅವನಿಗೆ ದೇವತ್ವವನ್ನು ಹೊರಿಸಲು ಕಿಂಚಿತ್ತೂ ತಡಮಾಡೆವು. ಈಗಂತೂ ಛತ್ರಪತಿ ಶಿವಾಜಿ ಮತ್ತು ಲೋಕಮಾನ್ಯ ತಿಲಕರನ್ನು ಸಹ ಅವತಾರಿಗಳ ಪಟ್ಟಿಗೆ ಹಾಕಲಾಗಿದೆ. ಶಿವಾಜಿ ಮಹಾರಾಜರನ್ನು ಶ್ರೀ ಶಂಕರರ ಅವತಾರವೆಂದು ಹೇಳಲಾಗುತ್ತಿದೆ. ‘ಶಿವಚರಿತ್ರೆ’ (ಶಿವಾಜಿಯ ಚರಿತ್ರೆ)ಯಲ್ಲಿ ಇದರ ಸಮರ್ಥನೆಗಾಗಿ ಒಂದು ಉಲ್ಲೇಖವನ್ನೂ ಸೇರಿಸಲಾಗಿದೆ! ಬಿಡಿ, ಲೋಕಮಾನ್ಯ ತಿಲಕರು ನಮ್ಮ ಕಾಲದಲ್ಲೇ ಆಗಿಹೋದ ನಾಯಕರು. ಆದರೆ ನಾನೊಮ್ಮೆ ಅವರದೊಂದು ಚಿತ್ರ ನೋಡಿದೆ. ಅದರಲ್ಲಿ ಅವರನ್ನು ಚತುರ್ಭುಜರನ್ನಾಗಿ ಮಾಡಿ, ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಕೊಡಲಾಗಿತ್ತು! ಈ ರೀತಿ ನಮ್ಮ ಮಹಾಪುರುಷರನ್ನು ದೇವತೆಗಳ ಶ್ರೇಣಿಗೆ ತಳ್ಳುವುದು ನಿಜಕ್ಕೂ ಅದೆಷ್ಟು ವಿಚಿತ್ರ! ಮಹಾನ್ ವಿಭೂತಿ ಪುರುಷರು ಕಣ್ಣಿಗೆ ಬೀಳುವುದೇ ತಡ, ಅವರಾಗಲೇ ದೇವಸ್ಥಾನ ಸೇರಿದಂತೆಯೇ ಲೆಕ್ಕ! ಅಲ್ಲಿ ಅವರ ಪೂಜೆಯೇನೋ ಭಾವಭಕ್ತಿಗಳಿಂದ ನಡೆಯುತ್ತದೆ; ಆದರೆ ಅವರ ಗುಣಗಳನ್ನು ಅನುಸರಿಸುವ ಸೊಲ್ಲು ಮಾತ್ರ ಕೇಳುವುದಿಲ್ಲ. ಒಟ್ಟಿನಲ್ಲಿ ನಮ್ಮ ಜವಾಬ್ದಾರಿಯನ್ನು ಬುದ್ಧಿಪೂರ್ವಕವಾಗಿ ದೂರ ಸರಿಸುವಂಥ ಈ ಅದ್ಭುತ ಕಲೆಯನ್ನು ನಾವು ಸೊಗಸಾಗಿ ಸಾಧಿಸಿಕೊಂಡಿದ್ದೇವೆ.

ಆದ್ದರಿಂದ ನಾವು ಯಾರ ಗುಣಗಳನ್ನನುಸರಿಸಲು ಸಾಧ್ಯವೋ ಅಂಥ ನಿರ್ದೋಷ ವ್ಯಕ್ತಿಯನ್ನೇ ಆದರ್ಶವಾಗಿ ಭಾವಿಸಬೇಕಾಗಿದೆ. ಇನ್ನೂ ಪೂರ್ತಿಯಾಗಿ ಅರಳದ ಮೊಗ್ಗುಗಳ ಬದಲು ಪೂರ್ಣ ಅರಳಿದ ಪುಷ್ಪಗಳು ನಮ್ಮ ಆದರ್ಶವಾಗಬೇಕು. ಏಕೆಂದರೆ ಅರೆಬಿರಿದ ಮೊಗ್ಗುಗಳಲ್ಲಿ ಅಕಸ್ಮಾತ್ ಕ್ರಿಮಿಕೀಟಗಳು ಸೇರಿದರೆ ಮುಂದೆ ಅವು ಪೂರ್ಣ ವಿಕಸಿತವಾಗಲಾರವು. ಯಾವ ಪುಷ್ಪವು ಪೂರ್ತಿ ಅರಳಿದೆಯೋ, ನಿಸ್ಸಂದೇಹವಾಗಿಯೂ ಶುದ್ಧವಾಗಿ ಕ್ರಿಮಿರಹಿತವಾಗಿದೆಯೋ ಮತ್ತು ಯಾವುದರ ಒಳಹೊರಗನ್ನು ಚೆನ್ನಾಗಿ ಕಾಣಬಹುದೋ ಅಂಥ ಪುಷ್ಪವನ್ನೇ ಆದರ್ಶವಾಗಿ ಸ್ವೀಕರಿಸುವುದರಿಂದ ನಮ್ಮ ಕಾರಕುಸುಮದಲ್ಲಿಯೂ ನವಚೈತನ್ಯದ ಸೊಬಗು ತುಂಬಿಬಂದೀತು. ಇದನ್ನೇ ಬೇರೆ ಪದಗಳಲ್ಲಿ ಹೇಳುವುದಾದರೆ, ಯಾರ ಜೀವನಕುಸುಮವು ಪ್ರಸನ್ನವಾಗಿ ಪೂರ್ತಿಯಾಗಿ ಅರಳಿದೆಯೋ ಅಕಲಂಕವಾಗಿದೆಯೋ ನಿರ್ಭಿಡೆಯಿಂದ ಸೂರ್ಯಪ್ರಕಾಶಕ್ಕೆ ಮುಖಮಾಡಿ ನಿಂತಿದೆಯೋ, ಯಾರ ಧ್ಯೇಯವು ಶಾಶ್ವತ ಸತ್ಯವಾಗಿದೆಯೋ ಅಂಥ ವ್ಯಕ್ತಿಯನ್ನೇ ನಾವು ಆದರ್ಶವಾಗಿ ಸ್ವೀಕರಿಸಬೇಕು.

‘ಹೆಡಗೇವಾರ್ ಭಾಷಣಕ್ಕೆ ವಿರೋಧ ಬೌದ್ಧಿಕ ಫ್ಯಾಸಿಸಂ ಅಲ್ಲವೇ?’



ಹೆಡಗೇವಾರ್ ಅವರ ಭಾಷಣವನ್ನು ಪಠ್ಯದಲ್ಲಿ ಸೇರಿಸಿರುವುದು ಅಭಿನಂದನೀಯ. 1925ರಲ್ಲಿ ಆರ್‌ಎಸ್‌ಎಸ್ ಸ್ಥಾಪಿಸಿ ‘ವ್ಯಕ್ತಿತ್ವ ನಿರ್ಮಾಣದ ಮೂಲಕ ರಾಷ್ಟ್ರನಿರ್ಮಾಣ’ ಎಂಬ ಉದಾತ್ತ ವಿಷನ್ ಮತ್ತು ಮಿಷನ್ ಎರಡನ್ನೂ ನೀಡಿದ ಪ್ರಯೋಗಶೀಲ ರಾಷ್ಟ್ರಚಿಂತಕರ ಬಗ್ಗೆ ವಿದ್ಯಾರ್ಥಿಗಳು ಓದಬೇಕು.

ಬರಗೂರು ರಾಮಚಂದ್ರಪ್ಪ, ಅಲ್ಲಮಪ್ರಭು ಬೆಟ್ಟದೂರು ಸೇರಿದಂತೆ ಎಡಪಂಥೀಯ ಚಿಂತಕರು ಕಳೆದು ಮೂವತ್ತೈದು ವರ್ಷಗಳಿಗೂ ಹೆಚ್ಚು ಕಾಲ ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದಾರೆ. ಈವರೆಗೆ ಅವರು ರಚಿಸಿರುವ ಪಠ್ಯಪುಸ್ತಕಗಳಲ್ಲಾಗಲೀ ಅವರ ಸ್ವತಂತ್ರ ಕೃತಿಗಳಲ್ಲಾಗಲೀ ಆರ್‌ಎಸ್‌ಎಸ್ ಕುರಿತು ಒಂದಾದರೂ ಒಳ್ಳೆಯ ಅಂಶವನ್ನು ಬರೆದಿದ್ದಾರೆಯೇ?

ಈವರೆಗೆ ಪಠ್ಯ ಪುಸ್ತಕಗಳಲ್ಲಿ ಆರ್‌ಎಸ್‌ಎಸ್ ಚಿಂತನೆಗಳನ್ನು ಸೇರಿಸದೇ ಇದ್ದುದಕ್ಕೆ ಕಾರಣವೇನು? ಬೌದ್ಧಿಕ ಅಸ್ಪೃಶ್ಯತೆ ಒಂದು ಮಾನಸಿಕ ರೋಗವಲ್ಲವೇ? ಈಗ ಹೆಡಗೇವಾರ್ ಅವರ ಭಾಷಣವನ್ನು ಪಠ್ಯದಲ್ಲಿ ಸೇರಿಸಿರುವುದಕ್ಕೆ ವಿರೋಧಿಸುತ್ತಿರುವುದು ಅಸಹಿಷ್ಣುತೆ ಮತ್ತು ಬೌದ್ಧಿಕ ಫ್ಯಾಸಿಸಂ ಅಲ್ಲವೇ?

ಡಾ.ಬಿ.ವಿ. ವಸಂತಕುಮಾರ್
ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ

‘ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿದ್ದರೇ?’



ಆರ್‌ಎಸ್‌ಎಸ್ ಸರಸಂಘಚಾಲಕರಾಗಿದ್ದ ಕೇಶವ ಬಿ. ಹೆಡಗೇವಾರ್ ಅವರ ಭಾಷಣವನ್ನು ರಾಜ್ಯ ಸರ್ಕಾರವು 10ನೇ ತರಗತಿ ಪಠ್ಯಪುಸ್ತಕದಲ್ಲಿ ಸೇರಿಸಿದೆ. ಅವರೇನು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜೈಲಿಗೆ ಹೋಗಿದ್ದರೇ? ದೇಶದ ಏಕತೆ, ಬಡವರ ಹಿತ, ಆರ್ಥಿಕ ಬೆಳವಣಿಗೆ ಸೇರಿದಂತೆ ದೇಶ ಕಟ್ಟುವ ವಿಚಾರದಲ್ಲಿ ಹೆಡಗೇವಾರ್ ಕೊಡುಗೆ ಏನೂ ಇಲ್ಲ. ಆದರೂ, ತಮ್ಮದೇ ಸರ್ಕಾರ ಇದೆಯೆಂದು ಆರ್‌ಎಸ್‌ಎಸ್ ಮುಖಂಡರ ವಿಚಾರಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡಿರುವುದು ಸರಿಯಲ್ಲ.

ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ಪಠ್ಯದಲ್ಲಿ ಸೇರಿಸುವುದಕ್ಕೆ ಸಾಕಷ್ಟು ಕಾರಣಗಳಿವೆ. ಗಾಂಧೀಜಿ ದೇಶದ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದರು. ನೆಹರೂ ಅವರು ಪ್ರಧಾನಿಯಾದ ಬಳಿಕ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ದರು. ಅಂಬೇಡ್ಕರ್ ಅವರು ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಅಪೂರ್ವ ಸಂವಿಧಾನವನ್ನು ನೀಡಿದರು.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 123

ಬ್ರಹ್ಮನ ಮಾನಸಪುತ್ರಿ ಸಂಧ್ಯೆ ಜನನ

ಬ್ರಹ್ಮ ಹೇಳಿದ ರುದ್ರ-ದಾಕ್ಷಾಯಿಣಿಯರ ಸಂಕ್ಷಿಪ್ತ ಕಥೆಯಿಂದ ತೃಪ್ತನಾಗದ ನಾರದ ವಿಸ್ತಾರವಾಗಿ ಹೇಳುವಂತೆ ಕೋರುತ್ತಾನೆ. ಮಹಾಮಹಿಮನಾದ ಬ್ರಹ್ಮನೇ! ಶುಭಕರವಾದ ಶಿವಕಥೆಯನ್ನು ನಿನ್ನ ಮುಖಕಮಲದಿಂದ ಕೇಳಿದಷ್ಟೂ ನನಗೆ ತೃಪ್ತಿ ಆಗುತ್ತಿಲ್ಲ. ಆದುದ ರಿಂದ ಸತೀದೇವಿಯ ಚರಿತ್ರೆಯಿಂದೊಡಗೂಡಿರುವ ಶಿವ–ಪಾರ್ವತಿಯರ ಕಥೆಯನ್ನು ಇನ್ನೂ ವಿಸ್ತಾರವಾಗಿ ಹೇಳು. ಸತೀದೇವಿಯು ದಕ್ಷಪತ್ನಿಯಲ್ಲಿ ಹೇಗೆ ಜನಿಸಿದಳು? ಸತೀದೇವಿಯನ್ನು ಶಿವ ಮದುವೆ ಮಾಡಿಕೊಳ್ಳಲು ಹೇಗೆ ಮನಸ್ಸು ಮಾಡಿದ? ದಕ್ಷನ ಮೇಲಿನ ಕೋಪದಿಂದ ಸತೀದೇವಿಯು ಅಗ್ನಿಗಾಹುತಿಯಾಗಿ ಪರಬ್ರಹ್ಮನಾದ ಶಿವನಲ್ಲಿ ಲಯವನ್ನು ಹೊಂದಿದ ನಂತರ ಮತ್ತೆ ಹೇಗೆ ಹಿಮವಂತನ ಪುತ್ರಿಯಾಗಿ ಜನಿಸಿದಳು? ವಿರಾಗಿ ಶಿವನನ್ನು ವರಿಸಲು ಪಾರ್ವತಿಯು ಹೇಗೆ ಕಠಿಣವಾಗಿ ತಪಸ್ಸನ್ನು ಆಚರಿಸಿದಳು? ಅವಳ ಮದುವೆ ಶಿವನೊಂದಿಗೆ ಹೇಗೆ ಆಯಿತು? ಮನ್ಮಥವೈರಿಯಾದ ಶಿವನು ಪಾರ್ವತಿಯ ಅರ್ಧಾಂಗಿಯಾದ ಬಗೆ ಹೇಗೆ? ಹೇಳು’ ಎಂದು ಪ್ರಾರ್ಥಿಸುತ್ತಾನೆ.

ಆಗ ಬ್ರಹ್ಮ ‘ಎಲೈ ನಾರದಮುನಿ! ಶಿವಪಾರ್ವತಿಯರ ಮಹಾಕಥೆಯನ್ನು ಹೇಳುವೆನು ಕೇಳು. ಈ ಕಥೆಯು ಶುಭವಾದುದು, ದಿವ್ಯವಾದುದು, ರಹಸ್ಯವಾದುದು. ಬಹಳ ಹಿಂದೆ ವಿಷ್ಣುವಿನ ಕೋರಿಕೆ ಮೇರೆಗೆ ಶಿವ ತನ್ನ ಕಥೆಯನ್ನು ಹೇಳಿದ್ದ, ಅದನ್ನು ವಿಷ್ಣು ನನಗೆ ಹೇಳಿದ್ದ. ಅದನ್ನ ಈಗ ನಿನಗೆ ಹೇಳುವೆನು. ಅದು ತುಂಬಾ ಪುರಾತನವಾದ ಮತ್ತು ಸಕಲ ಇಷ್ಟಾರ್ಥಗಳನ್ನುಂಟು ಮಾಡುವ ಶಿವಮಹಾಪುರಾಣ’ ಎಂದು ಸತಿದೇವಿಯ ಕಥೆಯನ್ನು ವಿಸ್ತಾರವಾಗಿ ಹೇಳತೊಡಗುತ್ತಾನೆ.

ಹಿಂದೆ ಎಂದರೆ ಸೃಷ್ಟಿಗೆ ಪೂರ್ವದಲ್ಲಿ ಶಿವನು ನಿರ್ಗುಣವೂ ನಿರಾಕಾರವೂ ಆದ ಪರಬ್ರಹ್ಮಸ್ವರೂಪದಿಂದ ಎಲ್ಲೆಲ್ಲಿಯೂ ವ್ಯಾಪಿಸಿದ್ದ. ಆ ಬ್ರಹ್ಮ ಸ್ವರೂಪಕ್ಕೆ ಗುಣಸಂಬಂಧವಾಗಲಿ, ಆಕಾರಾದಿಗಳಾಗಲಿ, ಶಕ್ತಿಗಳಾಗಲಿ ಯಾವುದೂ ಇರಲಿಲ್ಲ. ಪ್ರಕೃತಿ ಪುರುಷಾದಿ ಭೇದಭಾವಗಳೂ ಇರಲಿಲ್ಲ. ಆತ ಪರಬ್ರಹ್ಮ ಎಂಬ ಹೆಸರಿನಿಂದ ಸಚ್ಚಿದಾನಂದ ಸ್ವರೂಪನಾಗಿ ಪ್ರಕಾಶಿಸುತ್ತಿದ್ದ. ಇಂಥ ಶಿವನು ಸೃಷ್ಟಿ ಕಾಲದಲ್ಲಿ ಯಾವ ವಿಕಾರವಿಲ್ಲದವನಾದರೂ ತನ್ನ ಮಾಯೆಯಿಂದ ಸಗುಣನೂ ದಿವ್ಯವಾದ ಆಕಾರವುಳ್ಳವನೂ ಸರ್ವೋತ್ಕೃಷ್ಟನೂ ಆದಂತಹ ಈಶ್ವರನಾದನು.

ಆ ಈಶ್ವರನ ಶರೀರದ ಎಡಭಾಗದಿಂದ ವಿಷ್ಣು ಜನಿಸಿದರೆ, ಬಲಭಾಗದಿಂದ ಬ್ರಹ್ಮನಾದ ನಾನು ಜನಿಸಿದೆ. ನಾನು ಜಗತ್ತಿನ ಸೃಷ್ಟಿಕರ್ತನಾದರೆ, ವಿಷ್ಣು ಪಾಲನಾಕರ್ತನಾದ. ರುದ್ರ ಪ್ರಳಯಕರ್ತನಾದ. ಹೀಗೆ ಶಿವನೇ ತನ್ನ ಸ್ವರೂಪವನ್ನು ಬ್ರಹ್ಮ-ವಿಷ್ಣು-ರುದ್ರರೆಂಬ ಮೂರು ರೂಪಗಳಾಗಿ ಪರಿವರ್ತಿಸಿದ. ಲೋಕಪಿತಾಮಹನೆನಿಸಿದ ನಾನು ಸದಾಶಿವನನ್ನು ಆರಾಧಿಸಿ, ಅವನ ಅನುಗ್ರಹದಿಂದ ದೇವತೆಗಳು, ರಾಕ್ಷಸರು, ಮನುಷ್ಯರು ಮೊದಲಾದ ಪ್ರಜೆಗಳನ್ನು ಸೃಜಿಸಿದೆ. ದಕ್ಷ ಮತ್ತಿತರ ಪ್ರಜಾಪತಿಗಳನ್ನು, ದೇವತೆಗಳನ್ನೂ ಸೃಷ್ಟಿಸಿ ಅದರಿಂದ ನಾನೇ ಸರ್ವಶ್ರೇಷ್ಠನೆಂದು ಗರ್ವಿಷ್ಠನಾದೆ.

‘ಮರೀಚಿ, ಅತ್ರಿ, ಪುಲಹ, ಪುಲಸ್ತ್ಯ, ಅಂಗಿರಸ್ಸು, ಕ್ರತುಮುನಿ, ವಸಿಷ್ಠ, ನಾರದ, ದಕ್ಷ, ಭೃಗು ಎಂಬ ಒಂಬತ್ತು ಪ್ರಜಾಪತಿಗಳನ್ನು ಸೃಷ್ಟಿಸಿದೆ. ಇವರೆಲ್ಲ ನನ್ನ ಮಾನಸಪುತ್ರರು. ಆ ಸಮಯದಲ್ಲಿಯೇ ನನ್ನ ಮನಸ್ಸಿನಿಂದ ಸುಂದರವಾದ ರೂಪವುಳ್ಳ ಓರ್ವ ಉತ್ತಮ ಸ್ತ್ರೀ ಜನಿಸಿದಳು. ಮುಂದೆ ಆ ಸ್ತ್ರೀ ಸಂಧ್ಯೆ ಎಂದು ಪ್ರಸಿದ್ಧಳಾದಳು. ಅವಳಿಗೆ ‘ಸಾಯಂ ಸಂಧ್ಯಾ’ ಮತ್ತು ‘ಜಯಂತಿಕಾ’ ಎಂಬ ಹೆಸರುಗಳೂ ಇವೆ. ಆ ರಮಣಿಯು ಮುನಿಗಳ ಮನಸ್ಸನ್ನೂ ಅಪಹರಿಸುವಂತಹ ಸುಂದರಿಯಾಗಿದ್ದಳು. ಅಂತಹ ಸುಂದರಿ ಮೂರು ಲೋಕಗಳಲ್ಲಿಯೂ ಇರಲಿಲ್ಲ. ಹಿಂದೆಯೂ ಹುಟ್ಟಿರಲಿಲ್ಲ, ಮುಂದೆಂದೂ ಜನಿಸಲಾರಳು ಎಂಬಂಥ ಸುಂದರಿಯಾದ ಆ ಸಂಧ್ಯೆಯನ್ನು ನೋಡಿ ನಾನೂ ಮತ್ತು ನನ್ನ ಪುತ್ರರಾದ ದಕ್ಷ, ಮರೀಚಿ ಮೊದಲಾದವರು ಕಾಮಪರವಶರಾದೆವು. ಆಕೆಯನ್ನು ವರಿಸಬೇಕೆಂದು ಮನಸ್ಸಿನಲ್ಲಿ ಆಸೆಪಡತೊಡಗಿದೆವು.

ಹೀಗೆ ನಾನು ಮತ್ತು ನನ್ನ ಪುತ್ರರು ಸುಂದರಿಯಾದ ಸಂಧ್ಯೆಯನ್ನು ಮದುವೆಯಾಗಲು ಯೋಚಿಸುತ್ತಿರುವಾಗ ನನ್ನ ಮನಸ್ಸಿನಿಂದ ತುಂಬಾ ಸುಂದರನೂ ಆಶ್ಚರ್ಯಕರವಾದಂತಹ ಪುರುಷನೋರ್ವ ಜನಿಸಿದ. ಆ ಪುರುಷನು ಸುವರ್ಣದಂತೆ ಬೆಳಗುವ ಶರೀರಕಾಂತಿಯಿಂದ ನೋಡುಗರ ಮನಸ್ಸು ಸೆಳೆಯುವಂತೆ ಇದ್ದ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಾಲಗಾರ ಬಾಂಧವರು

ಸ್ಥೂಲಸೂಕ್ಷ್ಮವಿವೇಕರಹಿತೇಷ್ಟ ಬಂಧುಜನ |
ಕಾಲದಂಷ್ಟ್ರಕೆ ನಿನ್ನ ಮೃದುಗೊಳಿಪ ಭಟರು ||
ಸಾಲವನು ನಿನ್ನಿಂದ ಸಲಿಸಿಕೊಳಬಂದವರು |
ತಾಳುಮೆಯಿನವರೊಳಿರು – ಮಂಕುತಿಮ್ಮ || 630 ||

ಪದ-ಅರ್ಥ: ಸ್ಥೂಲಸೂಕ್ಷ್ಮವಿವೇಕರಹಿತೇಷ್ಟ = ಸ್ಥೂಲ + ಸೂಕ್ಷ್ಮ + ವಿವೇಕರಹಿತ + ಇಷ್ಟ, ಕಾಲದಂಷ್ಟ್ರಕೆ = ಕಾಲನ ದವಡೆಗೆ, ತಾಳುಮೆಯಿನವರೊಳಿರು = ತಾಳುಮೆಯಿನ್ + ಅವರೊಳು + ಇರು.

ವಾಚ್ಯಾರ್ಥ: ಸ್ಥೂಲವಾದ ಒಟ್ಟಾರೆಯ, ಸೂಕ್ಷ್ಮವಾದ, ವಿವೇಕದ, ತಿಳಿವಳಿಕೆ ಇಲ್ಲದ ಇಷ್ಟ ಬಂಧು ಜನರು ನಿಮ್ಮನ್ನು ಯಮನ ದವಡೆಗೆ ಮೃದುಗೊಳಿಸುವ ಸೈನಿಕರಿದ್ದಂತೆ. ನಿನ್ನಿಂದ ಸಾಲವನ್ನು ವಸೂಲಿ ಮಾಡಿಕೊಳ್ಳಲು ಬಂದವರಿವರು. ಅವರಲ್ಲಿ ನೀನು ತಾಳ್ಮೆಯಿಂದಿರು.

ವಿವರಣೆ: ಪ್ರೇಮಾ ಬಹಳ ಬುದ್ಧಿವಂತೆ, ಪರಿಶ್ರಮಿ. ಈ ಬಾರಿ ನೀಟ್ ಪರೀಕ್ಷೆಯಲ್ಲಿ ಖಂಡಿತವಾಗಿಯೂ ಉನ್ನತ ರ‍್ಯಾಂಕ್ ಪಡೆಯುವ ಆತ್ಮವಿಶ್ವಾಸವಿತ್ತು. ಆದರೆ ಪರೀಕ್ಷೆಗೆ ಹೋಗುವಾಗ ಆಟೊರಿಕ್ಷಾ ಉರುಳಿಬಿದ್ದು ಪೆಟ್ಟಾಗಿ, ಗಾಯದಲ್ಲೇ, ಆತಂಕದಲ್ಲೇ ಪರೀಕ್ಷೆಗೆ ಹೋದಳು. ಆಕೆಯ ಅಪೇಕ್ಷೆಯಂತೆ ಉತ್ತರಿಸುವುದಾಗಲಿಲ್ಲ, ತನ್ನ ಕನಸಿನ ಗೋಪುರ ಕಳಚಿಬಿತ್ತು ಎಂದು ಆಕೆ ಆತ್ಮಹತ್ಯೆಗೆ ಪ್ರಯತ್ನಿಸಿದಳು. ಮನೆಯವರು ಆಕೆಯನ್ನು ಉಳಿಸಿಕೊಂಡರೂ, ಈ ವಿಷಯವನ್ನು ಗುಟ್ಟಾಗಿಟ್ಟರು. ಹುಡುಗಿಯ ಮುಂದಿನ ಜೀವನಕ್ಕೆ ಇದು ತೊಂದರೆಯಾದೀತು ಎಂಬ ಭಯ ತಂದೆ-ತಾಯಿಯರಿಗೆ. ಆಕೆಗೆ ಅನಾರೋಗ್ಯ ಎಂದು ಮಾತ್ರ ಸ್ಥೂಲವಾಗಿ ಹೇಳಿದ್ದರು. ತಂದೆಯ ಸೋದರಮಾವ ಬಂದರು. ಇಂಥ ಸೂಕ್ಷ್ಮ ವಿಷಯ ಅವರಿಗೆ ಹೊಳೆಯುವುದಿಲ್ಲ. ಎಲ್ಲರ ಮುಂದೆಯೇ, ‘ನಿನ್ನ ಪರೀಕ್ಷೆ ಚೆನ್ನಾಗಿ ಆಗಲಿಲ್ಲವೇ? ಹಾಗಾದರೆ ನೀನು ಡಾಕ್ಟರ್ ಆಗುವುದು ಮುಗಿಯಿತು. ನೀನೇನಾದರೂ ಚಿಂತೆ ಮಾಡಿ ಆತ್ಮಹತ್ಯೆ ಮಾಡಿಕೊಂಡೀಯಾ?’ ಎಂದು ಬೊಬ್ಬರಿಸಿದರು. ಮನೆಯವರಿಗೆ ಪ್ರಾಣಸಂಕಟ. ರಾಮಯ್ಯನವರಿಗೆ ಪ್ರೊಸ್ಟ್ರೇಟ್ ಕ್ಯಾನ್ಸರ್ ಎಂದು ತಿಳಿಯಿತು. ಅದು ಪ್ರಾರಂಭದ ಹಂತವಾದ್ದರಿಂದ ಯಾವ ತೊಂದರೆಯೂ ಇಲ್ಲವೆಂದು ಚಿಕಿತ್ಸೆ ಪ್ರಾರಂಭಿಸಿದರು. ರಾಮಯ್ಯನ ಅಣ್ಣ ಮನೆಗೆ ಬಂದು, ‘ಏನೋ ನಿನಗೆ ಕ್ಯಾನ್ಸರ್ ಅಂತಲೋ? ಆಯ್ತಪ್ಪ ನಿನ್ನ ಆಯುಸ್ಸು ಇಷ್ಟು ಬೇಗ ಮುಗಿದೀತು ಅಂದುಕೊಂಡಿರಲಿಲ್ಲ. ಏನು ಔಷಧಿ, ಚಿಕಿತ್ಸೆ ಮಾಡಿದರೂ ಕ್ಯಾನ್ಸರ್ ಪ್ರಾಣ ತೆಗೆದುಕೊಂಡೇ ಬಿಡುತ್ತದೆ’ ಎಂದರು. ಕ್ಯಾನ್ಸರ್ ಪ್ರಾಣ ತೆಗೆದುಕೊಳ್ಳುತ್ತದೋ ಇಲ್ಲವೋ ಅದು ಬೇರೆ ವಿಷಯ, ಆದರೆ ಇವರ ಮಾತು ಮಾತ್ರ ಖಂಡಿತ ಪ್ರಾಣ ತೆಗೆಯುತ್ತದೆ.

ಇಂಥವರನ್ನೇ ಕಗ್ಗ ಸ್ಥೂಲ, ಸೂಕ್ಷ್ಮ, ವಿವೇಕರಹಿತ ಇಷ್ಟ ಬಂಧುಜನ ಎನ್ನುತ್ತಾರೆ. ಇವರಿಗೆ ಸ್ಥೂಲವೂ ಅರ್ಥವಾಗುವುದಿಲ್ಲ, ಸೂಕ್ಷ್ಮ ತಿಳಿಯುವುದಿಲ್ಲ ಯಾಕೆಂದರೆ ವಿವೇಕವೇ ಇಲ್ಲ. ಇವರು ನಮ್ಮನ್ನು ಯಮನ ದವಡೆಗೆ ಸೇರಿಸಲು ಸುಲಭವಾಗುವಂತೆ ಹಣ್ಣು ಮಾಡುತ್ತಾರೆ. ಅವರೆಲ್ಲ ಜನ್ಮಜನ್ಮಾಂತರಗಳಲ್ಲಿ ನೀಡಿದ ಸಾಲವನ್ನು ವಸೂಲಿ ಮಾಡಲು ಬಂದ ಸಾಲಗಾರರು. ಗೋಪಾಲದಾಸರು ತಮ್ಮ ಒಂದು ಕೀರ್ತನೆಯಲ್ಲಿ ಕೇಳುತ್ತಾರೆ. ‘ಯಾರನ್ನು ಬೇಡಲಿ ನಾನು? ತಾಯಿ ಸುರುಚಿ ಧ್ರುವನಿಗೆ ಏನು ಕೊಟ್ಟಳು? ತಂದೆ, ಪ್ರಲ್ಹಾದನಿಗೆ ಏನು ಮಾಡಿದ? ತಮ್ಮ ಸುಗ್ರೀವ ಅಣ್ಣ ವಾಲಿಗೆ ಏನು ಕೊಟ್ಟ? ನೂರು ಜನ ಮಕ್ಕಳು ತಂದೆ ಧೃತರಾಷ್ಟ್ರನಿಗೆ ಏನು ಮಾಡಿದರು? ಅದಕ್ಕೆ ಇಂಥ ಯಾವ ಬಂಧುಗಳೂ ಬೇಡ’. ಅಂಥವರು ಬಂದಾಗ ನಮ್ಮ ಬಳಿ ಇರುವ ಒಂದೇ ಅಸ್ತ್ರ – ತಾಳ್ಮೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಮೇ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ತೃತೀಯ ಗಂ.23-37 ನಕ್ಷತ್ರ: ಜ್ಯೇಷ್ಠ ಗಂ.08-10 ಯೋಗ: ಸಿದ್ಧ ಗಂ.18-44, ಕರಣ: ವಣಿಜ ಗಂ.13-18, ವೃಷಭ ಮಾಸದ 03 ನೇ ದಿನ.
ರಾಹುಕಾಲ: ಮಧ್ಯಾಹ್ನ 12:00 – 01:30
ಸೂರ್ಯೋದಯ: 06-08 **ಸೂರ್ಯಾಸ್ತ:** 06-46
ಮುಸ್ಲಿಂ ದಿನಾಂಕ: 16 ಶವ್ವಾಲ್
ಅದೃಷ್ಟ ಸಂಖ್ಯೆ: 1, 8

ಮೇಷ: ರಾಜಕೀಯ ವರ್ಗದವರಿಗೆ ಶತ್ರುಪೀಡೆ. ಕೃಷಿಕರಿಗೆ ಕಾಡುಪ್ರಾಣಿಗಳ ಲೂಟಿಯಂತಹ ತೊಂದರೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲ ಹೆಚ್ಚಿಸಿದರೆ ಉದ್ಯೋಗ ಪ್ರಾಪ್ತಿಗೆ ಅನುಕೂಲ.

ವೃಷಭ: ಕುಟುಂಬದವರ ಮಾತಿಗೆ ಬೆಲೆ ಕೊಡುವುದು ಮತ್ತು ಎಲ್ಲರಲ್ಲೂ ಸಹನೆಯಿಂದ ವರ್ತಿಸುವುದನ್ನು ರೂಢಿಸಿಕೊಳ್ಳುವುದು ಉತ್ತಮ. ಅಭಿರುಚಿಗೆ ಹೊಂದುವಂತಹ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವುದರಿಂದ ನೆಮ್ಮದಿ.

ಮಿಥುನ: ದೇಹದಲ್ಲಿ ರಕ್ತಸಂಬಂಧಿ ತೊಂದರೆಗಳು ಎದುರಾಗಬಹುದು, ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಕಂದಾಯ ಇಲಾಖೆಯವರಿಗೆ ಬಿಡುವಿಲ್ಲದ ಕೆಲಸಗಳು. ಖರ್ಚು, ವೆಚ್ಚ ಸಮತೋಲನದಲ್ಲಿರುತ್ತದೆ.

ಕರ್ಕಾಟಕ: ಪರಿಶ್ರಮಕ್ಕೆ ತಕ್ಕಂತೆ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಹೆಚ್ಚಿನ ವರಮಾನದ ಮಾರ್ಗ ಸ್ನೇಹಿತರೊಬ್ಬರು ತೋರುವರು. ವಿವಾದಗಳಿಂದ ದೂರ ಉಳಿಯುವ ನಿರ್ಧಾರ ಗೌರವ ಕಾಪಾಡಿಕೊಳ್ಳುವಲ್ಲಿ ಅನುಕೂಲವಾಗುತ್ತದೆ.

ಸಿಂಹ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರ ತೀರಿಸುವ ಬಗ್ಗೆ ಹೆಚ್ಚಿನ ಪ್ರಯತ್ನ ಮತ್ತು ಆಸಕ್ತಿ ಇರಲಿ. ನೀಲಿ ಬಣ್ಣ ಶುಭ ತರಲಿದೆ.

ಕನ್ಯಾ: ಸಾಂಸಾರಿಕವಾಗಿ ವೈದ್ಯಕೀಯ ಖರ್ಚು ಹೆಚ್ಚಲಿದೆ. ಕೆಲವು ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಬಯಸುವಿರಿ. ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು.

ತುಲಾ: ಅಪರಿಚಿತ ವ್ಯಕ್ತಿಯೊಬ್ಬರು ಅತಿ ಉತ್ತಮ ಉಪಾಯ ಮತ್ತು ಅವರ ಅನುಭವ ಹಂಚಿಕೊಳ್ಳುವುದಾಗಿ ಹೇಳಿ ನಿಮ್ಮ ಗುರಿ ತಪ್ಪಿಸುವ ಮಾರ್ಗಕ್ಕೆ ಎಳೆಯಲಿದ್ದಾರೆ, ಜಾಗ್ರತರಾಗಿರಿ. ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರುವಿರಿ.

ವೃಶ್ಚಿಕ: ಎಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದ ಮಾಡಿಕೊಳ್ಳುವ ತೀರ್ಮಾನಗಳನ್ನು ತೆಗೆದುಕೊಳ್ಳಲು ಈ ದಿನ ಬಹಳ ಸಮಂಜಸವಲ್ಲ.

ಧನು: ಕ್ಷಣಿಕ ಸುಖಕ್ಕೆ ಗಮನ ನೀಡದೆ, ಮುಖ್ಯ ವಿಷಯಗಳ ಬಗ್ಗೆ ಗಂಭೀರವಾಗಿ ಆಲೋಚಿಸುವುದು ಏಳಿಗೆ, ಅಭಿವೃದ್ಧಿಗೆ ಮೆಟ್ಟಿಲುಗಳಾಗುವುದು. ನಿಮ್ಮ ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರ ಸಿಗಲಿದೆ.

ಮಕರ: ಇಂದು ಸರಿಯಾದ ಹಾದಿಯಲ್ಲಿಯೇ ನಡೆಯುವಿರಿ. ವಸ್ತ್ರಾಭರಣ ಖರೀದಿ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೂರ ಪ್ರಯಾಣ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಲಿದೆ.

ಕುಂಭ: ಈ ದಿನ ಮನೆಯಲ್ಲಿ ಅಣ್ಣ-ತಮ್ಮಂದಿರ ಆಂತರಿಕ ವ್ಯವಹಾರಗಳು ಒಂದು ಹಂತ ತಲುಪುತ್ತವೆ. ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭ. ವ್ಯವಹಾರದ ವಿಸ್ತರಣೆಗೆ ಸ್ನೇಹಿತರಿಂದ ಉತ್ತಮ ಸಲಹೆ.


ಮೀನ: ದೇವರ ಅನುಗ್ರಹದಿಂದ ಎಲ್ಲಾ ಕೆಲಸಗಳಲ್ಲಿ ಜಯಶಾಲಿ. ರಾಜಕಾರಣಿಗಳು ತಮ್ಮ ಸುತ್ತಲಿನ ಜನರ ಸಹಾಯ ಪಡೆಯುವಲ್ಲಿ ಸೋಲು ಕಾಣುವ ಸ್ಥಿತಿ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗುವುದು.

ಪದಬಂಧ 4961

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪುಷ್ಪದ ಸಿಹಿರಸದೊಡಗೂಡಿದ ತಿಂಗಳು (4)
3.ಅಗ್ನಿಯ ಹೆಂಡತಿ (2)
5.ಸಿರಿತನವಲ್ಲ!ದುಡ್ಡಿಲ್ಲದಿರುವಿಕೆ !(4)
7.ಮರದಿಂದ ಮಾಡಿದ ಪಾದರಕ್ಷೆ (3)
8.ಅರಣ್ಯವನ್ನು ಕಾಪಾಡುವವ (5)
11.ಕದದ ಬಳಿಯಿರಿಸಿದ ನೀರು (3)
12.ದೇವಸ್ಥಾನದ ಸಭಾಮಂಟಪ (4)
14.ಕಟಕಟೆ ಹತ್ತಿರ ಬಂದು ಹೇಳಿದ ಸತ್ಯ (2)
15.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಶಕ್ತಿಯಿದು (4)
2.ಗಜಪಡೆಯನ್ನು ನಡೆಸುವಾತ (3)
4.ಹರನಿಗೆ ಸಲ್ಲಿಸಿದ ಮುಡಿಪು (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
7.ಪಾಕದ ನಂತರ ಕುಡಿದ ಶರಬತ್ತು (3)
8.ವರ್ತಮಾನ ತಿಳಿಸಿದ ವ್ಯಾಪಾರಿ (3)
9.ಶುನಕ ಮೂಸಿದ ಬೆಳ್ಳುಳ್ಳಿ! (3)
10.ಅಜಗಜಾಂತರದಲ್ಲೇ ಮನ್ಮಥನಿದ್ದಾನೆ! (4)
11.ಸಲ್ಲಾಪ ತೋರುವಾಗಿನ ಸಂತೋಷ (3)
13.ಯಾರೀಕೆ? ಬಿಂಕ ತೋರುತ್ತಿಹಳಲ್ಲಾ? (3)



4960ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಧನಸಹಾಯ 3.ಕೈಲಾಸ 5.ನಿರಪರಾಧಿ 7.ಅವ್ಯಯ 8.ಹೊಸಜೀವನ 10.ಅಗುಳು 11.ವನಪಾಲಕ 14.ರಹಸ್ಯ 15.ಸಮರಸಿಂಹ

ಮೇಲಿಂದ ಕೆಳಕ್ಕೆ: 1.ಧಮನಿ 2.ಸಲ್ಲಾಪ 4.ಸಮಯ 6.ರಾಕ್ಷಸ 7.ಅಶನ 8.ಹೊಕ್ಕುಳು 9.ವರ್ಧನ 10.ಅಬ್ಬರ 12.ಪಾಮರ 13.ಕಲಹ

ಸುಡೊಕು 5347


				5		9		
1			6		4			3
	5	3		7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5346 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು 1,344



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,842
ಇಂದಿನ ಅಂತ್ಯ	16,259
▲	417
ದಿನದ ಕನಿಷ್ಠ	16,284

ವಿನಿಮಯ ದರ

$ ಡಾಲರ್	77.44
£ ಪೌಂಡ್	96.68
€ ಯುರೊ	81.3
¥ ಯೆನ್ (100ಕ್ಕೆ)	89.9

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹470
12 ಮೊಟ್ಟೆಗೆ ₹62
ಮೈಸೂರು
100 ಮೊಟ್ಟೆಗೆ ₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1625 (1630)
ಸೋಯಾ (ರಿಫೈನ್ಡ್)	₹1560 (1580)
ಸೂರ್ಯಕಾಂತಿ (ರಿಫೈನ್ಡ್)	₹1890 (1890)
ಪಾಮೋಲಿನ್	₹1560 (1570)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹500-700
ಸಣ್ಣ	₹300-700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-25000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹168.50
ಆರ್‌ಎಸ್‌ಎಸ್-5 ₹168.50
ಗುಡ್ ಲಾಟ್ ₹158

ಕುಸಿದ ಎಲ್‌ಐಸಿ ಷೇರು ಮೌಲ್ಯ

ಒಂದನೇ ಪುಟದಿಂದ

‘ಮಾರುಕಟ್ಟೆ ಹೇಗಿರುತ್ತದೆ ಎಂಬುದನ್ನು ಊಹಿಸಲು ಯಾರಿಂದಲೂ ಸಾಧ್ಯವಿಲ್ಲ. ಎಲ್‌ಐಸಿ ಷೇರುಗಳನ್ನು ಒಂದು ದಿನದ ಮಟ್ಟಿಗೆ ಇರಿಸಿಕೊಳ್ಳುವುದಲ್ಲ, ಬಹಳ ದಿನಗಳವರೆಗೆ ಅದನ್ನು ಇರಿಸಿಕೊಳ್ಳಬೇಕು ಎಂಬುದನ್ನು ಮೊದಲಿಂದಲೂ ಹೇಳುತ್ತಿದ್ದೇವೆ’ ಎಂದು ಪಾಂಡೆ ಹೇಳಿದ್ದಾರೆ.

‘ಷೇರುಪೇಟೆಯಲ್ಲಿ ತುಸು ಭೀತಿ ಇದೆ. ಮಾರುಕಟ್ಟೆಯು ದೊಡ್ಡ ಮಟ್ಟದಲ್ಲಿ ಜಿಗಿಯಲಿಕ್ಕಿಲ್ಲ. ಮುಂದಿನ ದಿನಗಳಲ್ಲಿ ಎಲ್‌ಐಸಿ ಷೇರು ಮೌಲ್ಯ ಹೆಚ್ಚಾಗಲಿದೆ. ಐಪಿಒ ಸಂದರ್ಭದಲ್ಲಿ ಷೇರು ಸಿಗದವರು, ಅದರಲ್ಲೂ ಮುಖ್ಯವಾಗಿ ಪಾಲಿಸಿದಾರರು, ಷೇರುಪೇಟೆಗಳಿಂದ ಷೇರು ಖರೀದಿಸುತ್ತಿದ್ದಾರೆ ಎಂಬ ಭರವಸೆ ಇದೆ’ ಎಂದು ಎಲ್‌ಐಸಿ ಅಧ್ಯಕ್ಷ ಎಂ.ಆರ್. ಕುಮಾರ್ ಅವರು ಹೇಳಿದ್ದಾರೆ.

ಐದನೆಯ ಅತಿದೊಡ್ಡ ಕಂಪನಿ: ಎಲ್‌ಐಸಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಈಗ ₹ 5.54 ಲಕ್ಷ ಕೋಟಿ ಆಗಿದ್ದು, ದೇಶದ ಷೇರುಪೇಟೆಗಳಲ್ಲಿ ನೋಂದಾಯಿತವಾಗಿರುವ ಕಂಪನಿಗಳ ಪೈಕಿ ಐದನೆಯ ಅತಿದೊಡ್ಡ ಕಂಪನಿಯಾಗಿದೆ.

ಎಲ್‌ಐಸಿ ಮಾರುಕಟ್ಟೆ ಬಂಡವಾಳ ಮೌಲ್ಯವು ಎಚ್‌ಯುಎಲ್, ಐಸಿಐಸಿಐ ಬ್ಯಾಂಕ್, ಎಸ್‌ಬಿಐ, ಎಚ್‌ಡಿಎಫ್‌ಸಿ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕಿಂತ ಹೆಚ್ಚು. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ದೇಶದ ಅತಿದೊಡ್ಡ ಕಂಪನಿ. ಎರಡನೆಯ ಸ್ಥಾನದಲ್ಲಿ ಟಿಸಿಎಸ್ ಇದೆ. ಮೂರು ಮತ್ತು ನಾಲ್ಕನೆಯ ಸ್ಥಾನಗಳಲ್ಲಿ ಕ್ರಮವಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಇನ್ಫೊಸಿಸ್ ಇವೆ.


ಲಾಭ ಇದೆ: ಕೇಂದ್ರ ಸರ್ಕಾರದ ಮಾಲೀಕತ್ವದ ಕಂಪನಿಗಳು ಷೇರುಪೇಟೆಯಲ್ಲಿ ನೋಂದಾಯಿತ ಆದ ನಂತರದಲ್ಲಿ ಹೂಡಿಕೆದಾರರಿಗೆ ಭಾರಿ ಪ್ರಮಾಣದಲ್ಲಿ ಸಂಪತ್ತು ತಂದುಕೊಟ್ಟಿರುವುದೂ ಇದೆ. ಐಆರ್‌ಸಿಟಿಸಿ ಕಂಪನಿಯ ಷೇರುಗಳನ್ನು ₹ 320ಕ್ಕೆ ನೀಡಲಾಗಿತ್ತು. ಷೇರುಪೇಟೆಯಲ್ಲಿ ₹ 644ರಂತೆ ವಹಿವಾಟು ಆರಂಭಿಸಿತ್ತು. ಕೋಲ್ ಇಂಡಿಯಾ ಕಂಪನಿಯ ಷೇರುಗಳನ್ನು ಸರ್ಕಾರ ₹ 245ಕ್ಕೆ ನೀಡಿತ್ತು. ಇದು ಷೇರುಪೇಟೆಯಲ್ಲಿ ನೋಂದಾಯಿತ ಆದ ದಿನ ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿತು. ಆದರೆ ಈಗ ಈ ಷೇರು ಐಪಿಒ ಸಂದರ್ಭದಲ್ಲಿ ಬೆಲೆಗಿಂತ ಕಡಿಮೆ ಮಟ್ಟದಲ್ಲಿದೆ.

ಹೂಡಿಕೆದಾರರ ಸಂಪತ್ತು ₹ 12 ಲಕ್ಷ ಕೋಟಿ ಹೆಚ್ಚಳ

ಷೇರುಪೇಟೆ: ಪುಟಿದೆದ್ದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಮಂಗಳವಾರ ಶೇಕಡ 2.5ಕ್ಕಿಂತ ಹೆಚ್ಚು ಜಿಗಿದವು. ಇದು ಮೂರು ತಿಂಗಳಲ್ಲಿ ಸೂಚ್ಯಂಕಗಳು ಕಂಡ ಅತಿದೊಡ್ಡ ಏರಿಕೆ.

ಲೋಹ, ಇಂಧನ, ಬ್ಯಾಂಕಿಂಗ್ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ್ದು ಈ ಏರಿಕೆಗೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ. ಸೆನ್ಸೆಕ್ಸ್ 1,344 ಅಂಶ ಹಾಗೂ ನಿಫ್ಟಿ 417 ಅಂಶ ಏರಿಕೆ ಕಂಡವು.



‘ಹಲವು ದಿನಗಳ ನಂತರ ಷೇರುಪೇಟೆಗಳು ಪುಟಿದೆದ್ದಿವೆ. ಏಷ್ಯಾದ ಇತರ ಮಾರುಕಟ್ಟೆಗಳಲ್ಲಿ ಕಂಡುಬಂದ ಆಶಾಭಾವನೆಯು ದೇಶದ ಷೇರುಪೇಟೆಗಳ ಮೇಲೆಯೂ ಪರಿಣಾಮ ಬೀರಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹಾಂಗ್‌ಕಾಂಗ್, ಟೋಕಿಯೊ, ಸೋಲ್ ಷೇರುಪೇಟೆಗಳು ಕೂಡ ಏರಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.49ರಷ್ಟು ಜಾಸ್ತಿಯಾಗಿ ಪ್ರತಿ ಬ್ಯಾರೆಲ್‌ಗೆ 114.8 ಡಾಲರ್‌ಗೆ ತಲುಪಿದೆ.

ಮಂಗಳವಾರದ ವಹಿವಾಟು ತೇಜಿ ಇದ್ದ ಕಾರಣದಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 12 ಲಕ್ಷ ಕೋಟಿಯಷ್ಟು ಹೆಚ್ಚಳ ಆಗಿದೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.78ರಷ್ಟು, ಮಿಡ್ ಕ್ಯಾಪ್ ಸೂಚ್ಯಂಕ ಶೇ 2.51ರಷ್ಟು ಏರಿಕೆ ಕಂಡಿವೆ. ಬಿಎಸ್‌ಇಯ ಎಲ್ಲಾ ವಲಯಗಳ ಸೂಚ್ಯಂಕಗಳು ಏರಿಕೆ ಕಂಡಿವೆ.

ಮತ್ತೆ ಕುಸಿದ ರೂಪಾಯಿ: ಮಂಗಳವಾರದ ವಹಿವಾಟಿನ ಒಂದು ಹಂತದಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 77.79ಕ್ಕೆ ಕುಸಿದಿತ್ತು. ದಿನದ ಕೊನೆಯಲ್ಲಿ ತುಸು ಚೇತರಿಕೆ ಕಂಡು 77.44ಕ್ಕೆ ತಲುಪಿತು.

ಷೇರುಪೇಟೆಗಳಲ್ಲಿ ನಡೆದ ಏರಿಕೆಯ ವಹಿವಾಟು ಕೂಡ ರೂಪಾಯಿ ಮೌಲ್ಯವರ್ಧನೆಗೆ ನೆರವಾಯಿತು.

‘ಕಚ್ಚಾ ತೈಲದ ಬೆಲೆ ಹೆಚ್ಚಳ ಹಾಗೂ ಹಣದುಬ್ಬರ ಏರಿಕೆಯ ಕಾರಣದಿಂದಾಗಿ ರೂಪಾಯಿ ಮೌಲ್ಯವು ಮಂಗಳವಾರ ಕುಸಿದಿತ್ತು’ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಶ್ರೀರಾಮ್ ಅಯ್ಯರ್ ಹೇಳಿದ್ದಾರೆ.

ಸಗಟು ಹಣದುಬ್ಬರ ದಾಖಲೆ

ಒಂದನೇ ಪುಟದಿಂದ

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇಕಡ 7.79ಕ್ಕೆ ತಲುಪಿದೆ ಎಂದು ಕೇಂದ್ರವು ಹಿಂದಿನ ವಾರ ತಿಳಿಸಿದೆ. ‘ಸಗಟು ಹಣದುಬ್ಬರ ಪ್ರಮಾಣವು ಎರಡಂಕಿ ಮಟ್ಟದಲ್ಲಿಯೇ ಉಳಿದಿರುವ ಕಾರಣ, ಆರ್‌ಬಿಐ ಜೂನ್ ತಿಂಗಳಲ್ಲಿ ರೆಪೊ ದರವನ್ನು ಹೆಚ್ಚಿಸುವ ಸಾಧ್ಯತೆಯು ಜಾಸ್ತಿಯಾಗಿದೆ’ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಜೂನ್ ತಿಂಗಳಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 0.40ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಆಗಸ್ಟ್‌ನಲ್ಲಿ ಶೇ 0.35ರಷ್ಟು ಜಾಸ್ತಿ ಮಾಡಬಹುದು’ ಎಂದು ಅವರು ಅಂದಾಜಿಸಿದ್ದಾರೆ.

ಆರ್‌ಬಿಐ ಈ ತಿಂಗಳ ಆರಂಭದಲ್ಲಿ ರೆಪೊ ದರವನ್ನು ಶೇ 0.40ರಷ್ಟು ಹೆಚ್ಚಿಸಿದೆ. ನಗದು ಮೀಸಲು ಅನುಪಾತವನ್ನು ಶೇ 0.50ರಷ್ಟು ಏರಿಕೆ ಮಾಡಿದೆ.

‘ಹಣದುಬ್ಬರದ ಮೂಲ ಇರುವುದು ಜಾಗತಿಕ ಪೂರೈಕೆ ವ್ಯವಸ್ಥೆಯಲ್ಲಿ ಉಂಟಾಗಿರುವ ಅಡಚಣೆಯಲ್ಲಿ. ದೇಶಿ ಮಾರುಕಟ್ಟೆಯಲ್ಲಿನ ಭಾರಿ ಬೇಡಿಕೆಯಿಂದ ಹಣದುಬ್ಬರ ಸೃಷ್ಟಿಯಾಗಿಲ್ಲ. ಹಣದ ಹರಿವನ್ನು ಹೆಚ್ಚು ಬಿಗಿಗೊಳಿಸಿದರೆ ಅರ್ಥ ವ್ಯವಸ್ಥೆಯಲ್ಲಿ ಈಗ ಕಂಡುಬಂದಿರುವ ಚೇತರಿಕೆಯ ಮೇಲೆ ಪೆಟ್ಟು ಬೀಳುತ್ತದೆ. ಆದರೆ, ಹಣದುಬ್ಬರದ ಮೇಲೆ ಹೆಚ್ಚಿನ ಪರಿಣಾಮ ಆಗಲಿಕ್ಕಿಲ್ಲ’ ಎಂದೂ ನಾಯರ್ ವಿಶ್ಲೇಷಿಸಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್ ನಡೆಸಿರುವ ಅಧ್ಯಯನದ ಪ್ರಕಾರ ಹಣದುಬ್ಬರ ಹೆಚ್ಚಳಕ್ಕೆ ಉಕ್ರೇನ್‌-ರಷ್ಯಾ ನಡುವಿನ ಯುದ್ಧವು ಶೇ 59ರಷ್ಟು ಕೊಡುಗೆ ನೀಡಿದೆ.



ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗೋವಿಂದರಾಜ್ ಕಟ್ಟಿ

- **ಪ್ರಶ್ನೆ: ನಾನು ಒಟ್ಟು ₹ 6 ಲಕ್ಷವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿದ್ದೇನೆ. ₹ 4 ಲಕ್ಷವನ್ನು ತಂತ್ರಜ್ಞಾನ ಆಧಾರಿತ ಕಂಪನಿಗಳಲ್ಲಿ ತೊಡಗಿಸುವ ಫಂಡ್‌ನಲ್ಲಿ, ₹ 2 ಲಕ್ಷವನ್ನು ಬ್ಲೂಚಿಪ್ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದೇನೆ. ಈಗ ನನ್ನ ಹೂಡಿಕೆಯು ₹ 95 ಸಾವಿರದಷ್ಟು ಕುಸಿದಿದೆ. ನಾನು ಈಗ ಏನು ಮಾಡಲಿ? ಹೂಡಿಕೆ ಹಿಂಪಡೆಯಲೇ ಅಥವಾ ದೀರ್ಘಾವಧಿಗೆ ಮುಂದುವರಿಸಲೇ?**

ಉತ್ತರ: ನೀವು ಹೂಡಿಕೆ ಮಾಡಿರುವುದು ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲೋ (ಎಸ್‌ಐಪಿ) ಅಥವಾ ಒಂದೇ ಕಂತಿನಲ್ಲೋ ಎಂಬ ಮಾಹಿತಿ ಇಲ್ಲ. ಒಂದೇ ಕಂತಿನ ಹೂಡಿಕೆ ಎಂದು ತಿಳಿಯುವುದಾದರೆ, ನಿಮ್ಮ ಹೂಡಿಕೆಗಳು (portfolio) ಅಸಲು ಮೊತ್ತಕ್ಕಿಂತ ಅಂದಾಜು ಶೇಕಡ 16ರಷ್ಟು ಕುಸಿದಿದೆ. ಯಾವುದೇ ಮ್ಯೂಚುವಲ್ ಫಂಡ್‌ಗಳಲ್ಲಿ ಹಿಂದಿನ ಹಲವು ವರ್ಷಗಳ ಲಾಭಗಳಿಕೆ ಉತ್ತಮವಾಗಿದ್ದರೂ ಒಂದೇ ಕಂತಿನಲ್ಲಿ ಹೂಡಿಕೆ ಮಾಡುವ ಮೊದಲು ಹೂಡಿಕೆಯನ್ನು ಹೋಲಿಸಿ ನೋಡುವ ಬೆಂಚ್‌ಮಾರ್ಕ್ ಸೂಚ್ಯಂಕ ಹಾಗೂ ಒಟ್ಟಾರೆ ಮಾರುಕಟ್ಟೆ ಸೂಚ್ಯಂಕ (ನಿಫ್ಟಿ/ಸೆನ್ಸೆಕ್ಸ್) ಯಾವ ಹಂತದಲ್ಲಿದೆ ಎನ್ನುವುದು ಮುಖ್ಯ.

ನೀವು ದೀರ್ಘಾವಧಿಗೆ ಹೂಡಿಕೆ ಮಾಡಿದ್ದರೆ ಇಲ್ಲಿ ನಷ್ಟ ಆಗಿರುವುದು ಗೌಣ. ಇಂದಿನ ಪರಿಸ್ಥಿತಿಯಲ್ಲಿ ಕಳೆದ ಐದಾರು ತಿಂಗಳಿನಿಂದ ಹಲವು ಹೂಡಿಕೆಗಳು ನಷ್ಟದಲ್ಲೇ ಮುಂದುವರಿಯುತ್ತಿವೆ. ನೀವು ಹೂಡಿಕೆ ಮಾಡಿದ್ದ ಹಂತಕ್ಕೆ ಮಾರುಕಟ್ಟೆ ಚೇತರಿಸಿಕೊಂಡಾಗ ಲಾಭಕ್ಕೆ ಮರಳುವ ಸಾಧ್ಯತೆ ಇದೆ. ಕಳೆದ ಕೆಲವು ತಿಂಗಳುಗಳಿಂದ ಮಾರುಕಟ್ಟೆ ಅಸ್ಥಿರವಾಗಿದೆ. ಮಾರುಕಟ್ಟೆ ಯಾವ ಹಂತಕ್ಕೆ ಕುಸಿಯಬಹುದು ಹಾಗೂ ಚೇತರಿಕೆ ಕಾಣಲು ಎಷ್ಟು ತಿಂಗಳು ಬೇಕಾಗಬಹುದು ಎಂದು ಖಚಿತವಾಗಿ ಹೇಳಲಾಗದು. ನಿಮ್ಮ ಒಟ್ಟು ಉದ್ದೇಶ, ಹೂಡಿಕೆಯ ಸಮಯ, ನಷ್ಟ ತಡೆಯುವ ಶಕ್ತಿ, ಹಣದ ಅನಿರೀಕ್ಷಿತ ಅಡಚಣೆ ಇತ್ಯಾದಿಗಳನ್ನು ಪರಿಗಣಿಸಿ ಹೂಡಿಕೆಯಲ್ಲಿ ಮುಂದುವರಿಯಬೇಕೆ ಅಥವಾ ಇರುವ ಹಂತದಿಂದ ಹೊರಬರಬೇಕೇ ಎಂಬ ನಿರ್ಧಾರ ಕೈಗೊಳ್ಳಿ. ನೀವು ದೀರ್ಘಾವಧಿ (3-5 ವರ್ಷ) ಹೂಡಿಕೆದಾರರಾಗಿದ್ದರೆ ನಿಮಗೆ ಈ ಕುಸಿತದಿಂದ ತೊಂದರೆಯಾಗದು.

ಮಾರುಕಟ್ಟೆ ಏರುಗತಿಯಲ್ಲಿದೆ ಎನ್ನುವುದನ್ನು ಖಚಿತಪಡಿಸಿಕೊಂಡು ಅಂತಹ ಸಂದರ್ಭದಲ್ಲಷ್ಟೇ ಒಂದೇ ಬಾರಿಯ ಹೂಡಿಕೆಗಳನ್ನು ಮಾಡಬೇಕು. ಮಾರುಕಟ್ಟೆ ಕೆಳಹಂತಕ್ಕೆ ಕುಸಿಯುವ ಸಾಧ್ಯತೆ ಇದ್ದಾಗ ಹೂಡಿಕೆಯನ್ನು ಹಂತ ಹಂತವಾಗಿ ಸ್ವಿಚ್ ಮಾಡುವ ಅಥವಾ ಹಿಂಪಡೆಯುವ ನಿರ್ಧಾರ ಕೈಗೊಳ್ಳಬೇಕು. ಹೂಡಿಕೆ ಮಾಡಿದ ನಂತರ ಪಡೆಯುವ ಸಲಹೆಗಳಿಗಿಂತ ಹೂಡಿಕೆ ಮಾಡುವ ಮುನ್ನ ಆಯಾ ವಿಷಯ ಪರಿಣತರಿಂದ ಅಥವಾ ವೈಯಕ್ತಿಕ ಹೂಡಿಕೆ ಸಲಹೆಗಾರರಿಂದ ಮಾಹಿತಿ ಪಡೆದು ಹೂಡಿಕೆ ನಿರ್ಧಾರ ಕೈಗೊಳ್ಳುವುದು ಪ್ರಶಸ್ತ. ಮಾರುಕಟ್ಟೆ ಒಂದು ವೇಳೆ ಕೆಳಹಂತಕ್ಕೆ ಕುಸಿದರೂ ಯಾವ ಹಂತದವರೆಗೆ ನಷ್ಟ ತಡೆದುಕೊಳ್ಳಬಹುದು ಎಂಬ ಯೋಚನೆಯೂ ಮೊದಲೇ ಇರಬೇಕು. ನಿಮ್ಮ ಹೂಡಿಕೆ ಎಷ್ಟೇ ಉತ್ತಮವಾಗಿದ್ದರೂ ಪರಿಸ್ಥಿತಿ ಒಂದೇ ತೆರನಾಗಿರುವುದಿಲ್ಲ ಎನ್ನುವುದು ತಿಳಿದಿರಲಿ. ಎಸ್‌ಐಪಿ ಹೂಡಿಕೆಗೆ ಏಕಾಏಕಿ ಕುಸಿತಕ್ಕೆ ಪ್ರತಿರೋಧ ಒಡ್ಡುವ ಶಕ್ತಿ ಇರುತ್ತದೆ ಹಾಗೂ ನಿಧಾನವಾಗಿಯಾದರೂ ಅದು ಲಾಭ ನೀಡುತ್ತದೆ.

ಅಭಿಷೇಕ್ ಗೌಡ ಕೆ

- **ಪ್ರಶ್ನೆ: ನಾನು ಸುಮಾರು ₹ 5 ಲಕ್ಷ ವೈಯಕ್ತಿಕ ಸಾಲ ಪಡೆಯಬೇಕಿದೆ. ಇದಕ್ಕೆ ಜೀವ ವಿಮಾ ಪಾಲಿಸಿ, ಅಂಚೆ ಜೀವ ವಿಮೆ ಆಧಾರ ನೀಡಿ ಸಾಲ ಪಡೆಯುವುದು ಸೂಕ್ತವೇ ಅಥವಾ ಬ್ಯಾಂಕ್ ಸಾಲ ಪಡೆಯುವುದು ಸೂಕ್ತವೇ?**

ಉತ್ತರ: ವೈಯಕ್ತಿಕ ಸಾಲ ಎನ್ನುವುದು ತಕ್ಷಣದ ಆರ್ಥಿಕ ಅಗತ್ಯಕ್ಕೆ ಬ್ಯಾಂಕ್‌ಗಳು ಒದಗಿಸುವ ಸಾಲ. ಕಡಿಮೆ ಅವಧಿಯಲ್ಲಿ ಒದಗಿಸಲಾಗುವ ಸಾಲ ಸೌಲಭ್ಯ ಇದು. ಇಂತಹ ಸಾಲಗಳನ್ನು ಸಾಲ ಪಡೆಯುವವರು ನೀಡುವ ಭದ್ರತೆಗಿಂತ ಕ್ರೆಡಿಟ್ ರೇಟಿಂಗ್ ಮತ್ತು ಆದಾಯ-ವ್ಯವಹಾರದ ಮೇಲೆ ಭರವಸೆ ಇಟ್ಟು ನೀಡಲಾಗುತ್ತದೆ. ನೀವು ಬ್ಯಾಂಕಿನ ದೀರ್ಘಕಾಲದ ಗ್ರಾಹಕರಾಗಿದ್ದರೆ, ನಿಮ್ಮ ವೇತನ ಜಮಾ ಆಗುವ ಬ್ಯಾಂಕ್ ಖಾತೆಯಿಂದ ಈ ಸಾಲ ಪಡೆಯುವುದು ಸುಲಭ. ನೀವು ಹೆಚ್ಚಿನ ಕ್ರೆಡಿಟ್ ರೇಟಿಂಗ್ ಹೊಂದಿದ್ದರೆ, ಅನುಕೂಲಕರ ನಿಯಮಗಳ ಅಡಿ ವೈಯಕ್ತಿಕ ಸಾಲ ಪಡೆಯುವ ಸಾಧ್ಯತೆಯಿದೆ. ಇದು ನಿಮ್ಮ ಸಾಲದ ಬಡ್ಡಿ ದರ ನಿರ್ಣಯಿಸುವಲ್ಲೂ ಪಾತ್ರವಹಿಸುತ್ತದೆ. ಹೀಗಾಗಿ ಬ್ಯಾಂಕ್‌ಗಳು ನೀಡುವ ವೈಯಕ್ತಿಕ ಸಾಲಗಳು ಜೀವ ವಿಮಾ ಪಾಲಿಸಿಗಳ ಮೇಲೆ ನೀಡುವ ಸಾಲಕ್ಕಿಂತ ತುಸು ಭಿನ್ನ.

ನಿಮಗೆ ಅಗತ್ಯವಿರುವ ಸಾಲದ ಮೊತ್ತಕ್ಕೆ ಸರಿದೂಗುವ ಯಾವುದೇ ಸಾಂಪ್ರದಾಯಿಕ ಜೀವ ವಿಮಾ ಪಾಲಿಸಿಯ ಪಾವತಿಯಾದ ಮೊತ್ತದ ಶೇಕಡಾ 80ರಿಂದ ಶೇ 90ರಷ್ಟು ಮೊತ್ತವನ್ನು ಸಾಲದ ರೂಪದಲ್ಲಿ ವಿಮಾ ಕಂಪನಿಗಳು ನೀಡುತ್ತವೆ. ನಿಮ್ಮ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಪಾಲಿಸಿ ಒಂದಿಷ್ಟು ವರ್ಷಗಳಿಂದ ಪಾವತಿಯಾಗುತ್ತಿದ್ದು ಸುಮಾರು ₹ 6 ಲಕ್ಷಕ್ಕಿಂತಲೂ ಅಧಿಕ ಮೊತ್ತ ಈವರೆಗೆ ಪಾವತಿಯಾಗಿದ್ದರೆ ನಿಮಗೆ ಬೇಕಿರುವ ಮೊತ್ತದ ಸಾಲ ಇಲ್ಲಿ ಸಿಗಬಹುದು. ಆದರೆ, ಇಂತಹ ಸಾಲಕ್ಕೆ ನಿಮ್ಮ ವಿಮಾ ಪಾಲಿಸಿಯ ಬಾಂಡ್‌ಅನ್ನು ಭದ್ರತೆಯ ರೂಪದಲ್ಲಿ ಅಂಚೆ ಅಥವಾ ಜೀವ ವಿಮಾ ಸಂಸ್ಥೆಗೆ ನೀಡಬೇಕಾಗುತ್ತದೆ. ಇದನ್ನು ಸುರಕ್ಷಿತ ಸಾಲವೆಂದು ಪರಿಗಣಿಸಲಾಗುತ್ತದೆ. ಇಲ್ಲಿ ಗ್ರಾಹಕರ ಕ್ರೆಡಿಟ್ ರೇಟಿಂಗ್ ಮುಖ್ಯ ಮಾನದಂಡವಲ್ಲ. ಇಲ್ಲಿ ಬಡ್ಡಿ ದರ ವೈಯಕ್ತಿಕ ಸಾಲಕ್ಕಿಂತ ತುಸು ಕಡಿಮೆ. ಅವಧಿಪೂರ್ವ ಸಾಲ ಮರುಪಾವತಿಗೂ ಶುಲ್ಕ ಇರಲಾರದು. ಬಡ್ಡಿ-ಅಸಲು ಪಾವತಿ ಅವಧಿಯಲ್ಲಿ ತುಸು ರಿಯಾಯಿತಿ ಪಡೆಯಬಹುದು. ಬ್ಯಾಂಕ್‌ಗಳಲ್ಲಿ ವೈಯಕ್ತಿಕ ಸಾಲವನ್ನು ಶುಲ್ಕವಿರದೆ ನೀಡುವ-ಮರುಪಾವತಿಸುವ ಅವಕಾಶವನ್ನು ಸಾಮಾನ್ಯವಾಗಿ ನೀಡುವುದಿಲ್ಲ.

ಬಡ್ಡಿದರ, ಶುಲ್ಕ, ಮರುಪಾವತಿಯ ಅವಧಿ ಇತ್ಯಾದಿ ತುಲನಾತ್ಮಕವಾಗಿ ಕಡಿಮೆ ಎಲ್ಲಿದೆ ಎಂಬ ವಿವರ ಪಡೆದು ನಿರ್ಧಾರ ಕೈಗೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ರಷ್ಯಾ ತೈಲ ಖರೀದಿ ಹೆಚ್ಚಳ

ನವದೆಹಲಿ (ರಾಯಿಟರ್ಸ್): ಏಪ್ರಿಲ್ ತಿಂಗಳಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಕೆಯಲ್ಲಿ ರಷ್ಯಾ ನಾಲ್ಕನೆಯ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ. ಮುಂದಿನ ತಿಂಗಳುಗಳಲ್ಲಿ ಭಾರತವು ರಷ್ಯಾದಿಂದ ತರಿಸಿಕೊಳ್ಳಲಿರುವ ಕಚ್ಚಾ ತೈಲದ ಪ್ರಮಾಣವು ಇನ್ನಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ.

ಏಪ್ರಿಲ್‌ನಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 2.77 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿಸಿದೆ. ಮಾರ್ಚ್‌ನಲ್ಲಿ ಇದು ದಿನವೊಂದಕ್ಕೆ 66 ಸಾವಿರ ಬ್ಯಾರೆಲ್ ಆಗಿತ್ತು. ಆಗ ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳ ಸಾಲಿನಲ್ಲಿ ರಷ್ಯಾ ಹತ್ತನೆಯ ಸ್ಥಾನದಲ್ಲಿತ್ತು.

ಉಕ್ರೇನ್‌-ರಷ್ಯಾ ಯುದ್ಧ ಶುರುವಾದ ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳು ರಷ್ಯಾ ವಿರುದ್ಧ ನಿರ್ಬಂಧಗಳನ್ನು ಹೇರಿವೆ. ಇದಾದ ನಂತರದಲ್ಲಿ ಭಾರತದ ಕಂಪನಿಗಳು ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾ ತೈಲವನ್ನು ಖರೀದಿಸಲು ಆರಂಭಿಸಿವೆ.

ಭಾರತದ ಒಟ್ಟು ತೈಲ ಆಮದಿನಲ್ಲಿ ಆಫ್ರಿಕಾದ ಪಾಲು ಏಪ್ರಿಲ್‌ನಲ್ಲಿ ಶೇ 6ಕ್ಕೆ ಇಳಿಕೆಯಾಗಿದೆ. ಇದು ಮಾರ್ಚ್ ತಿಂಗಳಲ್ಲಿ ಶೇ 14.5ರಷ್ಟು ಇತ್ತು. ಅಮೆರಿಕದಿಂದ ತರಿಸುವ ಕಚ್ಚಾ ತೈಲದ ಪಾಲು ಅರ್ಧದಷ್ಟು ಕಡಿಮೆ ಆಗಿದ್ದು, ಶೇ 3ಕ್ಕೆ ತಲುಪಿದೆ.

ಮಧ್ಯಪ್ರಾಚ್ಯದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 71ಕ್ಕೆ ಹೆಚ್ಚಳವಾಗಿದೆ. ಮೇ ತಿಂಗಳಿನಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು 4.87 ಲಕ್ಷ ಬ್ಯಾರೆಲ್‌ಗೆ ಹೆಚ್ಚಾಗುವ ಸಾಧ್ಯತೆ ಇದೆ.

ಏಪ್ರಿಲ್‌ನಲ್ಲಿ ಭಾರತಕ್ಕೆ ಕಚ್ಚಾ ತೈಲ ರಫ್ತು ಮಾಡಿದ ದೇಶಗಳ ಸಾಲಿನಲ್ಲಿ ಇರಾಕ್ ಮತ್ತು ಸೌದಿ ಅರೇಬಿಯಾ ಕ್ರಮವಾಗಿ ಮೊದಲ ಹಾಗೂ ಎರಡನೆಯ ಸ್ಥಾನಗಳಲ್ಲಿ ಇವೆ. ಮೂರನೆಯ ಸ್ಥಾನದಲ್ಲಿ ಸಂಯುಕ್ತ ಅರಬ್ ಸಂಸ್ಥಾನ (ಯುಎಇ) ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250

ಕಾಳು ಮೆಣಸು -	490

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಭದ್ರಾವತಿ	
ರಾಶಿ	48599-50299
ಕಾರ್ಕಳ	
ಹೊಸತು	40000-45000
ಹಳತು	46000-54500
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	27799-32299
ಚಾಲಿ	36009-38599
ಕೋಕ	32219-35819
ಕೆಂಪುಗೋಟು	29499-38369
ರಾಶಿ	45899-50819
ಸಿಪ್ಪೆಗೋಟು	19309-21709
ಶಿಕಾರಿಪುರ	
ಕೆಂಪು	43291-47526
ಶಿವಮೊಗ್ಗ	
ಬೆಟ್ಟೆ	50599-53699
ಗೊರಬಲು	19000-37899
ರಾಶಿ	46000-50589
ಸರಕು	60000-80399
ಸಿದ್ದಾಪುರ	
ಬಿಳಿಗೋಟು	24919-34689
ಚಾಲಿ	33989-39299
ಕೋಕ	21999-31899
ಕೆಂಪುಗೋಟು	27799-31399
ರಾಶಿ	43299-49809
ತಟ್ಟಿಬೆಟ್ಟೆ	41099-44599
ಶಿರಸಿ	
ಬೆಟ್ಟೆ	32308-47408
ಬಿಳಿಗೋಟು	18099-32499
ಚಾಲಿ	34569-39899
ರಾಶಿ	46518-51199
ತುಮಕೂರು	
ರಾಶಿ	49000-50200
ಯಲ್ಲಾಪುರ	
ಆಪಿ	54665-55429
ಬಿಳಿಗೋಟು	28299-34159
ಚಾಲಿ	35799-40221
ಕೋಕ	18899-30612
ಕೆಂಪುಗೋಟು	30399-34709
ರಾಶಿ	48177-53799
ತಟ್ಟಿಬೆಟ್ಟೆ	38499-47239

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16100	16350	224.80ಸೆಂಟ್ಸ್
ಎಸಿ	8900	8600	8850	
ಆರ್‌ಪಿ	9600	9900	10000	ಲಂಡನ್
ಆರ್‌ಸಿ	4500	4300	4500	2087ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

17-5-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10900-10950
ದಪ್ಪ ಗುಜರಾತ್(ಹೊಸ)	10000-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635 (1640)
ಒಂದು ವಾರದ ಡೆಲಿವರಿ	1630 (1635)
ಸೋಯಾ ಕಚ್ಚಾ	1550 (1555)
ಪಾಮ್ ವಾರದ ಡೆಲಿವರಿ	1558 (1568)
ಸೂರ್ಯಕಾಂತಿ ಎಣ್ಣೆ ಕಚ್ಚಾ	1830 (1830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,300 (50,200)
ಬೆಳ್ಳಿ ಕೆ.ಜಿ 61,250 (60,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹60-444
ದ್ವಿತಳಿ (ಬಿ.ವಿ) ₹201-677

ಗ್ರೆನೇಡ್ ದಾಳಿ: ಒಬ್ಬ ಸಾವು, ಮೂವರಿಗೆ ಗಾಯ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲ ಜಿಲ್ಲೆಯ ದೇವಾನ್ ಬಾಗ್ ಪ್ರದೇಶದಲ್ಲಿ ನೂತನವಾಗಿ ತೆರೆಯಲಾಗಿದ್ದ ಮದ್ಯದಂಗಡಿ ಮೇಲೆ ಮಂಗಳವಾರ ಶಂಕಿತ ಉಗ್ರರು ಗ್ರೆನೇಡ್ ಎಸೆದಿದ್ದು, ಘಟನೆಯಲ್ಲಿ ಅಂಗಡಿಯ ನೌಕರರೊಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಕೊಬ್ಬರಿ ಧಾರಣೆ

ಪುತ್ತೂರು ₹4500-10500

ನಕಲಿ ಖಾತೆ ಟ್ವಿಟರ್ ಖರೀದಿಗೆ ಅಡ್ಡಿ?

ಲಂಡನ್ (ಎಪಿ): ಟ್ವಿಟರ್ ಖಾತೆಗಳ ಪೈಕಿ ನಕಲಿ ಖಾತೆಗಳ ಪ್ರಮಾಣವು ಶೇಕಡ 5ಕ್ಕಿಂತ ಕಡಿಮೆ ಎಂಬುದನ್ನು ಕಂಪನಿಯು ಸಾರ್ವಜನಿಕವಾಗಿ, ಆಧಾರ ಸಹಿತ ತೋರಿಸಿಕೊಟ್ಟರೆ ಮಾತ್ರ ಟ್ವಿಟರ್ ಖರೀದಿ ಪ್ರಕ್ರಿಯೆಯು ಮುಂದಕ್ಕೆ ಸಾಗುತ್ತದೆ ಎಂದು ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಹೇಳಿದ್ದಾರೆ.

‘ನಕಲಿ ಖಾತೆಗಳ ಪ್ರಮಾಣ ಶೇ 5ರಷ್ಟು ಮಾತ್ರ ಎಂಬುದನ್ನು ಸಾಬೀತು ಮಾಡಲು ಟ್ವಿಟರ್ ಸಿಇಒ ಸಾರ್ವಜನಿಕವಾಗಿ ಹಿಂದೇಟು ಹಾಕಿದರು. ಅವರು ಅದನ್ನು ಸಾಬೀತು ಮಾಡದ ಹೊರತು ಒಪ್ಪಂದ ಮುಂದುವರಿಯದು’ ಎಂದು ಮಸ್ಕ್ ಹೇಳಿದ್ದಾರೆ.

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

ಶ್ರೀಲಂಕಾದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು: ಅಧ್ಯಕ್ಷರಿಗೆ 119 ಸದಸ್ಯರ ಬೆಂಬಲ, 68 ಸದಸ್ಯರ ವಿರೋಧ

ಗೋಟಬಯ ವಿರುದ್ಧ ಅವಿಶ್ವಾಸಕ್ಕೆ ಸೋಲು

ಕೊಲಂಬೊ (ಪಿಟಿಐ): ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸ ಅವರ ವಿರುದ್ಧ ಸಂಸತ್ತಿನಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯ ತಿರಸ್ಕೃತಗೊಂಡಿದೆ. ರಾಜಪಕ್ಸ ವಿರುದ್ಧ ದೇಶವ್ಯಾಪಿ ವ್ಯಕ್ತವಾಗಿರುವ ಆಕ್ರೋಶದ ನಡುವೆಯೂ ರಾಜಪಕ್ಸ ಅವರಿಗೆ ದೊರೆತ ಜಯ ಇದಾಗಿದೆ.



ಗೋಟಬಯ ರಾಜಪಕ್ಸ

ವಿರೋಧಪಕ್ಷ ತಮಿಳು ನ್ಯಾಷನಲ್ ಅಲೈಯನ್ಸ್ (ಟಿಎನ್‌ಎ) ಸದಸ್ಯ ಎಂ.ಎ.ಸುಮಂತಿರನ್ ಅವರು ಅವಿಶ್ವಾಸ ನಿರ್ಣಯ ಮಂಡಿಸಿದ್ದರು. 119 ಸದಸ್ಯರು ಇದರ ವಿರುದ್ಧ ಮತ ಚಲಾಯಿಸಿದರೆ 68 ಸದಸ್ಯರು ಪರವಾಗಿ ಮತ ಚಲಾಯಿಸಿದರು.

ವಿರೋಧಪಕ್ಷ ಸಮಗಿಜನ ಬಲವೇಗಯ (ಎಸ್‌ಜೆಪಿ) ಸದಸ್ಯ ಲಕ್ಷ್ಮಣ್ ಕಿರಿಲ್ಲಾ ನಿರ್ಣಯವನ್ನು ಬೆಂಬಲಿಸಿದರು ಎಂದು ಎಕಾನಮಿ ನೆಕ್ಸ್ಟ್ ಪತ್ರಿಕೆ ವರದಿ ಮಾಡಿದೆ.

ಆರ್ಥಿಕ ಬಿಕ್ಕಟ್ಟಿನ ಕಾರಣ ಅಧ್ಯಕ್ಷರ ವಿರುದ್ಧ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿದ್ದು, ರಾಜೀನಾಮೆಗೆ ಒತ್ತಾಯಿಸಲಾಗುತ್ತಿದೆ. ಅವರ ಬಗ್ಗೆ ಅವಿಶ್ವಾಸ ವ್ಯಕ್ತಪಡಿಸುವ ನಿರ್ಣಯ ಕುರಿತು ಚರ್ಚೆಯಾಗಬೇಕು ಎಂದು ಒತ್ತಾಯಿಸಲಾಗಿತ್ತು.

ಪ್ರಧಾನಿಯಾಗಿದ್ದ ಅಧ್ಯಕ್ಷರ ತಮ್ಮ ಮಹಿಂದಾ ರಾಜಪಕ್ಷ ಮೇ 9ರಂದು ರಾಜೀನಾಮೆ ನೀಡಿದ್ದರು. ಬಳಿಕ ಸರ್ವಪಕ್ಷಗಳ ಮಧ್ಯಂತರ ಸರ್ಕಾರ ರಚನೆಯಾಗಿತ್ತು. ರಾನಿಲ್ ವಿಕ್ರಮಸಿಂಘೆ ಪ್ರಧಾನಿಯಾಗಿ ನೇಮಕಗೊಂಡಿದ್ದರು.

ಅಜಿತ್ ರಾಜಪಕ್ಸ ಡೆಪ್ಯುಟಿ ಸ್ಪೀಕರ್: ಶ್ರೀಲಂಕಾ ಸಂಸತ್ತಿನ ಉಪಾಧ್ಯಕ್ಷರಾಗಿ ಆಡಳಿತ ಪಕ್ಷದ ಸದಸ್ಯ ಅಜಿತ್ ರಾಜಪಕ್ಸ ಆಯ್ಕೆಯಾಗಿದ್ದಾರೆ. ಗೋಪ್ಯವಾಗಿ ನಡೆದ ಮತದಾನದಲ್ಲಿ ಆಡಳಿತ ಪಕ್ಷ ಶ್ರೀಲಂಕಾ ಪೊಡುಜನ ಪೆರಮುನ ಪಾರ್ಟಿಯ, 48 ವರ್ಷದ ಅಜಿತ್ ಆಯ್ಕೆಯಾದರು. ಅಜಿತ್ ಪರವಾಗಿ 109 ಮತಗಳು, ಪ್ರತಿಪಕ್ಷದ ಸಮಗಿ ಜನ ಬಲವೇಗಯ ಪಕ್ಷದ ರೋಹಿಣಿ ಕವಿರತ್ನ ಅವರಿಗೆ 78 ಮತಗಳು ಬಂದವು.

ಇಬ್ಬರು ಸಂಸದರ ಬಂಧನ: ಸರ್ಕಾರದ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ಮೇಲೆ ದಾಳಿ ನಡೆಸಿದ ಆರೋಪದ ಮೇಲೆ ಆಡಳಿತಾರೂಢ ಪಕ್ಷದ ಇಬ್ಬರು ಸಂಸದರಾದ ಸನತ್ ನಿಶಾಂತ ಮತ್ತು ಮಿಲನ್ ಜಯತಿಲಕೆ ಅವರನ್ನು ಮಂಗಳವಾರ ಬಂಧಿಸಲಾಗಿದೆ.

ಸಂಬಳ ಪಾವತಿಗಾಗಿ 'ಶ್ರೀಲಂಕಾ ಏರ್‌ಲೈನ್ಸ್' ಮಾರಾಟಕ್ಕೆ ಚಿಂತನೆ

ಕೊಲಂಬೊ: ಸರ್ಕಾರಿ ನೌಕರರಿಗೆ ಸಂಬಳ ಪಾವತಿಗಾಗಿ ನೋಟು ಮುದ್ರಿಸಲು ಅನುಮತಿ ನೀಡಬೇಕಾದ ಪರಿಸ್ಥಿತಿ ಇದೆ ಎಂದು ಶ್ರೀಲಂಕಾದ ನೂತನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಹೇಳಿದ್ದಾರೆ.

ಸದ್ಯದ ಆರ್ಥಿಕ ಪರಿಸ್ಥಿತಿ ಕುರಿತು ದೇಶವನ್ನು ಉದ್ದೇಶಿಸಿ ಸೋಮವಾರ ಮಾತನಾಡಿದ ಅವರು, 'ನನಗೆ ಸತ್ಯವನ್ನು ಮರೆಮಾಚುವ ಮತ್ತು ಸಾರ್ವಜನಿಕರಿಗೆ ಸುಳ್ಳು ಹೇಳುವ ಬಯಕೆಯಿಲ್ಲ. ಈ ಸಂಗತಿಗಳು ಅಹಿತಕರವಾಗಿದ್ದರೂ ಹೇಳಲೇಬೇಕಾಗಿದೆ' ಎಂದಿದ್ದಾರೆ. ಭಾರೀ ನಷ್ಟದಲ್ಲಿರುವ ಶ್ರೀಲಂಕಾ ಏರ್‌ಲೈನ್ಸ್ ಖಾಸಗೀಕರಣಗೊಳಿಸಲು ಚಿಂತಿಸಿರುವುದಾಗಿಯೂ ವಿಕ್ರಮಸಿಂಘೆ ಹೇಳಿದರು. ಕಳೆದ ವರ್ಷ ಶ್ರೀಲಂಕಾ ಏರ್‌ಲೈನ್ಸ್ ₹960 ಕೋಟಿಯಷ್ಟು ನಷ್ಟ ಅನುಭವಿಸಿದೆ.

'ನಾವು ಶ್ರೀಲಂಕಾ ಏರ್‌ಲೈನ್ಸ್ ಖಾಸಗೀಕರಣಗೊಳಿಸಿದರೂ, ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ವಿಮಾನದೊಳಗೆ ಕಾಲೇ ಇಡದ ಮುಗ್ಧ ಜನರು ಈ ನಷ್ಟ ಭರಿಸಬೇಕಾಗಿ ಬಂದಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು. 'ನೋ ಪೆಟ್ರೋಲ್' ಫಲಕ: ಶ್ರೀಲಂಕಾದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ಅಭಾವ ತೀವ್ರಗೊಂಡಿದೆ. ಮಂಗಳವಾರ ಪೆಟ್ರೋಲ್ ಬಂಕ್‌ಗಳ ಎದುರು 'ಪೆಟ್ರೋಲ್ ಇಲ್ಲ' ಎಂಬ ಫಲಕ ಹಾಕಲಾಗಿತ್ತು. ಇದರಿಂದ ವಾಹನ ಸವಾರರು ಇಂಧನ ಸಿಗದೆ ಪರದಾಡಿದರು.

ನ್ಯಾಯಾಲಯ ಕಮಿಷನರ್ ವಜಾ

ಜ್ಞಾನವಾಪಿ ಮಸೀದಿ ವಿಡಿಯೊ ಸಮೀಕ್ಷೆ ವರದಿ ಸೋರಿಕೆ

ಲಖನೌ (ಪಿಟಿಐ): ಜ್ಞಾನವಾಪಿ ಮಸೀದಿಯ ಒಳಭಾಗದ ವಿಡಿಯೊ ಸಮೀಕ್ಷೆಗಾಗಿ ನೇಮಿಸಲಾಗಿದ್ದ ನ್ಯಾಯಾಲಯ ಕಮಿಷನರ್ ಅಜಯ್ ಕುಮಾರ್ ಮಿಶ್ರಾ ಅವರನ್ನು ವಾರಾಣಸಿ ನ್ಯಾಯಾಲಯವು ಮಂಗಳವಾರ ವಜಾ ಮಾಡಿದೆ. ಸಮೀಕ್ಷೆಯ ವಿವರಗಳನ್ನು ಸೋರಿಕೆ ಮಾಡಿದ ಆರೋಪದ ಮೇಲೆ, ಅವರ ವಿರುದ್ಧ ನ್ಯಾಯಾಲಯವು ಈ ಕ್ರಮ ತೆಗೆದುಕೊಂಡಿದೆ. ಜತೆಗೆ ಸಮೀಕ್ಷೆಯ ವರದಿಯನ್ನು ಸಲ್ಲಿಸಲು ಆಯೋಗಕ್ಕೆ ಇನ್ನೂ 2 ದಿನ ಕಾಲಾವಕಾಶ ನೀಡಿದೆ.

ವಿಡಿಯೊ ಸಮೀಕ್ಷೆಯ ವರದಿಯನ್ನು ಮಂಗಳವಾರ ಸಲ್ಲಿಸಬೇಕು ಎಂದು ವಾರಾಣಸಿ ನ್ಯಾಯಾಲಯವು ಈ ಹಿಂದೆ ಸೂಚಿಸಿತ್ತು. ಆದರೆ ವರದಿ ಸಲ್ಲಿಕೆಗೂ ಮುನ್ನವೇ, ಮಸೀದಿಯ ಒಳಭಾಗದ ಕೊಳದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು ಕೆಲವು ಹಿಂದೂ ವಕೀಲರು ಸೋಮವಾರವೇ ಹೇಳಿದ್ದರು. ಈ ಬಗ್ಗೆ ವಾರಾಣಸಿ ನ್ಯಾಯಾಲಯವು ಮಂಗಳವಾರದ ವಿಚಾರಣೆ ವೇಳೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. 'ಅಜಯ್ ಕುಮಾರ್ ಮಿಶ್ರಾ ಅವರು ನಿಯೋಜಿಸಿದ್ದ ಕ್ಯಾಮೆರಾಮನ್, ವಿಡಿಯೊ ಸಮೀಕ್ಷೆಯ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡುತ್ತಲೇ ಇದ್ದಾರೆ. ಇದು ನ್ಯಾಯಾಂಗ ಘನತೆಗೆ ವಿರುದ್ಧವಾದುದು. ಈ ಕಾರಣದಿಂದ ಅಜಯ್ ಕುಮಾರ್ ಮಿಶ್ರಾ ಅವರನ್ನು ನ್ಯಾಯಾಲಯ ಕಮಿಷನರ್ ಹುದ್ದೆಯಿಂದ ತಕ್ಷಣವೇ ವಜಾ ಮಾಡಲಾಗಿದೆ' ಎಂದು ಹೇಳಿತು. ವಿಡಿಯೊ ಸಮೀಕ್ಷೆ ಆಯೋಗದ ಕಮಿಷನರ್ ಆಗಿ ವಿಶಾಲ್ ಸಿಂಗ್ ಅವರನ್ನು ನೇಮಕ ಮಾಡಿತು.

'ಸಮೀಕ್ಷೆ ವೇಳೆ ನೂರಾರು ಚಿತ್ರಗಳನ್ನು ತೆಗೆಯಲಾಗಿದೆ ಮತ್ತು ವಿಡಿಯೊ ಹಲವು ಗಂಟೆಗಳಷ್ಟು ದೀರ್ಘವಾಗಿದೆ. ಹೀಗಾಗಿ ವರದಿ ಸಿದ್ಧಪಡಿಸಲು ಮತ್ತಷ್ಟು ಸಮಯ ಬೇಕು' ಎಂದು ಆಯೋಗವು ನ್ಯಾಯಾಲಯದ ಎದುರು ಮನವಿ ಮಾಡಿಕೊಂಡಿತು. ಇದನ್ನು ಮಾನ್ಯ ಮಾಡಿದ ನ್ಯಾಯಾಲಯವು, ವರದಿ ಸಲ್ಲಿಸಲು ಇನ್ನೂ ಎರಡು ದಿನ ಸಮಯ ನೀಡಿತು.

> **ನ್ಯಾಯಾಲಯ ಕಮಿಷನರ್ ಅಜಯ್ ಕುಮಾರ್ ಮಿಶ್ರಾ ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ಬೇಜವಾಬ್ದಾರಿ ತೋರಿದ್ದಾರೆ**
> **ವಾರಾಣಸಿ ನ್ಯಾಯಾಲಯ**

> **ನಾನು ಪಕ್ಷಾತೀತವಾಗಿ ಕೆಲಸ ಮಾಡಿದ್ದೆ. ಆದರೆ ನಾನು ನಿಯೋಜನೆ ಮಾಡಿದ್ದ ಕ್ಯಾಮೆರಾಮನ್ ನನಗೆ ಮೋಸ ಮಾಡಿದ. ಆದರೆ ನಾನು ಶಿಕ್ಷೆ ಅನುಭವಿಸಿದೆ**
> **ಅಜಯ್ ಕುಮಾರ್ ಮಿಶ್ರಾ**
> ವಜಾಗೊಂಡ ಕಮಿಷನರ್

> **ವಿಡಿಯೊ ಸಮೀಕ್ಷೆಯ ವಿವರಗಳ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ. ಆದರೆ ಎರಡು ದಿನಗಳಲ್ಲಿ ಸಂಪೂರ್ಣ ವರದಿಯನ್ನು ನ್ಯಾಯಾಲಯಕ್ಕೆ ನೀಡುತ್ತೇನೆ**
> **ವಿಶಾಲ್ ಸಿಂಗ್**
> ನೂತನ ಕಮಿಷನರ್

ಉಕ್ರೇನ್‌ನ 260 ಯೋಧರ ರಕ್ಷಣೆ

ಕೀವ್ (ಎಎಫ್‌ಪಿ): ಉಕ್ರೇನ್‌ನ ಮರಿಯುಪೋಲ್ ನಗರದಲ್ಲಿ ರಷ್ಯಾ ವಶಕ್ಕೆ ಪಡೆದಿದ್ದ ಅಜೋವ್‌ಸ್ಟಾಲ್ ಉಕ್ಕು ಸ್ಥಾವರದಲ್ಲಿ ಸಿಕ್ಕಿಬಿದ್ದಿದ್ದ 260ಕ್ಕೂ ಹೆಚ್ಚು ಯೋಧರನ್ನು ರಕ್ಷಿಸಲಾಗಿದೆ ಎಂದು ಉಕ್ರೇನ್ ತಿಳಿಸಿದೆ.

ಈ ಪೈಕಿ 53 ಯೋಧರು ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ನೊವೊಜೊವಸ್ಕ್‌ಗೆ ವೈದ್ಯಕೀಯ ಚಿಕಿತ್ಸೆಗಾಗಿ ಕರೆತರಲಾಗಿದೆ ಎಂದು ಉಕ್ರೇನ್‌ನ ಉಪ ರಕ್ಷಣಾ ಸಚಿವ ಗನ್ನಾ ಮಲ್ಯಾರ್ ತಿಳಿಸಿದ್ದಾರೆ. ಈ ಮಧ್ಯೆ, '265 ಯೋಧರು ಶರಣಾಗಿದ್ದಾರೆ' ಎಂದು ರಷ್ಯಾ ಪ್ರಕಟಿಸಿದೆ.

ಉಳಿದ211ಜನಯೋಧರನ್ನುಒಲೆನಿವ್ಕಾಗೆಮಾನವೀಯ ಕಾರಿಡಾರ್ ಮೂಲಕ ಕರೆತರಲಾಗಿದೆ ಎಂದು ತಿಳಿಸಿದ್ದಾರೆ. ನೊವೊಜೊವಸ್ಕ್ ಮತ್ತು ಒಲೆನಿವ್ಕಾ ಎರಡೂ ನಗರಗಳು ಪ್ರಸ್ತುತ ರಷ್ಯಾ ಬೆಂಬಲಿತ ಪ್ರತ್ಯೇಕತಾ ಬಣದ ನಿಯಂತ್ರಣದಲ್ಲಿಯೇ ಇವೆ.

'ನಮ್ಮ ಯೋಧರನ್ನು ರಕ್ಷಿಸುವ ಭರವಸೆ ಇದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. 'ಉಕ್ರೇನ್ ಯೋಧರು ಜೀವಂತವಾಗಿ ಬರಬೇಕು. ಇದು ನಮ್ಮ ನಿಲುವು' ಎಂದು ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.

ರಷ್ಯಾ ಹೇಳಿಕೆ: ಮರಿಯುಪೋಲ್‌ನ ಅಜೋವ್‌ಸ್ಟಾಲ್ ಉಕ್ಕುಸ್ಥಾವರದಲ್ಲಿ ಬೀಡುಬಿಟ್ಟಿದ್ದ ಉಕ್ರೇನ್‌ನ 265 ಯೋಧರು ಶರಣಾಗತರಾಗಿದ್ದಾರೆ ಎಂದು ರಷ್ಯಾ ಹೇಳಿದೆ. ಬಂದರು ನಗರವನ್ನು ಕಳೆದ ತಿಂಗಳು ರಷ್ಯಾ ಸೇನೆ ಸುತ್ತುವರಿದಿತ್ತು. ಈ ಬೆಳವಣಿಗೆಯ ಹಿಂದೆಯೇ ಉಕ್ರೇನ್‌ನ ಹಲವು ಯೋಧರು ಅಜೋವ್‌ಸ್ಟಾಲ್ ಕೈಗಾರಿಕಾ ವಲಯದ ಸುರಂಗ ಮಾರ್ಗಗಳಲ್ಲಿ ಆಶ್ರಯ ಪಡೆದಿದ್ದರು ಎಂದು ತಿಳಿಸಿದೆ.

ಶೆಲ್ ದಾಳಿ: ಉಕ್ರೇನ್‌ನ ಹಾರ್ಕಿವ್ ನಗರದ ವಿವಿಧೆಡೆ ರಷ್ಯಾದ ಶೆಲ್ ದಾಳಿ ಮುಂದುವರಿದಿದೆ.



ರಷ್ಯಾ ವಶಪಡಿಸಿಕೊಂಡ ಉಕ್ರೇನ್‌ನ ಅಜೊವೊಸ್ಟಾಲ್ ಉಕ್ಕು ಸ್ಥಾವರದಿಂದ ರಕ್ಷಿಸಲಾದ ಉಕ್ರೇನ್ ಯೋಧರನ್ನು ಕರೆದೊಯ್ಯುತ್ತಿರುವ ಚಿತ್ರವನ್ನು ರಷ್ಯಾದ ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿದೆ –ಎಎಫ್‌ಪಿ ಚಿತ್ರ

ನ್ಯಾಟೊ: ಸ್ವೀಡನ್, ಫಿನ್ಲೆಂಡ್ ಇಂದು ಅರ್ಜಿ

ಸ್ಟಾಕ್‌ಹೋಮ್: 'ನ್ಯಾಟೊ ಸದಸ್ಯತ್ವ ಪಡೆಯುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು ಸ್ವೀಡನ್ ಹಾಗೂ ಫಿನ್ಲೆಂಡ್ ಬುಧವಾರ ಸಲ್ಲಿಸಲಿವೆ' ಎಂದು ಸ್ವೀಡನ್ ಪ್ರಧಾನಿ ಮ್ಯಾಗ್ಡಲೀನಾ ಆಂಡರ್ಸನ್ ಮಂಗಳವಾರ ಹೇಳಿದ್ದಾರೆ.

ಫಿನ್ಲೆಂಡ್ ಅಧ್ಯಕ್ಷ ಸೌಲಿ ನಿನಿಸ್ಟೊ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸದಸ್ಯತ್ವಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ಎರಡೂ ದೇಶಗಳು ಒಟ್ಟಾಗಿ ಪೂರ್ಣಗೊಳಿಲಿವೆ' ಎಂದರು.

ಬ್ರಿಟನ್ ಬೆಂಬಲ: ಫಿನ್ಲೆಂಡ್, ಸ್ವೀಡನ್ ದೇಶಗಳು ನ್ಯಾಟೊ ಸದಸ್ಯತ್ವ ಪಡೆಯುವ ಪ್ರಸ್ತಾವಕ್ಕೆ ಬ್ರಿಟನ್ ಬೆಂಬಲಿಸಿದೆ.

ಹೊರ ನಡೆದ ರಷ್ಯಾ

ಮಾಸ್ಕೊ (ಎಎಫ್‌ಪಿ): ಬಾಲ್ಟಿಕ್ ಸಾಗರ ರಾಷ್ಟ್ರಗಳ ಮಂಡಳಿಯನ್ನು (ಸಿಬಿಎಸ್‌ಎಸ್) ತೊರೆಯುತ್ತಿರುವುದಾಗಿ ರಷ್ಯಾ ಮಂಗಳವಾರ ಹೇಳಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿದ ನಂತರ ಪಶ್ಚಿಮ ರಾಷ್ಟ್ರಗಳೊಂದಿಗಿನ ಅದರ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿದೆ. ಇದರ ಬೆನ್ನಲ್ಲೇ, ರಷ್ಯಾದಿಂದ ಈ ನಿರ್ಧಾರ ಹೊರಬಿದ್ದಿದೆ.

ಉತ್ತರ ಕೊರಿಯಾದಲ್ಲಿ ಕೋವಿಡ್ ಪ್ರಕರಣಗಳ ಏರುಗತಿ

ಕಿಮ್ ಜಾಂಗ್ ಉನ್‌ಗೆ ಇಕ್ಕಟ್ಟು

ಸೋಲ್(ಎಪಿ): ಉತ್ತರ ಕೊರಿಯಾದಲ್ಲಿ ಕೋವಿಡ್ ಪರಿಸ್ಥಿತಿ ಉಲ್ಬಣಗೊಂಡಿರುವುದರಿಂದ ಅಲ್ಲಿನ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಅಂತರರಾಷ್ಟ್ರೀಯ ನೆರವು ಪಡೆಯಲು ಹಿಂದೇಟು ಹಾಕುವ ಅವರು ದಶಕಗಳಿಂದ ಸ್ವಾವಲಂಬನೆಯ ಆಡಳಿತ ನಡೆಸುತ್ತಿದ್ದಾರೆ. ಆದರೆ, ಕೋವಿಡ್ ಪಿಡುಗು ಅವರನ್ನು ಪೇಚಿಗೆ ಸಿಲುಕಿಸಿದೆ ಎಂದು ಮೂಲಗಳು ಹೇಳಿವೆ.

ಉತ್ತರ ಕೊರಿಯಾದಲ್ಲಿ ಸಾವಿರಾರು ಮಂದಿಗೆ ಕೋವಿಡ್ ತಗುಲಿರುವ ಶಂಕೆ ವ್ಯಕ್ತವಾಗಿದೆ. ಸಾಂಕ್ರಾಮಿಕದ ವಿರುದ್ಧ ಹೋರಾಡಲು ಪ್ರತಿಷ್ಠೆ ಬಿಟ್ಟು ಅಂತರರಾಷ್ಟ್ರೀಯ ಸಮುದಾಯದ ನೆರವು ಪಡೆಯಬೇಕೇ ಅಥವಾ ಏಕಾಂಗಿಯಾಗಿಯೇ ಕೊರೊನಾ ನಿರ್ಮೂಲನೆಗೆ ಶ್ರಮಿಸಬೇಕೇ ಎಂಬ ದ್ವಂದ್ವ ಪರಿಸ್ಥಿತಿಯಲ್ಲಿ ಕಿಮ್ ಜಾಂಗ್ ಉನ್ ಸಿಲುಕಿದ್ದಾರೆ.

'ಕಿಮ್ ಜಾಂಗ್ ಉನ್ ದ್ವಂದ್ವದಲ್ಲಿದ್ದಾರೆ' ಎಂದು ಸೋಲ್‌ನಲ್ಲಿರುವ ಕ್ಯುಂಗ್ನಮ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಲಿಮ್ ಯುಲ್-ಚುಲ್ ಹೇಳಿದ್ದಾರೆ.

'ಕಿಮ್ ಅವರು ಪಾಶ್ಚಾತ್ಯ ದೇಶಗಳ ಅಥವಾ ಅಮೆರಿಕದ ನೆರವು ಪಡೆದಿದ್ದೇ ಆದಲ್ಲಿ ಅವರ ಪ್ರತಿಷ್ಠೆಗೆ, ಸ್ವಾವಲಂಬನೆಗೆ ಹೊಡೆತ ಬೀಳಲಿದೆ. ಅಲ್ಲದೆ, ಕಿಮ್ ಮೇಲಿನ ಸಾರ್ವಜನಿಕರ ವಿಶ್ವಾಸವೂ ಕಡಿಮೆಯಾಗಬಹುದು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

14.8 ಲಕ್ಷ ಮಂದಿಗೆ ಜ್ವರ: ಕೋವಿಡ್ ಸೋಂಕು ಪತ್ತೆಯಾದ ಬಳಿಕ ದೇಶದಲ್ಲಿ ಜ್ವರ ತೀವ್ರವಾಗಿ ಹರಡುತ್ತಿದ್ದು, 2,69,510ಕ್ಕೂ ಹೆಚ್ಚು ಜನರಲ್ಲಿ ಹೊಸದಾಗಿ ಜ್ವರ ಕಾಣಿಸಿಕೊಂಡಿದೆ. ಆರು ಮಂದಿ ಮೃತಪಟ್ಟಿದ್ದಾರೆ ಎಂದು ಉತ್ತರ ಕೊರಿಯಾದ ಸರ್ಕಾರಿ ಮಾಧ್ಯಮ ಮಂಗಳವಾರ ವರದಿ ಮಾಡಿದೆ.

ಏಪ್ರಿಲ್‌ನಿಂದ ದೇಶದಾದ್ಯಂತ ಜ್ವರವು ವೇಗವಾಗಿ ಹರಡುತ್ತಿದ್ದು, ಇದುವರೆಗೆ ದೇಶದಲ್ಲಿ 56 ಮಂದಿ ಮೃತಪಟ್ಟಿದ್ದಾರೆ. 14.8 ಲಕ್ಷ ಮಂದಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇವರಲ್ಲಿ ಬಹುಪಾಲು ಕೋವಿಡ್‌ಗೆ ತುತ್ತಾಗಿದ್ದಾರೆ ಎಂದು ವಿದೇಶಿ ತಜ್ಞರು ಹೇಳಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿರುವ 6,63,910 ಮಂದಿಯನ್ನು ಚಿಕಿತ್ಸೆಗಾಗಿ ಪ್ರತ್ಯೇಕವಾಗಿ ಇರಿಸಲಾಗಿದೆ ಎಂದು ಹೇಳಿರುವ ಅಲ್ಲಿನ ಸರ್ಕಾರಿ ಮಾಧ್ಯಮ, ಜ್ವರದಿಂದ ಬಳಲುತ್ತಿರುವವರಲ್ಲಿ ಎಷ್ಟು ಮಂದಿಗೆ ಕೋವಿಡ್ ದೃಢಪಟ್ಟಿದೆ ಎಂಬುದನ್ನು ಹೇಳಿಲ್ಲ.

2 ಸಾವಿರಕ್ಕಿಂತ ಕಡಿಮೆ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ 28 ದಿನಗಳ ಬಳಿಕ ಕೋವಿಡ್ ದೃಢ ಪ್ರಮಾಣ 2 ಸಾವಿರಕ್ಕಿಂತ ಕಡಿಮೆ ದಾಖಲಾಗಿದ್ದು, ಮಂಗಳವಾರ ಹೊಸದಾಗಿ 1,579 ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 16,400ಕ್ಕೆ ಇಳಿಕೆಯಾಗಿದೆ. ಸೋಂಕಿನಿಂದ 19 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ ಕೇರಳದಲ್ಲೇ 18 ಮಂದಿ ಇದ್ದಾರೆ. ಪಾಸಿಟಿವಿಟಿ ಪ್ರಮಾಣ ಶೇ 0.44ರಷ್ಟಿದೆ. ಇದುವರೆಗೆ 191.48 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

ಇಂಡೊನೇಷ್ಯಾ: ಮಾಸ್ಕ್ ಕಡ್ಡಾಯವಲ್ಲ

ಜಕಾರ್ತ (ರಾಯಿಟರ್ಸ್): ಕೋವಿಡ್ ಪ್ರಕರಣಗಳ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ ಇಂಡೊನೇಷ್ಯಾದ ಸಾರ್ವಜನಿಕ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯವಲ್ಲ ಎಂದು ಅಧ್ಯಕ್ಷ ಜೋಕೊ ವಿಡೋಡೊ ಮಂಗಳವಾರ ಹೇಳಿದ್ದಾರೆ.

ಸದ್ಯ ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ನಿಯಂತ್ರಣದಲ್ಲಿದೆ. ಆದರೆ, ಸಾರ್ವಜನಿಕ ಸಾರಿಗೆ, ಒಳಾಂಗಣಗಳಲ್ಲಿ ಮತ್ತು ವೃದ್ಧರು ಸೇರಿದಂತೆ ರೋಗಿಗಳು ಮಾಸ್ಕ್ ಧರಿಸಬೇಕು ಎಂದು ತಿಳಿಸಿದ್ದಾರೆ.

ಶಾಂಘೈನಲ್ಲಿ ಕೋವಿಡ್ ಸಂಖ್ಯೆ ಶೂನ್ಯ

ಶಾಂಘೈ(ಎಎಫ್‌ಪಿ): ಚೀನಾದ ಶಾಂಘೈನಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದಾಖಲಾಗಿಲ್ಲ. ಆದರೂ ಲಾಕ್‌ಡೌನ್ ಜಾರಿಯಲ್ಲಿದೆ. 'ಲಾಕ್‌ಡೌನ್, ಸಾಮೂಹಿಕ ಸೋಂಕು ಪತ್ತೆ ಪರೀಕ್ಷೆ, ಕ್ವಾರಂಟೈನ್ ಸೇರಿ ಇತರೆ ಕ್ರಮಗಳಿಂದ ಶಾಂಘೈನ 16 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಶೂನ್ಯಕ್ಕೆ ಇಳಿದಿದೆ. ಮುಂದಿನ ವಾರದಿಂದ ಹಂತಹಂತವಾಗಿ ಲಾಕ್‌ಡೌನ್ ಸಡಿಲಿಸಿ, ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸಲಾಗುತ್ತದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗ ವಾಣಿ



ಸಂಕ್ಷಿಪ್ತ ಸುದ್ದಿ

ಎಬಿಡಿ, ಗೇಲ್‌ಗೆ ಆರ್‌ಸಿಬಿಯ ಹಾಲ್ ಆಫ್ ಫೇಮ್


ಕ್ರಿಸ್ ಗೇಲ್


ಡಿವಿಲಿಯರ್ಸ್

ಮುಂಬೈ (ಪಿಟಿಐ): ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಮತ್ತು ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾಗಿದ್ದಾರೆ.

ಆರ್‌ಸಿಬಿ ಹಾಲ್ ಆಫ್ ಫೇಮ್ ಸೇರಿದ ಮೊದಲ ಆಟಗಾರರೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಈ ವಿಷಯ ವನ್ನು ಆರ್‌ಸಿಬಿ ವೆಬ್‌ಸೈಟ್‌ನಲ್ಲಿ ಬರೆದಿದ್ದಾರೆ.

‘ಕ್ರಿಕೆಟ್‌ಗೆ ಹೊಸ ಸ್ವರೂಪ ಕೊಟ್ಟ ಶ್ರೇಯ ಎಬಿ ಡಿವಿಲಿಯರ್ಸ್‌ಗೆ ಸಲ್ಲುತ್ತದೆ. ಎಬಿಡಿಯ ಪ್ರಯೋಗಶೀಲತೆ, ದಿಟ್ಟತನ ಮತ್ತು ಕ್ರೀಡಾಮನೋಭಾವ ಅನುಕರಣೀಯ. ಆರ್‌ಸಿಬಿಗೆ ಪ್ಲೇ ಬೋಲ್ಡ್ ಎಂಬ ತತ್ವ ತಂದಿದ್ದು ಅವರೇ. ಇಬ್ಬರೂ ಆಟಗಾರರನ್ನು ಹಾಲ್ ಆಫ್ ಫೇಮ್‌ನಲ್ಲಿ ಸೇರ್ಪಡೆ ಮಾಡಿರುವುದು ಹೆಮ್ಮೆಯ ವಿಷಯ’ ಎಂದು ಕೊಹ್ಲಿ ಬರೆದಿದ್ದಾರೆ..

ಉದ್ದೀಪನ ಮದ್ದು: ಹಮ್ಜಾ ಅಮಾನತು

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಬ್ಯಾಟರ್ ಜುಬೇರ್ ಹಮ್ಜಾ ಅವರನ್ನು ಉದ್ದೀಪನ ಮದ್ದು ತಡೆ ನಿಯಮವನ್ನು ಉಲ್ಲಂಘಿಸಿದ್ದಾಗಿ ಅಮಾನತುಗೊಳಿಸಲಾಗಿದೆ. ಹೋದ ಜನವರಿ 17ರಂದು ಪಾರ್ಲ್‌ನಲ್ಲಿ ಅವರಿಂದ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಅವರು ನಿಷೇಧಿತ ಮದ್ದು ಫ್ಯುರೊಸೆಮೈಡ್ ಸೇವಿಸಿದ್ದು ಪರೀಕ್ಷೆಯಿಂದ ಖಚಿತವಾಗಿದೆ. ವಿಶ್ವ ಉದ್ದೀಪನ ಮದ್ದು ಘಟಕ (ವಾಡಾ) ನಿಷೇಧಿತ ಮದ್ದುಗಳ ಪಟ್ಟಿಯ ಸೆಕ್ಷನ್ 5ಎಸ್‌ನಲ್ಲಿ ಇದೆ.

‘ಸೊಳ್ಳೆ ರ‍್ಯಾಕೆಟ್’ ಸಂದೇಶಕ್ಕೆ ಮಿಶ್ರಾ ತಿರುಗೇಟು


ಅಮಿತ್ ಮಿಶ್ರಾ

ಬೆಂಗಳೂರು:ಇದೇ ಮೊದಲ ಸಲ ಥಾಮಸ್ ಕಪ್ ಜಯಿಸಿರುವ ಭಾರತ ಬ್ಯಾಡ್ಮಿಂಟನ್ ತಂಡವು ಐತಿಹಾಸಿಕ ಸಾಧನೆ ಮಾಡಿದೆ.

ಆದರೆ ಐಎಎಸ್ ಅಧಿಕಾರಿಯೊಬ್ಬರು ‘ಸೊಳ್ಳೆ ಸಾಯಿಸುವ ಎಲೆಕ್ಟ್ರಿಕ್ ರ‍್ಯಾಕೆಟ್’ ಚಿತ್ರದೊಂದಿಗೆ 'ಭಾರತವು ಬ್ಯಾಡ್ಮಿಂಟನ್‌ನಲ್ಲಿ ತಮಗಿಂತ ಹೇಗೆ ಉತ್ತಮಗೊಂಡಿದೆ ಎಂದು ಇಂಡೋನೇಷ್ಯಾ ಆಶ್ಚರ್ಯಗೊಂಡಿದೆ’ ಎಂದು ಟ್ವೀಟ್ ಮಾಡಿ ನೆಟ್ಟಿಗರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಈ ಸಂದೇಶ ಹಾಕಿದ ಅಧಿಕಾರಿ ಸೋಮೇಶ್ ಉಪಾಧ್ಯಾಯ ಅವರನ್ನು ಕ್ರಿಕೆಟಿಗ ಅಮಿತ್ ಮಿಶ್ರಾ ತರಾಟೆ ತೆಗೆದುಕೊಂಡಿದ್ದಾರೆ. ಟ್ವೀಟ್‌ಗೆ ಖಾರವಾಗಿ ಪ್ರತಿಕ್ರಿಯಿಸಿರುವ ಅಮಿತ್ ಮಿಶ್ರಾ, ‘ಇದೊಂದು ಕೆಟ್ಟ ಅಭಿರುಚಿಯಾಗಿದೆ. ನಮ್ಮ ಬ್ಯಾಡ್ಮಿಂಟನ್ ಹೀರೋಗಳ ಸಾಧನೆಗೆ ಮಾಡಿದ ಅವಮಾನ’ ಎಂದಿದ್ದಾರೆ.

ರಾಹುಲ್ ತ್ರಿಪಾಠಿ, ಉಮ್ರಾನ್ ಮಲಿಕ್ ಮಿಂಚು ; ಮುಂಬೈ ಇಂಡಿಯನ್ಸ್‌ಗೆ ಹತ್ತನೇ ಸೋಲು

ಸನ್‌ರೈಸರ್ಸ್‌ಗೆ ರೋಚಕ ಗೆಲುವು

ಮುಂಬೈ (ಪಿಟಿಐ): ರಾಹುಲ್ ತ್ರಿಪಾಠಿ ಅಬ್ಬರದ ಬ್ಯಾಟಿಂಗ್ ಮತ್ತು ಉಮ್ರಾನ್ ಮಲಿಕ್ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ಮಂಗಳವಾರ ಮುಂಬೈ ಇಂಡಿಯನ್ಸ್ ಎದುರು ರೋಚಕ ಜಯ ದಾಖಲಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ 193 ರನ್‌ಗಳ ಗುರಿ ಬೆನ್ನಟ್ಟಿದ್ದ ಮುಂಬೈ ತಂಡವು ದಿಟ್ಟ ಆಟವಾಡಿತು. 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 190 ರನ್ ಗಳಿಸಿ, ಮೂರು ರನ್‌ಗಳಿಂದ ಸೋಲನುಭವಿಸಿತು.

ರೋಹಿತ್ ಶರ್ಮಾ (48; 36ಎ) ಮತ್ತು ಇಶಾನ್ ಕಿಶನ್ (43; 34ಎ) ಮೊದಲ ವಿಕೆಟ್‌ಗೆ 95 ರನ್‌ಗಳನ್ನು ಸೇರಿಸಿ ಗಟ್ಟಿ ಬುನಾದಿ ಹಾಕಿದರು. ತಮ್ಮ ಎರಡನೇ ಸ್ಪೆಲ್‌ನಲ್ಲಿ ಉಮ್ರಾನ್ ಮಲಿಕ್ ಅವರು ಇಶಾನ್ ಕಿಶನ್, ಡೇನಿಯಲ್ ಸ್ಯಾಮ್ಸ್ ಮತ್ತು ತಿಲಕ್ ವರ್ಮಾ ಅವರ ವಿಕೆಟ್ ಕಬಳಿಸಿದರು. ಇದರಿಂದಾಗಿ ಮುಂಬೈ ಗೆಲುವಿನ ಹಾದಿ ಕಠಿಣವಾಯಿತು. ಆದರೆ ಈ ಹಂತದಲ್ಲಿ ಯುವ ಬ್ಯಾಟರ್ ಟಿಮ್ ಡೇವಿಡ್ (46; 18ಎ) ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಮತ್ತೆ ಜಯದ ಆಸೆ ಚಿಗುರಿತು. 255.56ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಅವರು ತಂಡವನ್ನು ಬಹುತೇಕ ಗೆಲುವಿನತ್ತ ತೆಗೆದುಕೊಂಡು ಬಂದರು. ನಾಲ್ಕು ಅಮೋಘ ಸಿಕ್ಸರ್‌ಗಳು ಮತ್ತು ಮೂರು ಬೌಂಡರಿಗಳ ಮೂಲಕ ಬೌಲರ್‌ಗಳಿಗೆ ನಡುಕ ಹುಟ್ಟಿಸಿದರು. ಆದರೆ, 18ನೇ ಓವರ್‌ನ ಕೊನೆಯ ಎಸೆತದಲ್ಲಿ ಅವರು ರನೌಟ್ ಆಗುವುದರೊಂದಿಗೆ ಜಯ ಸನ್‌ರೈಸರ್ಸ್‌ನತ್ತ ಹೊರಳಿತು.


ರಾಹುಲ್ ತ್ರಿಪಾಠಿ ಬ್ಯಾಟಿಂಗ್ –ಪಿಟಿಐ ಚಿತ್ರ

ಇಂದಿನ ಪಂದ್ಯ
ಕೋಲ್ಕತ್ತ ನೈಟ್ ರೈಡರ್ಸ್ Vs ಲಖನೌ ಸೂಪರ್ ಜೈಂಟ್ಸ್
ಸ್ಥಳ: ಮುಂಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್ ರಾತ್ರಿ 7.30

ಆದರೂ ಕೊನೆಯ ಓವರ್‌ನಲ್ಲಿ ಗೆಲುವಿಗೆ ಅಗತ್ಯವಿದ್ದ 19 ರನ್‌ಗಳನ್ನು ಗಳಿಸಲು ರಮಣದೀಪ್ ಸಿಂಗ್ (14; 6ಎ) ಮಾಡಿದ ಯತ್ನ ಫಲ ನೀಡಲಿಲ್ಲ. ಒಂದು ಬೌಂಡರಿ, ಒಂದು ಸಿಕ್ಸರ್ ಹೊಡೆದರು. ಒಟ್ಟು 15 ರನ್‌ಗಳು ಮಾತ್ರ ಈ ಓವರ್‌ನಲ್ಲಿ ಲಭಿಸಿದವು. ಮುಂಬೈ ಟೂರ್ನಿಯಲ್ಲಿ 10ನೇ ಸೋಲಿಗೆ ಶರಣಾಯಿತು.

ರಾಹುಲ್ ಬ್ಯಾಟಿಂಗ್: ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 193 ರನ್ ಗಳಿಸಿತು.

ರಾಹುಲ್ ತ್ರಿಪಾಠಿ (76; 44ಎ) ಅರ್ಧಶತಕ ಬಾರಿಸಿದ್ದು ತಂಡವು ಉತ್ತಮ ಮೊತ್ತ ಗಳಿಸಲು ಕಾರಣವಾಯಿತು. ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಪ್ರಿಯಂ ಗರ್ಗ್ ಅವರೊಂದಿಗೆ 78 ರನ್‌ಗಳನ್ನು ಸೇರಿಸಿದರು.

ಯುವ ಬ್ಯಾಟರ್ ಪ್ರಿಯಂ 26 ಎಸೆತಗಳಲ್ಲಿ 42 ರನ್ ಗಳಿಸಿದರು. ಹತ್ತನೇ ಓವರ್‌ನಲ್ಲಿ ರಮಣದೀಪ್ ಸಿಂಗ್ ಬೌಲಿಂಗ್‌ನಲ್ಲಿ ಪ್ರಿಯಂ ಔಟಾದರು. ಇದರೊಂದಿಗೆ ಜೊತೆಯಾಟವೂ ಮುರಿದುಬಿತ್ತು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 6ಕ್ಕೆ 193 (20 ಓವರ್)
ಅಭಿಷೇಕ್ ಸಿ ಮರ್ಕಂಡೆ ಬಿ ಸ್ಯಾಮ್ಸ್ 9 (10ಎ, 4X1), ಪ್ರಿಯಂ ಸಿ ಮತ್ತು ಬಿ ರಮಣದೀಪ್ 42 (26ಎ, 4X4, 6X2), ತ್ರಿಪಾಠಿ ಸಿ ತಿಲಕ್ ಬಿ ರಮಣದೀಪ್ 76 (44ಎ, 4X9, 6X3), ಪೂರನ್ ಸಿ ಮರ್ಕಂಡೆ ಬಿ ಮೆರಡಿತ್ 38 (22ಎ, 4X2, 6X3), ಮರ್ಕರಂ ಸಿ ಡೇವಿಡ್ ಬಿ ರಮಣದೀಪ್ 2 (4ಎ), ವಿಲಿಯಮ್ಸನ್ ಔಟಾಗದೆ 8 (7ಎ, 4X1), ಸುಂದರ್ ಬಿ ಬೂಮ್ರಾ 9 (7ಎ)
ಇತರೆ (ಬೈ 4, ವೈಡ್ 5) 9
ವಿಕೆಟ್ ಪತನ: 1–18 (ಅಭಿಷೇಕ್ ಶರ್ಮಾ, 2.4), 2–96 (ಪ್ರಿಯಂ ಗರ್ಗ್, 9.5), 3–172 (ಪೂರನ್, 16.5), 4–174 (ರಾಹುಲ್ ತ್ರಿಪಾಠಿ, 17.2), 5–175 (ಮರ್ಕರಂ, 17.6), 6–193 (ವಾಷಿಂಗ್ಟನ್ ಸುಂದರ್, 19.6)
ಬೌಲಿಂಗ್: ಡೇನಿಯಲ್ ಸ್ಯಾಮ್ಸ್ 4–0–39–1, ರಿಲಿ ಮೆರಡಿತ್ 4–0–44–1, ಸಂಜಯ್ ಯಾದವ್ 2–0–23–0, ಜಸ್‌ಪ್ರೀತ್ ಬೂಮ್ರಾ 4–0–32–1, ಮಯಂಕ್ ಮರ್ಕಂಡೆ 3–0–31–0, ರಮಣದೀಪ್ ಸಿಂಗ್ 3–0–20–3

ಮುಂಬೈ ಇಂಡಿಯನ್ಸ್ 7ಕ್ಕೆ 190 (20 ಓವರ್)
ರೋಹಿತ್ ಸಿ ಸುಚಿತ್ (ಬದಲಿ) ಬಿ ಸುಂದರ್ 48 (36ಎ, 4X2, 6X4), ಇಶಾನ್ ಸಿ ಪ್ರಿಯಂ ಬಿ ಉಮ್ರಾನ್ 43 (34ಎ, 4X5, 6X1), ಸ್ಯಾಮ್ಸ್ ಸಿ ಪ್ರಿಯಂ ಬಿ ಉಮ್ರಾನ್ 15 (11ಎ, 6X1), ತಿಲಕ್ ಸಿ ವಿಲಿಯಮ್ಸನ್ ಬಿ ಉಮ್ರಾನ್ 8 (9ಎ, 4X1), ಡೇವಿಡ್ ರನೌಟ್ (ನಟರಾಜನ್) 46 (18ಎ, 4X3, 6X4), ಸ್ಟಬ್ಸ್ ರನೌಟ್ (ಭುವನೇಶ್ವರ್) 2 (2ಎ), ರಮಣದೀಪ್ ಔಟಾಗದೆ 14 (6ಎ, 4X1, 6X1), ಸಂಜಯ್ ಸಿ ಸುಚಿತ್ (ಬದಲಿ) ಬಿ ಭುವನೇಶ್ವರ್ 0 (2ಎ), ಬೂಮ್ರಾ ಔಟಾಗದೆ 0 (4ಎ)
ಇತರೆ (ಬೈ 1, ಲೆಗ್‌ಬೈ 3, ನೋಬಾಲ್ 2, ವೈಡ್ 8) 14
ವಿಕೆಟ್ ಪತನ: 1–95 (ರೋಹಿತ್ ಶರ್ಮಾ, 10.4), 2–101 (ಇಶಾನ್ ಕಿಶನ್, 11.3), 3–123 (ತಿಲಕ್, 14.1), 4–127 (ಸ್ಯಾಮ್ಸ್, 14.6), 5–144 (ಸ್ಟಬ್ಸ್, 16.4), 6–175 (ಟಿಮ್ ಡೇವಿಡ್, 17.6), 7–175 (ಸಂಜಯ್, 18.2)
ಬೌಲಿಂಗ್: ಫಜ್ಲಾಕ್ ಫಾರೂಕಿ 4–0–31–0, ಭುವನೇಶ್ವರ್ ಕುಮಾರ್ 4–1–26–1, ಸುಂದರ್ 4–0–36–1, ಟಿ.ನಟರಾಜನ್ 4–0–60–0, ಉಮ್ರಾನ್ 3–0–23–3, ಅಭಿಷೇಕ್ 1–0–10–0

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 3 ರನ್ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	24
ಹಸರಂಗ	ಬೆಂಗಳೂರು	23
ಕಗಿಸೊ	ಪಂಜಾಬ್	22

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	627
ರಾಹುಲ್	ಲಖನೌ	469
ವಾರ್ನರ್	ಡೆಲ್ಲಿ	427

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	13	10	3	0	0	20	0.391
ರಾಜಸ್ಥಾನ	13	8	5	0	0	16	0.304
ಲಖನೌ	13	8	5	0	0	16	0.262
ಡೆಲ್ಲಿ	13	7	6	0	0	14	0.255
ಬೆಂಗಳೂರು	13	7	6	0	0	14	-0.323
ಕೋಲ್ಕತ್ತ	13	6	7	0	0	12	0.160
ಪಂಜಾಬ್	13	6	7	0	0	12	-0.043
ಹೈದರಾಬಾದ್	13	6	7	0	0	12	-0.230
ಚೆನ್ನೈ	13	4	9	0	0	8	-0.206
ಮುಂಬೈ	13	3	10	0	0	6	-0.577

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ರೆಫರಿ ಮೇಲೆ ಹಲ್ಲೆ: ಕುಸ್ತಿಪಟು ಸತ್ಯೆಂದರ್‌ಗೆ ಆಜೀವ ನಿಷೇಧ


ಸತ್ಯೆಂದರ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಆಯ್ಕೆ ಟ್ರಯಲ್ಸ್ ವೇಳೆ ರೆಫರಿ ಮೇಲೆ ಹಲ್ಲೆ ನಡೆಸಿದ ಕುಸ್ತಿಪಟು ಸತ್ಯೆಂದರ್ ಮಲಿಕ್ ಅವರಿಗೆ ರಾಷ್ಟ್ರೀಯ ಫೆಡರೇಷನ್ ಆಜೀವ ನಿಷೇಧ ಹೇರಿದೆ.

ಮಂಗಳವಾರ ನಡೆದ 125 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಸತ್ಯೆಂದರ್ ಅವರು ರೆಫರಿ ಜಗಬೀರ್ ಸಿಂಗ್ ಮೇಲೆ ಹಲ್ಲೆ ನಡೆಸಿದ್ದಾರೆ.

ಏರ್‌ಫೋರ್ಸ್ ತಂಡದ ಸತ್ಯೆಂದರ್, ಬೌಟ್ ಕೊನೆಗೊಳ್ಳಲು 18 ಸೆಕೆಂಡುಗಳಿರುವಾಗ 3–0ಯಿಂದ ಮುನ್ನಡೆಯಲ್ಲಿದ್ದರು. ಈ ವೇಳೆ ‘ಟೇಕ್‌ಡೌನ್’ ನಡೆ ಪ್ರಯೋಗಿಸಿದ ಎದುರಾಳಿ ಮೋಹಿತ್ ಸತ್ಯೆಂದರ್ ಅವರನ್ನು ಮ್ಯಾಟ್‌ನಿಂದ ಹೊರದೂಡಿದರು. ಆದರೆ ರೆಫರಿ ವೀರೇಂದ್ರ ಮಲಿಕ್ ಟೇಕ್‌ಡೌನ್‌ಗೆ ಮಾತ್ರ ಎರಡು ಪಾಯಿಂಟ್ ನೀಡಿ, ಹೊರದೂಡಿದ್ದಕ್ಕೆ ಪಾಯಿಂಟ್ ನೀಡಲಿಲ್ಲ.

ಇದರಿಂದ ಅಸಮಾಧಾನಗೊಂಡ ಮೋಹಿತ್, ಪಾಯಿಂಟ್‌ಗಾಗಿ ಮೇಲ್ಮನವಿ ಸಲ್ಲಿಸಿದರು. ಬೌಟ್‌ನ ಜ್ಯೂರಿ ಆಗಿದ್ದ ಸತ್ಯದೇವ್ ಮಲಿಕ್, ರೆಫರಿಯ ನಿರ್ಧಾರಕ್ಕೆ ಕ್ಷಮೆ ಕೋರಿದರು.

ಸೀನಿಯರ್ ರೆಫರಿ ಆಗಿದ್ದ ಜಗಬೀರ್ ಸಿಂಗ್ ಅವರು ಮೋಹಿತ್ ಮನವಿಯನ್ನು ಪರಿಗಣಿಸಿ ಟಿವಿ ಮರುಪರಿಶೀಲನೆಗೆ ಸೂಚಿಸಿದರು. ಬಳಿಕ ಮೋಹಿತ್ ಅವರಿಗೆ ಮೂರು ಪಾಯಿಂಟ್ಸ್ ನೀಡಿದರು. ಈ ವೇಳೆ ಬೌಟ್ 3–3ರಿಂದ ಸಮಬಲವಾಯಿತು. ಬೌಟ್ ಸಮಬಲದಲ್ಲೇ ಕೊನೆಯಾಯಿತು. ಆದರೆ ಬೌಟ್‌ನ ಕೊನೆಯ ಪಾಯಿಂಟ್ ಗಳಿಸಿದ್ದ ಮೋಹಿತ್ ಅವರನ್ನು ವಿಜಯೀ ಎಂದು ಪ್ರಕಟಿಸಲಾಯಿತು.

ಇದರಿಂದ ಸಂಯಮ ಕಳೆದುಕೊಂಡ ಸತ್ಯೆಂದರ್ ಇನ್ನೊಂದು ಬೌಟ್ ನಡೆಯುತ್ತಿದ್ದ ಮ್ಯಾಟ್‌ಗೆ ತೆರಳಿ ಅಲ್ಲಿದ್ದ ಜಗಬೀರ್ ಸಿಂಗ್ ಮೇಲೆ ಹಲ್ಲೆ ನಡೆಸಿದರು. ಆರಂಭದಲ್ಲಿ ಜಗಬೀರ್ ಅವರನ್ನು ನಿಂದಿಸಿದ ಸತ್ಯೆಂದರ್, ಬಳಿಕ ಕಪಾಳಕ್ಕೆ ಹೊಡೆದರು. ಇದರಿಂದ ಸಮತೋಲನ ಕಳೆದುಕೊಂಡ ರೆಫರಿ ನೆಲಕ್ಕೆ ಬಿದ್ದರು. ಹೀಗಾಗಿ ಆ ವೇಳೆ ನಡೆಯುತ್ತಿದ್ದ 57 ಕೆಜಿ ವಿಭಾಗದ ಫೈನಲ್ ಬೌಟ್‌ಅನ್ನು (ರವಿ ದಹಿಯಾ ಮತ್ತು ಅಮನ್ ನಡುವಣ) ಸ್ಥಗಿತಗೊಳಿಸಲಾಯಿತು.

ಬಳಿಕ ಸತ್ಯೆಂದರ್ ಅವರನ್ನು ಹೊರಗೆ ಕಳುಹಿಸಿ ಬೌಟ್ ಪುನರಾರಂಭಿಸಲಾಯಿತು. ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷನ್ ಶರಣ್ ಸಿಂಗ್ ಈ ಘಟನೆಗೆ ಸಾಕ್ಷಿಯಾದರು.

ಟೆನಿಸ್: ಪ್ರೀಕ್ವಾರ್ಟರ್‌ಗೆ ನಭಾ

ಬೆಂಗಳೂರು: ಎರಡನೇ ಶ್ರೇಯಾಂಕದ ಆರ್ನಾ ರಾಜ್ ಅವರಿಗೆ ಸೋಲುಣಿಸಿದ ಕರ್ನಾಟಕದ ನಭಾ ನಿಶಾನ್, ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ನಭಾ 6-1, 6-3ರಿಂದ ಒಡಿಶಾ ಆಟಗಾರ್ತಿಯನ್ನು ಮಣಿಸಿದರು.

ಮತ್ತೊಂದು ಪಂದ್ಯದಲ್ಲಿ ಒಡಿಶಾದ ಪಾವನಿ ಬಿಸ್ತ್ 6-4, 4-6, 10-7ರಿಂದ ಕರ್ನಾಟಕದ ಆದ್ಯಾ ಚೌರಾಸಿಯಾ ಅವರಿಗೆ ಸೋಲುಣಿಸಿದರು. ಇನ್ನೊಂದು ಹಣಾಹಣಿಯಲ್ಲಿ ನಯನಾ ಪಾರ್ಥ ಸಾರಥಿ 6-2, 2-6, 10-8ರಿಂದ ನವ್ಯಾ ಮುರಳಿ ಅವರಿಗೆ ಸೋಲುಣಿ ಸಿದರು.

ಬಾಲಕರ ವಿಭಾಗದಲ್ಲಿ ಅನುರಾಗ್ ಕಳ್ಳಂಬೆಳ್ಳ 6-0, 6-0ರಿಂದ ವಿಶ್ವನಾಥಂ ಪ್ರತ್ಯೂಷ್ ಎದುರು, ಆಯಾನ್ ತಾರೀನ್ 6-0, 6-2ರಿಂದ ಅಭಿವಧ್ಯ ಮಿಶ್ರಾ ವಿರುದ್ಧ ಜಯಿಸಿದರು.

ಮಿನಿ ಒಲಿಂಪಿಕ್ಸ್: ಈಜು ಸ್ಪರ್ಧೆಯಲ್ಲಿ ವಿಹಿತಾ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಹಿತಾ ನಯನಾ ಮಿನಿ ಒಲಿಂಪಿಕ್ಸ್ ಈಜು ಸ್ಪರ್ಧೆಯಲ್ಲಿ ಮಿಂಚಿದರು.

ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಯೋಜಿಸಿರುವ ಕೂಟದ ಎರಡನೇ ದಿನವಾದ ಮಂಗಳವಾರ ಇಲ್ಲಿನ ಬಸವನಗುಡಿ ಈಜುಕೇಂದ್ರದಲ್ಲಿ ವಿಹಿತಾ ಎರಡು ಚಿನ್ನ ಗೆದ್ದರು.

50 ಮೀಟರ್ಸ್ ಮತ್ತು 100 ಮೀ. ಬ್ರೆಸ್ಟ್‌ಸ್ಟ್ರೋಕ್ ನಲ್ಲಿ ವಿಹಿತಾ ಅಗ್ರಸ್ಥಾನ ಗಳಿಸಿದರು.

ಬೆಳಗಾವಿಯ ಪ್ರಿಯಾ ಎಂ. ಶೆಟ್ಟರ್ ಬಾಕ್ಸಿಂಗ್‌ನಲ್ಲಿ ಎರಡು ಚಿನ್ನ (37 ಕೆಜಿ ಮತ್ತು 40 ಕೆಜಿ ವಿಭಾಗ) ಗೆದ್ದರು.

ಶಿಶಿರ್ ಶೆಟ್ಟಿ ಗಳಿಸಿದ ಐದು ಗೋಲುಗಳ ನೆರವಿನಿಂದ ಮೈಸೂರು ತಂಡವು ಫುಟ್‌ಬಾಲ್ ಸ್ಪರ್ಧೆಗಳಲ್ಲಿ ಶುಭಾರಂಭ ಮಾಡಿತು.

ಮೈಸೂರು ಬಾಲಕರ ತಂಡವು ಎ ಗುಂಪಿನಲ್ಲಿ 13–0ರಿಂದ ವಿಜಯಪುರ ತಂಡಕ್ಕೆ ಸೋಲುಣಿಸಿತು.

ಶಿಶಿರ್ 5, 8, 13, 24 ಮತ್ತು 49ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಚಿರಂತನ್ ಎಸ್.ಕೆ. (9, 20 ಮತ್ತು 31ನೇ ನಿ.) ಕೂಡ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಬೆಳಗಾವಿ 5–1ರಿಂದ ಉತ್ತರ ಕನ್ನಡ ಎದುರು ಎದುರು ಜಯ ಗಳಿಸಿತು.

ಫಲಿತಾಂಶಗಳು: ಸೈಕ್ಲಿಂಗ್: 10 ಕಿ.ಮೀ. ಟೈಮ್ ಟ್ರಯಲ್: ಬಾಲಕರು: ತರುಣ್ ನಾಯಕ್–1 (ಕಾಲ: 13.02 ನಿಮಿಷ), ಯಲ್ಲೇಶ್ ಹುಡೇದ್–2, ಮಹೇಶ್ ಬಡಿಗೇರ್–3. ಬಾಲಕಿಯರು: ದೀಪಿಕಾ ಸಂಜೀವ್ ಫಡತಾರೆ–1 (ಕಾಲ: 15.04 ನಿ.), ಗಾಯತ್ರಿ ಕಿತ್ತೂರ–2, ಕೋಕಿಲಾ ಚವ್ಹಾನ್–3. ವೇಟ್‌ಲಿಫ್ಟಿಂಗ್: ಬಾಲಕಿಯರು: 49 ಕೆಜಿ ವಿಭಾಗ: ಸಮೀಕ್ಷಾ ಮನ್ಮೋಡೆ–1, ಹಿತೈಷಿನಿ ಎಸ್–1, ಶ್ರೇಯಾ ಕೆ–3. 55 ಕೆಜಿ: ಸಿಂಚನಾ ಎ.–1, ಸಾನ್ವಿ ಯಲಾಜಿ–2, ಅನುಸೂಯಾ–3. 81 ಕೆಜಿ: ಹಿಮಗೌರಿ ಜಮಾದಾರ–1, ಶ್ರೇಯಾಶ್ರೀ ಎನ್.ಕೆ–2, ಸಾನಿಕಾ–3. 45 ಕೆಜಿ: ಸೃಷ್ಟಿ ಮುತಗೇಕರ್–1, ದಕ್ಷಾ ಶೆಟ್ಟಿ–2, ಸಂಜನಾ ತುರಡಗಿ–3. ಈಜು: ಬಾಲಕಿಯರು: 400 ಮೀ. ಫ್ರೀಸ್ಟೈಲ್: ನೈಶಾ (ಕಾಲ: 4.53 ನಿ.)–1, ತಿಶ್ಯಾ ಸೋನಾರ್–2, ಆಸ್ರಾ ಸುಧೀರ್–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ವಿಹಿತಾ ನಯನಾ (ಕಾಲ: 35.06 ಸೆ.)–1, ಧಿನಿದಿ ದೇಸಿಂಗು–2, ತನಿಶಾ ಗುಪ್ತಾ–3, 100 ಮೀ. ಬ್ರೆಸ್ಟ್‌ಸ್ಟ್ರೋಕ್: ವಿಹಿತಾ ನಯನಾ (ಕಾಲ: 1.19 ನಿ.)–1, ತನಿಶಾ ಗುಪ್ತಾ–2, ತಾನಿಯಾ ಎಸ್.–3. 100 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಶಾ (ಕಾಲ: 1.12 ನಿ.)–1, ನಕ್ಷತ್ರ ಗೌತಮ್–2, ತನ್ಮಯಿ ಧರ್ಮೇಶ್–3. 200 ಮೀ. ಬ್ಯಾಕ್‌ಸ್ಟ್ರೋಕ್: ಧಿನಿದಿ ದೇಸಿಂಗು (ಕಾಲ: 2.34 ನಿ.)–1, ಹಷಿಕಾ ರಾಮಚಂದ್ರ–2, ಮೀನಾಕ್ಷಿ ಮೆನನ್–3. 100 ಮೀ. ಬಟರ್‌ಫ್ಲೈ: ಜನ್ಯಾ ಬಿ.ಎಸ್. (ಕಾಲ: 1.10 ನಿ.)–1, ತನಿಶಾ ವಿನಯ್–2, ಅಂಜಲಿ ಹೊಸಕೆರೆ–3. ವುಷು: ಬಾಲಕರು: ತಾವೊಲು–ತಜಿಕ್ವಾನ್: ಅಮಿತ್ ಎಸ್. ಆಡಿನ್–1, ಧೀರಜ್ ಎಸ್–2, ಜಿ.ಮನೋಜ್–3. ತಾವೊಲು ಚಾಂಗ್‌ಕ್ವಾನ್: ಮೇಘರಾಜ್ ಬಡಿಗೇರ–1, ಮನ್ವಿತ್ ಕೆ.ಎಲ್.–2, ಸತ್ಯಜೀತ್ ಪಾಟೀಲ್–3, ಅರ್ಜುನ್ ಅರವಿಂದ್ ಪೊಟ್ಟಿ–4


ವುಷು ಸ್ಪರ್ಧೆಯಲ್ಲಿ ಅರ್ಜುನ್ ಅರವಿಂದ ಪೊಟ್ಟಿ ಕಸರತ್ತು– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.


ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದ ಕರ್ನಾಟಕ ಮಹಿಳಾ ತಂಡ– ಹಾಕಿ ಇಂಡಿಯಾ ಮೀಡಿಯಾ ಚಿತ್ರ

ರಾಷ್ಟ್ರೀಯ ಹಾಕಿ: ಕರ್ನಾಟಕ ರನ್ನರ್‌ಅಪ್

ಭೋಪಾಲ್: ಒಡಿಶಾ ತಂಡವು ರಾಷ್ಟ್ರೀಯ ಮಹಿಳಾ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಮಂಗಳವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಒಡಿಶಾ 2–0ಯಿಂದ ಕರ್ನಾಟಕ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಪೂನಂ ಬಾರ್ಲಾ (34ನೇ ನಿಮಿಷ) ಮತ್ತು ಅಸೀಮ ಕಾಂಚನ್ ಬಾರ್ಲಾ (59ನೇ ನಿ.) ಗೋಲು ಗಳಿಸಿದರು. ಉಭಯ ತಂಡಗಳು ಆರಂಭದಿಂದಲೇ ಜಿದ್ದಾಜಿದ್ದಿ ಪೈಪೋಟಿ ನಡೆಸಿದವು. ಆದರೆ ಎರಡೂ ಕಡೆಯ ಡಿಫೆನ್ಸ್ ವಿಭಾಗ ಬಲಿಷ್ಠವಾಗಿದ್ದರಿಂದ ಮೊದಲಾರ್ಧದವರೆಗೆ ಯಾವುದೇ ಗೋಲು ದಾಖಲಾಗಲಿಲ್ಲ. ಪಂದ್ಯದ 3ನೇ ಕ್ವಾರ್ಟರ್‌ನಲ್ಲಿ ಪೂನಂ ಗೋಲಿನ ಖಾತೆ ತೆರೆದರು. ಬಳಿಕ ಅಸೀಮ ಕೂಡ ಕಾಲ್ಚಳಕ ತೋರಿ ಒಡಿಶಾ ಗೆಲುವು ಖಚಿತಪಡಿಸಿದರು.

3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಜಾರ್ಖಂಡ್ 3–2ರಿಂದ ಹರಿಯಾಣ ತಂಡವನ್ನು ಮಣಿಸಿತು.


ಬೆಂಗಳೂರಿನಲ್ಲಿ ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಜಯಗಳಿಸಿದ ಭಾರತ ತಂಡದ ಸದಸ್ಯ ಲಕ್ಷ್ಯ ಸೇನ್ ಅವರಿಗೆ ₹ 5 ಲಕ್ಷ ಬಹುಮಾನದ ಚೆಕ್ ವಿತರಿಸಿದರು. ಈ ಸಂದರ್ಭದಲ್ಲಿ ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ ಇದ್ದರು. ಸೇನ್ ಅವರ ತರಬೇತುದಾರ ವಿಮಲ್ ಕುಮಾರ್ ಹಾಗೂ ತಂದೆ ಬೀರೇನ್ ಕುಮಾರ ಸೇನ್, ತಾಯಿ ನಿರ್ಮಲಾ ಸೇನ್ ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬ್ಯಾಡ್ಮಿಂಟನ್: ಮುಖ್ಯ ಸುತ್ತಿಗೆ ಮಾಳವಿಕಾ

ಬ್ಯಾಂಕಾಕ್ (ಪಿಟಿಐ): ಭಾರತದ ಅಸ್ಮಿತಾ ಚಲಿಹಾ ಮತ್ತು ಮಾಳವಿಕಾ ಬನ್ಸೋಡ್ ಅವರು ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮುಖ್ಯ ಸುತ್ತಿಗೆ ಪ್ರವೇಶಿಸಿದ್ದಾರೆ.

ಮಹಿಳಾ ಸಿಂಗಲ್ಸ್ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಅಸ್ಮಿತಾ 21-16, 21-18ರಿಂದ ಅಮೆರಿಕದ ಜೆನ್ನಿ ಗೈ ಅವರನ್ನು ಸೋಲಿಸಿದರೆ, ಮಾಳವಿಕಾ ಅವರು 21-18, 21-8ರಿಂದ ಭಾರತದ ಅನುಪಮಾ ಉಪಾಧ್ಯಾಯ ಅವರನ್ನು ಪರಾಭವಗೊಳಿಸಿದರು. ಪ್ರಿಯಾಂಶು ರಾಜಾವತ್, ಕಿರಣ್ ಜಾರ್ಜ್ ಮತ್ತು ಶುಭಂಕರ್ ಡೇ ಅವರು ಮುಖ್ಯ ಸುತ್ತು ಪ್ರವೇಶಿಸುವಲ್ಲಿ ವಿಫಲರಾದರು.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು
ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ/ಪುನರ್‌ರಚನೆ ಆಗುವ ಸಾಧ್ಯತೆ ಇದೆಯೇ?
ಜನಾಭಿಪ್ರಾಯ:

ಹೌದು	ಇಲ್ಲ
54%	46%